ನಿಯಮ ೭೮ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲ ಪರಿಸ್ಥಿತಿಯ ಬಗ್ಗೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಬರಗಾಲದ ವಿಚಾರದಲ್ಲಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ.

ದುರಾದೃಷ್ಟವಶಾತ್, ರಾಜ್ಯದಲ್ಲಿ ಈ ವರ್ಷವೂ ಕೂಡ, ಸತತವಾಗಿ ಐದನೇ ಬಾರಿಗೆ ತೀವ್ರ ಅಭಾವ ಪರಿಸ್ಥಿತಿ ಬಂದೊದಗಿದೆ. ಹೋದ ವರ್ಷ ಅಂದರೆ, ೧೯೮೬–೮೭ರಲ್ಲಿಯೂ ಕೂಡ ಅಲ್ಲಲ್ಲಿ ಅಭಾವ ಪರಿಸ್ಥಿತಿ ಇದ್ದರೂ ಕೂಡ, ಒಟ್ಟಾರೆ ಪರಿಸ್ಥಿತಿಯು ಅಷ್ಟೊಂದು ಗಂಭೀರವಾಗಲಿಲ್ಲವಾದ ಕಾರಣ, ೧೯೮೬–೮೭ರಲ್ಲಿ ಮಳೆ ಪರಿಸ್ಥಿತಿಯೂ ಉತ್ತಮಗೊಂಡು, ರಾಜ್ಯದಲ್ಲಿ ಸುಭಿಕ್ಷ ಪರಿಸ್ಥಿತಿಯೂ ಉಂಟಾಗುವ ಹಾಗೂ ಈ ಸುಭಿಕ್ಷ ಪರಿಸ್ಥಿತಿಯಿಂದಾಗಿ, ಸತತವಾಗಿ ಕಳೆದ ನಾಲ್ಕು ವರ್ಷಗಳಿಂದ ಇದ್ದ ಬರಗಾಲ ಪರಿಸ್ಥಿತಿಯಿಂದ ತೊಂದರೆಗೊಳಗಾಗಿದ್ದ ರಾಜ್ಯದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವ ಆಶಾಭಾವನೆಯನ್ನು ರಾಜ್ಯ ಸರ್ಕಾರವು ಹೊಂದಿತ್ತು. ಆದರೆ, ಮಳೆಯ ವಿಫಲತೆಯಿಂದಾಗಿ, ಈ ಆಶಾಭಾವನೆಯು ಹುಸಿಯಾಗಿ, ಮತ್ತೊಮ್ಮೆ ಇಡೀ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ.

ರಾಜ್ಯದಲ್ಲಿ ಈ ವರ್ಷ. ಏಪ್ರಿಲ್, ಮೇ ತಿಂಗಳುಗಳಲ್ಲಿ ಬರಬೇಕಾಗಿದ್ದ ಮಾನ್‌ಸೂನ್ ಪೂರ್ವ ಮಳೆಯೂ ಕೂಡ ಕಾಲಕಾಲಕ್ಕೆ ಸರಿಯಾಗಿ ಆಗಲಿಲ್ಲ. ಈ ಅವಧಿಯಲ್ಲಿ ರಾಜ್ಯದ ಒಟ್ಟು ೧೭೫ ತಾಲೂಕುಗಳ ೧೪೨ ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿದೆ. ಹೋದ ವರ್ಷಕ್ಕೆ ಹೋಲಿಸಿದರೆ, ಆ ವರ್ಷದ ಇದೇ ಅವಧಿಯಲ್ಲಿ ೧೨೫ ತಾಲ್ಲೂಕುಗಳಲ್ಲಿ ಮಾತ್ರ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಿತ್ತು. ಹೀಗಾಗಿ, ಕಳೆದ ವರ್ಷಕ್ಕೆ ಹೋಲಿಸಲಾಗಿ. ಈ ವರ್ಷ ಮಾನ್‌ಸೂನ್ ಪೂರ್ವ ಮಳೆಯೂ ಅತಿ ಕಡಿಮೆ ಪ್ರಮಾಣದಲ್ಲಿ ಆಗಿ, ರಾಜ್ಯದ ದಕ್ಷಿಣದ ಜಿಲ್ಲೆಗಳಲ್ಲಿ ನೆಲ ಹದ ಮಾಡುವ ಮತ್ತು ಉಳುಮೆ ಕೆಲಸಗಳು ಕಾಲಕ್ಕೆ ಸರಿಯಾಗಿ ಆಗಲಿಲ್ಲ.

ಜೂನ್ ತಿಂಗಳ ಮೊದಲನೆ ವಾರದಲ್ಲಿ ನೈರುತ್ಯ ಮಾರುತವು (ಸೌತ್-ವೆಸ್ಟ್ ಮಾನ್‌ಸೂನ್(ರಾಜ್ಯದಲ್ಲಿ ಅಡಿಯಿಟ್ಟರೂ, ಕೆಲದಿನಗಳ ನಂತರ ಈ ಮಳೆಯ ಪರಿಸ್ಥಿತಿಯೂ ಡೋಲಾಯಮಾನ ಸ್ಥಿತಿಯಲ್ಲಿತ್ತು. ನೈರುತ್ಯ ಮಾರುತವು ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ದಿನಾಂಕ ೩–೬–೧೯೮೭ರಂದು, ಹಾಗೂ ರಾಜ್ಯದ ಉತ್ತರದ ಒಳನಾಡಿನಲ್ಲಿ ದಿನಾಂಕ ೯–೬–೧೯೮೭ ರಂದು ಅಡಿಯಿಟ್ಟಿತು. ಹೀಗಾಗಿ ಜೂನ್ ತಿಂಗಳಲ್ಲಿ ಮಳೆಯು ಸರ್ವೇಸಾಮಾನ್ಯವಾಗಿ ಸಮಾಧಾನಕರವಾಗಿದ್ದರೂ ಕೂಡ, ಜುಲೈ ತಿಂಗಳಲ್ಲಿ ಮಳೆಯು ಭಾರಿ ಪ್ರಮಾಣದಲ್ಲಿ ವಿಫಲಗೊಂಡು. ರಾಜ್ಯದ ಎಲ್ಲೆಡೆ ಆತಂಕ ಮೂಡಿಸಿತು. ಈ ತಿಂಗಳಲ್ಲಿ ರಾಜ್ಯದ ಒಟ್ಟು ೧೭೫ ತಾಲ್ಲೂಕುಗಳಲ್ಲಿ ೧೬೪ ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತ ಅತಿ ಕಡಿಮೆ ಮಳೆಯಾಯಿತು. ಈ ತಿಂಗಳಿನ ಸರಾಸರಿ ಸಾಮಾನ್ಯ ಮಳೆಯ ಪ್ರಮಾಣವಾಗಿ ೨೮೧ ಮಿಲಿ ಮೀಟರ್ ಮಳೆಗೆ ವಿರುದ್ಧವಾಗಿ ರಾಜ್ಯದಲ್ಲಿ ಆದ ಒಟ್ಟು ಮಳೆಯು ಕೇವಲ ೧೨೫ ಮಿಲಿಮೀಟರ್ ನಷ್ಟಿದ್ದು, ಶೇಕಡ ೫೫ರಷ್ಟು ಕಡಿಮೆ ಅಂಶ ಮಳೆಯಾಯಿತು. ಈ ವರ್ಷದ ಏಪ್ರಿಲ್‌ನಿಂದ ಜುಲೈ ಅಂತ್ಯದವರೆಗೆ ಆಗಬೇಕಾದ ಒಟ್ಟು ಸಾಮಾನ್ಯ ಮಳೆಯು ೪೫೭ ಮಿಲಿಮೀಟರ್ ಆಗಬೇಕಿತ್ತು. ಆದರೆ ಈ ವರ್ಷದಲ್ಲಿ ಇದೇ ಅವಧಿಯಲ್ಲಿ ಆದ ಮಳೆಯ ಒಟ್ಟು ಪ್ರಮಾಣ ಕೇವಲ ೩೧೫ ಮಿಲಿಮೀಟರ್ ಮಾತ್ರ. ಹೀಗಾಗಿ ಈ ವರ್ಷ ಏಪ್ರಿಲ್–ಜುಲೈ ತಿಂಗಳ ಅವಧಿಯಲ್ಲಿ ಉಂಟಾದ ಮಳೆಯ ಕೊರತೆಯು ಶೇಕಡ ೩೧ ರಷ್ಟಾಗಿತ್ತು. ಇದರ ಒಟ್ಟಾರೆ ಪ್ರಮಾಣವೆಂದರೆ, ಈ ಅವಧಿಯಲ್ಲಿ ಒಟ್ಟು ೧೧೩ ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತ ತೀರ ಮಳೆ ಕಡಿಮೆಯಾಗಿತ್ತು. ಇದರ ಪರಿಣಾಮವಾಗಿ, ಜುಲೈ ಅಂತ್ಯದವರೆಗೆ ರಾಜ್ಯದ ಒಟ್ಟು ಮುಂಗಾರು ವಿಸ್ತೀರ್ಣವಾದ ೬೯.೯೫ ಲಕ್ಷ ಹೆಕ್ಟೇರ್ ಭೂಮಿಯಲ್ಲಿ. ಕೇವಲ ೪೩.೭೮ ಲಕ್ಷ ಹೆಕ್ಟೇರುಗಳಲ್ಲಿ ಮಾತ್ರ ಬಿತ್ತನೆಯಾಗಿತ್ತು (ಅಂದರೆ ಪ್ರತಿಶತ ೬೨.೬ ಮಾತ್ರ).

ಪ್ರಸಕ್ತ ಮುಂಗಾರಿನಲ್ಲಿ, ಮೇ ತಿಂಗಳ ಮಧ್ಯ ಭಾಗದವರೆಗೂ, ನೆಲ ಹದ ಮಾಡುವ ಹಾಗೂ ಉಳುಮೆ ಮಾಡುವ ಕೆಲಸವು ಸ್ಥಗಿತಗೊಂಡಿತ್ತು. ಹೀಗಾಗಿ ಮುಂಗಾರಿನಲ್ಲಿ ಮುಂಚಿತವಾಗಿ ಬಿತ್ತನೆಯಾಗಬೇಕಾಗಿದ್ದ ಕ್ಷೇತ್ರಗಳಲ್ಲಿ ಬಿತ್ತನೆಯು ಬಹಳಷ್ಟು ಕುಂಠಿತವಾಯಿತು. ಮೇ ಎರಡನೇ ವಾರದ ನಂತರ ಬಂದ ಮಳೆಯಿಂದಾಗಿ, ಕೃಷಿ ಕಾರ್ಯಕ್ರಮಗಳು ಕೊಂಚ ಮಟ್ಟಿಗೆ ಸಾಧ್ಯವಾಗಿ ಮುಂದ್ಯ

ಮರಿದವು. ಜೂನ್ ತಿಂಗಳಿನಲ್ಲಿ ಮಳೆಯು ಹೆಚ್ಚು ಕಡಿಮೆ ಸಾಮಾನ್ಯದಷ್ಟು ಆದರೂ ಕೂಡ ಜುಲೈ ತಿಂಗಳಲ್ಲಿ ಮಳೆ ಪೂರ್ತಿ ಕೈಕೊಟ್ಟಿದ್ದರಿಂದಾಗಿ, ರಾಜ್ಯದ ಹಲವಾರು ಪ್ರದೇಶಗಳಲ್ಲಿ, ಉಳುಮೆ, ಬಿತ್ತನೆ ಹಾಗೂ ನಾಟಿ ಕಾರ್ಯಕ್ರಮವು ಪೂರ್ತಿಯಾಗಿ ಸ್ಥಗಿತಗೊಂಡವು. ಹೀಗಾಗಿ, ಸಾಮಾನ್ಯ ವ್ಯವಸಾಯ ಕಾರ್ಯಕ್ರಮಗಳು ಸಾಧ್ಯವಾಗದೆ ಪರಿಸ್ಥಿತಿ ಚಿಂತಾಜನಕವಾಗಿತ್ತು. ಬೆಂಗಳೂರು ಜಿಲ್ಲೆಯಲ್ಲಿ ಬಿತ್ತನೆಯನ್ನು ಕೇವಲ ಪ್ರತಿಶತ ೧ ರಿಂದ ೧೮ ರಷ್ಟು ಕ್ಷೇತ್ರದಲ್ಲಿಯೂ, ತುಮಕೂರು ಜಿಲ್ಲೆಯಲ್ಲಿ ಪ್ರತಿಶತ ೦.೮ ರಿಂದ ೮.೪ರಷ್ಟು, ಕೋಲಾರದಲ್ಲಿ ೧ ರಿಂದ ೨೩ ರಷ್ಟು, ಕೊಡಗು ಜಿಲ್ಲೆಯಲ್ಲಿ ೨ ರಿಂದ ೧೬ರಷ್ಟು ಕ್ಷೇತ್ರದಲ್ಲಿ ಮಾತ್ರ ಮುಗಿಸಲಾಗಿತು. ಇನ್ನುಳಿದ ಜಿಲ್ಲೆಗಳಲ್ಲಿಯೂ ಕೂಡ ಬಿತ್ತನೆ ಹಾಗೂ ನಾಟಿ ಕಾರ್ಯವು ನಿರಾಶಾದಾಯಕವಾಗಿತ್ತು. ಈ ಬಾರಿಯ ಪ್ರಕೃತಿ ವಿಕೋಪದ ವೈಪರೀತ್ಯವೇನೆಂದರೆ, ಮಲೆನಾಡು ಜಿಲ್ಲೆಗಳೆಲ್ಲಾ ಹಿಂದೆಂದೂ ಕಾಣದಂತಹ ಅತಿ ವಿರಳ ಮಳೆಯಾಗಿರುವುದು. ಕೊಡಗು, ಚಿಕ್ಕಮಗಳೂರು, ಹಾಸನ ಶಿವಮೊಗ್ಗ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳಲ್ಲಿ ಅತಿ ಕಡಿಮೆ ಪ್ರಮಾಣದ ಮಳೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ಜಿಲ್ಲೆಗಳಲ್ಲಿಯೂ ಕೂಡಾ ಕುಡಿಯುವ ನೀರಿನ ಅಭಾವ ಉಂಟಾಗಬಹುದಾದ ವಿಷಮ ಪರಿಸ್ಥಿತಿ ಉದ್ಭವಿಸುವ ಸಾಧ್ಯತೆ ಇದೆ.

೧೯೮೭ರ ಏಪ್ರಿಲ್ ಮಾಹೆಯ ಅಂತ್ಯದ ವೇಳೆಗೆ ೫೫೪೧ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿತ್ತು. ಮೇ ತಿಂಗಳ ಅಂತ್ಯದ ವೇಳೆಗೆ ೨.೨೭ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. ಜೂನ್ ತಿಂಗಳ ಅಂತ್ಯಕ್ಕೆ ಒಟ್ಟು ೧೯.೫೨ ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಕಾರ್ಯ ಮುಗಿದಿತ್ತು. ಹೋದ ವರ್ಷದ ಇದೇ ಅವಧಿಯ ಹೊತ್ತಿಗೆ ಒಟ್ಟು ೨೪.೭೨ ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯಾಗಿತ್ತು. ಜುಲೈ ತಿಂಗಳ ಹೊತ್ತಿಗೆ ಶೇಕಡ ೬೨.೬೧ ಪ್ರದೇಶದಲ್ಲಿ ಬಿತ್ತನೆಯಾಗಿತ್ತು. (ಒಟ್ಟು ಮುಂಗಾರಿ ವಿಸ್ತೀರ್ಣ ೬೯.೯೫ ಲಕ್ಷ ಹೆಕ್ಟೇರುಗಳು).

ಇನ್ನು ಬೆಳೆದು ನಿಂತ ಬೆಳೆಗಳ ಪರಿಸ್ಥಿತಿಯ ಬಗ್ಗೆ ತಿಳಿಸಬೇಕೆಂದರೆ, ನೀರಾವರಿಯಿಂದ ಪ್ರಯೋಜನ ಪಡೆಯುವ ಮುಂಗಾರಿ ಬೆಳೆಗಳು, ರಾಜ್ಯದ ಎಲ್ಲೆಡೆ ಮಳೆ ಇಲ್ಲದೆ ಒಣಗಿ ಉದುರಲಿಕ್ಕೆ ಆರಂಭವಾಗಿದ್ದುವು. ಜೋಳ, ರಾಗಿ, ಮೆಕ್ಕೆ ಜೋಳ, ಕಡಲೆಕಾಯಿ, ಬೇಳೆಕಾಳುಗಳು, ಸೂರ್ಯಕಾಂತಿ ಮುಂತಾದ ಬೆಳೆಗಳು ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಧಕ್ಕೆಗೊಳಗಾಗಿವೆ. ಹೀಗೆ ಧಕ್ಕೆಗೆಳಗಾಳಗಾದ ಕ್ಷೇತ್ರ ಒಟ್ಟು ೧.೬೮ ಲಕ್ಷ ಹೇಕ್ಟೇರ್‌ಗಳಾಗಿತ್ತು. ಜಿಲ್ಲಾವಾರು, ಒಟ್ಟು ವಿಸ್ತೀರ್ಣ, ಬಿತ್ತನೆಯಾದ ಕ್ಷೇತ್ರ ಹಾಗೂ ಧಕ್ಕೆಗೊಳಗಾದ ಬೆಳೆಯ ಕ್ಷೇತ್ರ ಮುಂತಾದ ವಿವರಗಳನ್ನು ಅನುಬಂಧ 'ಅ'ನಲ್ಲಿ ನೋಡಬಹುದು.

ಈ ಸಾಲಿನ ಮಳೆಯ ವೈಪರೀತ್ಯ ಹಾಗೂ ಮಳೆಯ ವಿಫಲತೆಯಿಂದಾಗಿ ರಾಜ್ಯದ ಮುಖ್ಯ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಅಣೆಕಟ್ಟುಗಳಲ್ಲಿ. ಈಚಿನ ಹಲವು ವರ್ಷಗಳಲ್ಲಿಯೇ ಅತಿ ಕಡಿಮೆ ನೀರಿನ ಮಟ್ಟ ಮುಟ್ಟಿದ್ದವು. ಹಾಗೆಯೇ ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನಾ ಅಣೆಕಟ್ಟುಗಳಲ್ಲಿಯೂ ಕೂಡ. ಅತಿ ಕಡಿಮೆ ಪ್ರಮಾಣದ ನೀರು ಶೇಖರವಾಯಿತು. ಆಗಸ್ಟ್ ತಿಂಗಳ ಮೊದಲೆರಡು ವಾರಗಳಲ್ಲಿ ಸಾಧಾರಣವಾಗಿ ಮಳೆಯು ಚೆನ್ನಾಗಿ ಆಗಿದ್ದರೂ ಕೂಡ, ಈ ಎಲ್ಲಾ ಅಣೆಕಟ್ಟುಗಳಲ್ಲಿಯೂ ಸಾಮಾನ್ಯಕ್ಕಿಂತ ಅತಿ ಕಡಿಮೆ, ಅಂದರೆ ಸಾಮಾನ್ಯ ಶೇಖರಣೆಯ ಪ್ರತಿಶತ ೧೦ ರಿಂದ ೩೦ ರಷ್ಟೇ ನೀರು ಶೇಖರಣೆಯಾಗಿರುವುದನ್ನು ನೋಡಿದರೆ ಮುಂದೆ ನೀರಾವರಿಗಾಗಿ ಹಾಗೂ ಕುಡಿಯುವ ನೀರಿಗಾಗಿ ಅನುಭವಿಸಬೇಕಾಗಿ ಬರಬಹುದಾದ ಬವಣೆಯನ್ನು ನಾವು ಕಲ್ಪನೆ ಮಾಡಿಕೊಳ್ಳಬಹುದು. ಇದೇ ರೀತಿ ರಾಜ್ಯದ ವಿದ್ಯುಚ್ಛಕ್ತಿಯ ಉತ್ಪಾದನೆಯೂ ಕೂಡ ಅತಿ ಹೆಚ್ಚಿನ ಪ್ರಮಾಣದಲ್ಲಿ ಕುಂಠಿತವಾಗುವ ಸಂಭವವಿದೆ, ಇದಕ್ಕೆ ಲಗತ್ತಿಸಿದ ಅನುಬಂಧ 'ಬಿ'ನಲ್ಲಿ ರಾಜ್ಯದ ಹಲವಾರು ದೊಡ್ಡ ನೀರಾವರಿ ಅಣೆಕಟ್ಟುಗಳಲ್ಲಿನ ನೀರಿನ ಶೇಖರಣೆಯ ಅಂಕಿ ಅಂಶಗಳನ್ನು ನೀಡಲಾಗಿದೆ.

ಈ ಎಲ್ಲಾ ಅಂಶಗಳಿಂದಾಗಿ ರಾಜ್ಯದ ಬಹುತೇಕ ಕಡೆ ತೀವ್ರ ಅಭಾವ ಪರಿಸ್ಥಿತಿ ಉದ್ಭವಿಸಿದೆ. ಒಟ್ಟಾರೆ, ರಾಜ್ಯದ ದಕ್ಷಿಣ ಕನ್ನಡ ಮತ್ತು ಬೀದರ್ ಜಿಲ್ಲೆಗಳನ್ನು ಬಿಟ್ಟು ಉಳಿದ ೧೮ ಜಿಲ್ಲೆಗಳಲ್ಲಿ ಒಟ್ಟು ೧೨೭ ತಾಲ್ಲೂಕುಗಳಲ್ಲಿನ ೧೬೮೫ ಹಳ್ಳಿಗಳು ಹೀಗೆ ಅಭಾವ ಪೀಡಿತವಾಗಿವೆ. ರಾಜ್ಯ ಸರ್ಕಾರವು ಈ ಹದಗೆಡುತ್ತಿರುವ ಪರಿಸ್ಥಿತಿಯನ್ನು ನಿಗಾ ಇಟ್ಟು ನೋಡುತ್ತಿದ್ದು, ಪರಿಸ್ಥಿತಿ ಬಿಗಡಾಯಿಸಿದ್ದನ್ನು ಮನಗಂಡ ಸರ್ಕಾರವು ಬಾಧಿತ ಜನ ಹಾಗೂ ಜಾನುವಾರುಗಳಿಗೆ ಈ ಕಷ್ಟದ ಪರಿಸ್ಥಿತಿಯಲ್ಲಿ ತಕ್ಷಣದ ಪರಿಹಾರ ಒದಗಿಸುವ ದಿಸೆಯಲ್ಲಿ ಮಗ್ನವಾಗಿದೆ. ಆದುದರಿಂದಲೇ, ಈ ಪ್ರಸಕ್ತ ವರ್ಷದ ಬೇಸಿಗೆ

ತಿಂಗಳುಗಳಾದ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಕುಡಿಯುವ ನೀರಿನ ಭವಣೆ ಉಲ್ಬಣಿಸುತ್ತಿದೆಯೆಂದು ಮನಗಂಡ ಸರ್ಕಾರವು, ಕುಡಿಯುವ ನೀರು ಮತ್ತು ಪ್ರಾಣಿಗಳ ಮೇವಿಗಾಗಿ ಹಾಗೂ ಅವಶ್ಯವಿದ್ದಡೆ ಉದ್ಯೋಗ ಸೃಜನೆ ಕಾರ್ಯಕ್ರಮಗಳಿಗಾಗಿ ಒಟ್ಟು ೭.೦೫ ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಿತು. ಹಾಗೂ ಎಲ್ಲೆಲ್ಲಿ ಅವಶ್ಯವಿತ್ತೋ, ಅಲ್ಲಲ್ಲಿ ಹೊಸ ಕೊಳವೆ ಬಾವಿಗಳನ್ನು ತೋಡುವುದು ಮತ್ತಿನ್ನಿತರೇ ಕುಡಿಯುವ ನೀರಿನಲ್ಲಿ ಕೆಲಸಗಳನ್ನು ತೆಗೆದುಕೊಳ್ಳುವುದರ ಜೊತೆಗೆ, ಜಿಲ್ಲೆಯಲ್ಲಿ ಮೇವಿನ ಪರಿಸ್ಥಿತಿಯು ಉಲ್ಬಣಿಸಿದ್ದುದರಿಂದ ಅಲ್ಲಿ ಮೇವನ್ನು ದೊರೆಯುವ ಕಡೆಯಿಂದ ಕೊಂಡು ಅಗತ್ಯವಿದ್ದ ರೈತರಿಗೆ ದೊರಕಿಸಿಕೊಟ್ಟಿದ್ದುದರ ಜೊತೆಗೆ, ಆ ಜಿಲ್ಲೆಯಲ್ಲಿ ಎರಡು ಗೋಶಾಲೆಗಳನ್ನು ತೆರೆಯಲಾಯಿತು.

ಈ ಬಾರಿ ಮುಂಗಾರಿನ ಪರಿಸ್ಥಿತಿಯು ಕಳವಳಕಾರಿಯಾಗಿದ್ದುದ್ದನ್ನು ಮನಗೊಂಡ ಸರ್ಕಾರವು, ಎಲ್ಲಾ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಗೂ ಹಾಗೂ ಜಿಲ್ಲಾಧಿಕಾರಿಗಳಿಗೂ. ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಉದ್ಭವಿಸಿರುವ ಕಡೆಗಳಲ್ಲಿ ಯೋಜನಾ ಉದ್ಯೋಗ ಕಾರ್ಯಕ್ರಮಗಳಾದ, ಎನ್. ಆರ್. ಇ. ಪಿ., ಆರ್. ಎಲ್. ಇ. ಜಿ. ಪಿ., ಡಿ. ಪಿ. ಎ. ಪಿ. ಯಲ್ಲಿ ದೊರೆಯುವ ಹಣವನ್ನು ಉಪಯೋಗಿಸಿಕೊಂಡು, ಉದ್ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಾಧಿತ ಜನತೆಗೆ ಕೆಲಸವನ್ನು ಒದಗಿಸಿಕೊಡಬೇಕೆಂದು, ಹಾಗೂ ಎಲ್ಲೆಲ್ಲಿ ಅವಶ್ಯವಿದೆಯೋ ಅಲ್ಲಲ್ಲಿ ಮೇವು ಮತ್ತು ಕುಡಿಯುವ ನೀರಿನ ಸರಬರಾಜು ಮಾಡಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ಮುಂಗಾರಿನಲ್ಲಿ ಪರಿಸ್ಥಿತಿಯು, ಅದರಲ್ಲಿಯೂ ಮುಂದಿನ ತಿಂಗಳುಗಳಲ್ಲಿ ಉಲ್ಬಣಗೊಳ್ಳುವ ಅಂಶವನ್ನು ಮನಗಂಡ ಸರ್ಕಾರವು, ಈ ಪರಿಸ್ಥಿತಿಯನ್ನು ಸಮರೋಪಾದಿಯಲ್ಲಿ ಎದುರಿಸಲು ಸಜ್ಜಾಗಿದ್ದು, ಈ ಕೆಳಕಂಡ ಪರಿಹಾರ ಕಾರ್ಯಕ್ರಮಗಳನ್ನು ಒದಗಿಸಲು ಬದ್ಧವಾಗಿದೆ.

ಅ) ಅಭಾವ ಪರಿಸ್ಥಿತಿಯಿಂದ ತಮ್ಮ ಜಮೀನುಗಳಲ್ಲಿ ಕೆಲಸ ಕಳೆದುಕೊಂಡು, ಸರ್ಕಾರದ ವತಿಯಿಂದ ಕೆಲಸವನ್ನು ಅರಸಿ ಬರುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗವನ್ನು ಒದಗಿಸಿಕೊಡುವುದು,

ಆ) ಬಾಧಿತ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸರಬರಾಜು ಮಾಡುವುದು.

ಇ) ಜಾನುವಾರುಗಳಿಗೆ ಮೇವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು, ಹಾಗೂ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿ ಗೋಶಾಲೆಗಳನ್ನು ತೆರೆದು ಗೋಸಂರಕ್ಷಣೆ ಮಾಡುವುದು, ಅಗತ್ಯವಿದ್ದೆಡೆ ಮೇವನ್ನು ಬೆಳೆಸುವುದು, ಹಾಗೂ

ಈ) ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಆಹಾರ ಧಾನ್ಯಗಳನ್ನು ಒದಗಿಸಿಕೊಡುವುದು.

ಈ ಎಲ್ಲಾ ಪರಿಹಾರ ಕ್ರಮಗಳನ್ನು ಚುರುಕುಗೊಳಿಸುವ ಸಲುವಾಗಿ ಸರ್ಕಾರವು ಜಾಗೃತವಾಗಿದ್ದು, ಬೇಕಾದ ಹಣವನ್ನು ಜೋಡಿಸಿಕೊಂಡು, ಬಾಧಿತ ಜನತೆಗೆ ಈ ಕಷ್ಟದ ಸಮಯದಲ್ಲಿ ನೆರವಿಗೆ ಬರಲು ಎಲ್ಲಾ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತಿದೆ. ಈ ಕೆಲದಿನಗಳ ಹಿಂದೆ, ಈ ರಾಜ್ಯದಲ್ಲಷ್ಟೇ ಏಕೆ, ಈ ಬಾರಿ ರಾಷ್ಟ್ರದ, ಅದರಲ್ಲೂ ಉತ್ತರದ ರಾಜ್ಯಗಳಲ್ಲಿ ಮಳೆಯು ಭಾರಿ ಪ್ರಮಾಣದಲ್ಲಿ ವಿಫಲಗೊಂಡಿದ್ದು, ದೇಶದ ಎಲ್ಲಾ ಕಡೆ (ಭೀಕರ ಬರಗಾಲ) ಉದ್ಭವಿಸಿರುವ ಹಿನ್ನೆಲೆಯಲ್ಲಿ, ಪ್ರಧಾನಮಂತ್ರಿಯವರು ನಮ್ಮ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದು, ಈ ಸಮಯದಲ್ಲಿ ಸೂಕ್ತವಾದ ಎಲ್ಲಾ ಬರ ಪರಿಹಾರ ಕಾರ್ಯಕ್ರಮಗಳನ್ನು ಚುರುಕುಗೊಳಿಸಿ ಜನತೆಗೆ ಪರಿಹಾರ ಒದಗಿಸಿಕೊಡಬೇಕೆಂದು ತಿಳಿಸಿದ್ದಾರೆ. ಹಾಗೂ ಈ ಬಗ್ಗೆ ಮಂತ್ರಿಗಳ ಒಂದು ಸಮಿತಿಯನ್ನು ರಚಿಸಿ, ಪರಿಸ್ಥಿತಿಯನ್ನು ಆಗಿಂದಾಗ್ಗೆ ಸಮೀಕ್ಷಿಸಿ, ಪರಿಹಾರ ಕ್ರಮಗಳ ಉಸ್ತುವಾರಿಕೆಯನ್ನು ನೋಡಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಪ್ರಧಾನ ಮಂತ್ರಿಗಳ ಈ ಪತ್ರದಲ್ಲಿನ ಸಲಹೆ ಸೂಚನೆಗಳನ್ನು ನಮ್ಮ ಸರಕಾರವು ಪರಿಶೀಲಿಸಿದ್ದು, ಈ ಬಗ್ಗೆ ಕಳೆದ ನಾಲ್ಕು ವರ್ಷಗಳ ಅಭಾವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕಾರ್ಯ

ಕ್ರಮಗಳನ್ನು, ಅದರಲ್ಲೂ ಹೊಚ್ಚ ಹೊಸದಾಗಿ ನಾವೇ ಜಾರಿಗೊಳಿಸಿದ ಗೋಶಾಲೆ, ಮೇವು ಬ್ಯಾಂಕ್ ಇತ್ಯಾದಿ ಕಾರ್ಯಕ್ರಮಗಳ ತಿಳುವಳಿಕೆ ಕೊಟ್ಟು, ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಮರು ಪತ್ರವನ್ನೂ ಕೂಡ ಬರೆದಿದ್ದಾರೆ. ಈ ಸಂಬಂಧದಲ್ಲಿ ನಾನು ಈ ಸದನದಲ್ಲಿ ತಿಳಿಸಬಯಸುವ ವಿಷಯವೆಂದರೆ, ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬಂದ ಸತತವಾದ ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಬೇಕಾದ ಕ್ರಮಗಳ ಸಮೀಕ್ಷಣೆ ಮಾಡಿ ತತ್ಸಂಬಂಧವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವಿಮರ್ಶಿಸಿ ನಿರ್ದೇಶನ ನೀಡಲು, ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಲಾಗಿದ್ದು, ಅದು ಕಳೆದ ನಾಲ್ಕು ವರ್ಷಗಳಿಂದ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದ್ದು, ಅಭಾವ ಪರಿಹಾರ ಕ್ರಮಗಳ ಉಸ್ತುವಾರಿಕೆಯನ್ನು ನೋಡಿಕೊಳ್ಳುವ ಬಗ್ಗೆ ಒಳ್ಳೆಯ ಅನುಭವ ಹೊಂದಿರುವ ಸಚಿವರನ್ನು ಹೊಂದಿದೆ. ಈ ಸಮಿತಿಯು, ಕಂದಾಯ ಹಾಗೂ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಆರೋಗ್ಯ ಸಚಿವರು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು, ಕೃಷಿ ಸಚಿವರು ಹಾಗೂ ಸಹಕಾರಿ ಸಚಿವರನ್ನು ಸದಸ್ಯರನ್ನಾಗಿ ಹೊಂದಿದೆ. ಈ ಸಮಿತಿಯೇ ಇನ್ನು ಮುಂದೆಯೂ ಪರಿಹಾರ ಕ್ರಮಗಳ ಯೋಜನೆ ಹಾಗೂ ಅವುಗಳ ಚಾಲನೆಗ ಬೇಕಾದ ಮಾರ್ಗ ದರ್ಶನದನ್ನು ನೀಡುವುದೆಂದು ಕೂಡ ಮುಖ್ಯಮಂತ್ರಿಯವರ ಉತ್ತರದಲ್ಲಿ ತಿಳಿಸಲಾಗಿದೆ.

ಇದಲ್ಲದೇ, ಈ ವರುಷದಿಂದ ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವದ ವಿಕೇಂದ್ರೀಕರಣದ ಅಂಗವಾಗಿ, ಜಿಲ್ಲಾ ಪರಿಷತ್ತು ಮತ್ತು ಮಂಡಳ ಪಂಚಾಯಿತಿಗಳು ಅಸ್ತಿತ್ವದಲ್ಲಿ ಬಂದಿದ್ದು, ಬರಪರಿಹಾರ ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಕಾರ್ಯಚರಣೆಗಳನ್ನು ಈ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಇದಕ್ಕಾಗಿ ಬೇಕಾಗುವ ಹಣವನ್ನೂ ಕೂಡ ಈ ವರುಷದಿಂದ ನೇರವಾಗಿ ಜಿಲ್ಲಾ ಪರಿಷತ್ತುಗಳಿಗೇ ಬಿಡುಗಡೆ ಮಾಡಲಾಗುತ್ತಿದೆ. ಇಂತಹ ಈಗಿನ ಕಾರ್ಯವಿಧಾನದಿಂದ ಈ ಕಾರ್ಯಕ್ರಮಗಳ ಫಲಗಳು ನೇರವಾಗಿ ಬಾಧಿತ ಜನತೆಗೆ ಇನ್ನೂ ಶೀಘ್ರವಾಗಿ ಹಾಗೂ ಪರಿಣಾಮಕಾರಿ ರೀತಿಯಲ್ಲಿ ತಲುಪುವುದೆಂದು ಸರಕಾರ ವಿಶ್ವಾಸ ಹೊಂದಿದೆ.

ಈ ಮಧ್ಯೆ, ರಾಜ್ಯ ಸರ್ಕಾರವು ರಾಜ್ಯದ ಬರಗಾಲ ಪೀಡಿತ ಪ್ರದೇಶಗಳಲ್ಲಿ ಹೆಚ್ಚುವರಿ ಉದ್ಯೋಗ ಸೃಜನೆ, ನೀರು ಪೂರೈಕೆ ಹಾಗೂ ಇನ್ನಿತರೇ ಪರಿಹಾರ ಕ್ರಮಗಳಿಗಾಗಿ, ಈ ಕೆಳಗೆ ಸೂಚಿಸಿರುವಂತೆ, ಹೆಚ್ಚುವರಿ ಹಣವನ್ನು ಬರಗಾಲ ಪರಿಹಾರ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಿದೆ:-

	(ಕೋಟಿ ರೂ.ಗಳಲ್ಲಿ)
ಅ) ಉದ್ಯೋಗದ ಸೃಜನೆಗಾಗಿ	೩.೦೦
ಆ) ಗ್ರಾಮೀಣ ನೀರು ಪೂರೈಕೆ	೨.೦೦
ಇ) ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ನೀರು ಪೂರೈಕೆ	೧.೦೦
ಈ) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎರಡನೇ ಬೆಳೆ ತೆಗೆದುಕೊಳ್ಳಲು ಅನುವು ಮಾಡಿಕೊಡುವುದಾಗಿ ಬೀಜವನ್ನು ಮತ್ತು ಗೊಬ್ಬರಗಳನ್ನೊಳಗೊಂಡ ಮಿನಿಕಿಟ್ಸ್‌ಗಳ ಪೂರೈಕೆಗಾಗಿ	೨.೦೮
ಉ) ವನ ಪ್ರದೇಶಗಳಲ್ಲಿ ಬೆಳೆದಿರುವ ಹುಲ್ಲನ್ನು ಕತ್ತರಿಸಿ ಬೇರೆ ಕಡೆಗೆ ಸಾಗಾಣಿಕೆ ಮಾಡುವುದಕ್ಕಾಗಿ ಹಾಗೂ ಮೇವು ಬೆಳೆಯುವುದಕ್ಕಾಗಿ	೦.೫೦
	೮.೫೮

ಈ ಮೇಲ್ಕಂಡಂತೆ ಹಣ ಬಿಡುಗಡೆ ಮಾಡುವುದರ ಜೊತೆಗೆ ಪರಿಹಾರ ಕ್ರಮಗಳನ್ನು ಚುರುಕುಗೊಳಿಸುವಂತೆ ಎಲ್ಲಾ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳಿಗೂ ಹಾಗೂ ಜಿಲ್ಲಾಧಿಕಾರಿಗಳಿಗೂ ಸೂಕ್ತ ಆದೇಶ ನೀಡಲಾಗಿದೆ. ಅಲ್ಲದೆ, ಅಗತ್ಯವಿರುವ ಕಡೆಯಲ್ಲೆಲ್ಲಾ ಗೋಶಾಲೆಗಳನ್ನು ತೆಗೆದು ಪಶು ಸಂಪತ್ತನ್ನು ರಕ್ಷಣೆ ಮಾಡಲಾಗುತ್ತಿದೆ.

ಅಭಾವ ಪೀಡಿತ ಪ್ರದೇಶಗಳಲ್ಲಿ ಬಾಧಿತವಾಗಿರುವ ಲಕ್ಷಾಂತರ ಜನ ಹಾಗೂ ಜಾನುವಾರುಗಳಿಗೆ ಪರಿಹಾರ ಒದಗಿಸುವ ಈ ಬೃಹತ್ ಕಾರ್ಯಕ್ರಮಗಳಿಗೆ ರಾಜ್ಯ ಸರ್ಕಾರದ ಹಣ ಸಂಪನ್ಮೂಲಗಳಷ್ಟೇ ಸಾಕಾಗುವುದಿಲ್ಲ. ಆದುದರಿಂದ ಈ ಪ್ರಯತ್ನದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೇಂದ್ರದ ಧನ ಸಹಾಯವನ್ನು ಒದಗಿಸಿಕೊಡಬೇಕಾದ ಜವಾಬ್ದಾರಿ ಭಾರತ ಸರ್ಕಾರದ ಮೇಲಿದೆ. ಈ ದಿಸೆಯಲ್ಲಿ ನಾನು ಈಗಾಗಲೇ ಕೇಂದ್ರ ಕೃಷಿ ಸಚಿವರು ಶ್ರೀ ಧಿಲ್ಲನ್‌ರವರನ್ನು ಆಗಸ್ಟ್ ತಿಂಗಳಲ್ಲಿ ಎರಡು ಭಾರಿ ಭೇಟಿಯಾಗಿದ್ದೇನೆ. ಮೊದಲನೇ ಬಾರಿಗೆ ದಿನಾಂಕ ೭-೮-೧೯೮೭ರಂದು ಭೇಟಿ ಮಾಡಿ, ದಿನಾಂಕ ೩೧-೭-೮೭ರಂದು ಇದ್ದಂತೆ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯ ಬಗ್ಗೆ ಅವರಿಗೆ ಒಂದು ವಿವರವಾದ ಟಿಪ್ಪಣಿಯನ್ನು ಕೊಟ್ಟು, ರಾಜ್ಯದಲ್ಲಿನ ಅಭಾವ ಪರಿಸ್ಥಿತಿಯ ಬಗ್ಗೆ ಅವರು ಕೂಡ ಚರ್ಚಿಸಿ, ಅವರಿಗೆ ಮನವರಿಕೆ ಮಾಡಿಕೊಟ್ಟು, ಪರಿಹಾರ ಕಾರ್ಯಕ್ರಮಗಳಿಗಾಗಿ ಮೊದಲೇ ೧೫.೦೦ ಕೋಟಿ ರೂ.ಗಳ ಅಡ್‌ಹಾಕ್ ಧನ ಸಹಾಯವನ್ನು ರಾಜ್ಯ ಸರ್ಕಾರಕ್ಕೆ ನೀಡುವಂತೆ ನಾನು ಖುದ್ದಾಗಿ ಮನವಿ ಮಾಡಿಕೊಂಡೆ. ತದನಂತರ, ರಾಜ್ಯ ಸರ್ಕಾರವು ಒಂದು ಸುದೀರ್ಘವಾದ ಮನವಿ ಪತ್ರವನ್ನು (ಮೆಮೊರ್‍ಯಾಂಡಂ) ತಯಾರು ಮಾಡಿತು.

ನಾನು ಮುಖ್ಯಮಂತ್ರಿಗಳ ಸಹಿತ ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ, ಈ ಮನವಿ ಪತ್ರವನ್ನು ಸಲ್ಲಿಸಿದ್ದೇನೆ. ಈ ಮನವಿ ಪತ್ರದ ಒಂದು ಪ್ರತಿಯನ್ನು ಮುಖ್ಯಮಂತ್ರಿಗಳ ಸಹಿತ, ಕೇಂದ್ರ ಹಣಕಾಸು ಸಚಿವ ಶ್ರೀ ಎನ್. ಡಿ. ತಿವಾರಿಯವರಿಗೂ ಕೊಟ್ಟು ಕೇಂದ್ರ ಸಹಾಯವನ್ನು ಶೀಘ್ರವಾಗಿ ಕೊಡಲು ವಿನಂತಿಸಿದ್ದೇನೆ. ಈ ಮನವಿ ಪತ್ರದಲ್ಲಿ ಈ ಕೆಳಕಂಡ ಬಾಬ್ತುಗಳಿಗಾಗಿ, ಧನ ಸಹಾಯವನ್ನು ಬೇಡಲಾಗಿದೆ.

		(ಕೋಟಿ ರೂ.ಗಳಲ್ಲಿ)
ಅ. ೧) ಉದ್ಯೋಗ ಸೃಜನೆಗಾಗಿ	೧೦೫.೦೦	
೨) ನೀರು ಪೂರೈಕೆ :-		
ಅ) ಗ್ರಾಮೀಣ ನೀರು ಪೂರೈಕೆ	೪೦.೦೦	
ಆ) ಪಟ್ಟಣ ಪ್ರದೇಶಗಳಿಗೆ ನೀರು ಪೂರೈಕೆ	೫.೦೦	
ಇ) ಕುಡಿಯುವ ನೀರಿನ ಸಾಗಾಣಿಕೆ ಮತ್ತು ಸರಬರಾಜಿಗಾಗಿ	೧೦.೦೦	
ಈ) ತೆರೆದ ಬಾವಿಗಳ ದುರಸ್ತಿ ಹಾಗೂ ಹೊಸ ತೆರೆದ ಬಾವಿಗಳನ್ನು ತೋಡುವುದಕ್ಕಾಗಿ	೧.೦೦	
		೫೬.೦೦
	೫೬.೦೦	
೩) ಕೃಷಿ ಕಾರ್ಯಕ್ರಮಗಳು ;		
ಅ) ಬೀಜ ಮತ್ತು ಗೊಬ್ಬರಗಳನ್ನೊಳಗೊಂಡ ಮಿನಿಕಿಟ್‌ಗಳ ಪೂರೈಕೆಗಾಗಿ	೨.೦೮	
ಆ) ಸಸ್ಯ ಸಂರಕ್ಷಣಾ ಕ್ರಮಗಳಿಗಾಗಿ	೦.೫೫	
ಇ) ಭೂಸಾರ ಸಂರಕ್ಷಣೆ	೭.೩೭	
	೧೦.೦೦	
		೧೦.೦೦
೪) ಸಾರ್ವಜನಿಕ ಆರೋಗ್ಯ		೩.೦೦
೫) ವಿಶೇಷ ಪೌಷ್ಠಿಕ ಆಹಾರ ಒದಗಿಸಲು		೫.೦೦

೬) ಮೇವು ಸರಬರಾಜು ಹಾಗೂ ಪಶು ಸಂರಕ್ಷಣೆ

ಅ) ಮೇವಿನ ಸಾಗಾಣಿಕೆ ಮತ್ತು ಸರಬರಾಜು (ಟ್ರಾನ್ಸ್‌ಪೋರ್ಟೇಶನ್)	೨.೦೦	
ಆ) ಗೋಶಾಲೆಗಳು	೭.೨೦	
ಇ) ಮೇವನ್ನು ಬೆಳೆಯಲು	೦.೫೦	
ಈ) ಔಷಧಿಗಳು	೧.೫೦	
ಉ) ಪಶುಗಳಿಗೆ ಪೌಷ್ಟಿಕ ಆಹಾರ ಒದಗಿಸುವ ಸಲುವಾಗಿ	೦.೮೦	
	೧೨.೦೦	೧೨.೦೦

೭) ಸಹಕಾರ ಚಟುವಟಿಕೆಗಳಿಗಾಗಿ

ಸಾಲಗಳ ಮರು ಹೊಂದಾಣಿಕೆ :

ಅ) ರಾಜ್ಯ ಸರ್ಕಾರದ ಹಿಸ್ಸೆ (ಭಾಗ)	೧.೮೦	
ಆ) ಡಿಸಿಸಿ ಬ್ಯಾಂಕುಗಳ ಭಾಗ (ಹಿಸ್ಸೆ)	೧.೮೦	
ಇ) ಸಣ್ಣ ಮತ್ತು ಅತಿ ಸಣ್ಣ ರೈತರು ಕೊಡಬೇಕಾದ ಬಡ್ಡಿಯನ್ನು ಸಬ್ಸಿಡಿಯಾಗಿ ನೀಡುವುದು	೦.೫೦	
	೪.೧೦	೪.೧೦

೮) ಶಾಶ್ವತ ಪರಿಹಾರ ಕಾರ್ಯಕ್ರಮಗಳು :

ಅ) ತುಂತುರು ನೀರಾವರಿ : ಡ್ರಿಪ್ ಇರಿಗೇಷನ್	೨.೦೦
ಆ) ಖುಷ್ಕಿ ಬೇಸಾಯ ಯೋಜನೆ	೨.೦೦

ಒಟ್ಟು ೨೯.೧೦ ಕೋಟಿ ರೂ.ಗಳು

ಈ ಮನವಿ ಪತ್ರದ ಒಂದು ಪ್ರತಿಯನ್ನು ಈಗ ಮಾನ್ಯ ಸದಸ್ಯರಿಗೆಲ್ಲಾ ಒದಗಿಸಿಕೊಡುತ್ತಿದ್ದೇನೆ.

ಈ ಮೇಲಿನಂತೆ ಮನವಿ ಪತ್ರವನ್ನು ಅರ್ಪಿಸುತ್ತಾ, ನಾನು ಕೇಂದ್ರ ಕೃಷಿ ಸಚಿವರನ್ನು ಈ ಕೂಡಲೇ ಒಂದು ಕೇಂದ್ರ ಅಧ್ಯಯನ ತಂಡವನ್ನು ರಾಜ್ಯಕ್ಕೆ ಕಳುಹಿಸಿ ರಾಜ್ಯದಲ್ಲಿನ ಅಭಾವ ಪರಿಸ್ಥಿತಿಯ ಬಗ್ಗೆ ಅಧ್ಯಯನ ನಡೆಸುವಂತೆ ಮನವಿ ಮಾಡಿಕೊಂಡಿದ್ದೇನೆ. ಅಲ್ಲದೆ, ಕೇಂದ್ರ ಅಧ್ಯಯನ ತಂಡವು ಬಂದು ಅಧ್ಯಯನ ನಡೆಸಿ ನಂತರ ಕೇಂದ್ರ ಸಹಾಯವನ್ನು ಘೋಷಿಸುವ ಕಾರ್ಯಾಚರಣೆ ಮುಗಿಯಲು ಸಾಕಷ್ಟು ಸಮಯವಾಗುವುದರಿಂದ ಹಾಗೂ ಅತಿ ತುರ್ತಾದ ಪರಿಹಾರ ಕ್ರಮಗಳನ್ನು ಹಮ್ಮಿಕೊಳ್ಳಲು ಧನದ ತುರ್ತು ಅವಶ್ಯಕತೆ ಇರುವುದರಿಂದ ಈ ಕೂಡಲೇ ೫೨.೦೦ ಕೋಟಿ ರೂಪಾಯಿಗಳ ಅಡ್‌ಹಾಕ್ ಸಹಾಯವನ್ನು ಕೂಡ ಘೋಷಿಸಬೇಕೆಂದು ಒತ್ತಾಯಿಸಿದ್ದೇನೆ, ಇದಲ್ಲದೆ ಕೇಂದ್ರ ಧನ ಸಹಾಯದ ಸಂಬಂಧದಲ್ಲಿ ಈಗಿರುವ ನಿಯಮಗಳಲ್ಲಿ ಮಾರ್ಪಾಡು ಹಾಗೂ ಧನ ಸಹಾಯದ ರೀತಿಯಲ್ಲಿ ಮಾರ್ಪಾಡು ಮಾಡುವ ಬಗ್ಗೆಯೂ ಭಾರತ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಅವುಗಳಲ್ಲಿ ಮುಖ್ಯ ಅಂಶಗಳೆಂದರೆ :-

ಅ) ರಾಜ್ಯಕ್ಕೆ ಕೇಂದ್ರವು ನೀಡುವ ಸಹಾಯ ಧನವನ್ನು ಇನ್ನು ಮುಂದೆ ಯೋಜನಾ ಹಣದ ಮುಂಗಡವೆಂದು ಪರಿಗಣಿಸದೆ ಪೂರ್ತಿ ಧನ ಸಹಾಯವನ್ನು ಪ್ರತಿಶತ ೧೦೦ರಷ್ಟು ಅನುದಾನವೆಂದು (ಗ್ರ್ಯಾಂಟ್) ಪರಿಗಣಿಸತಕ್ಕದ್ದು;

ಆ) ಘೋಷಿಸಿದ ಧನ ಸಹಾಯವನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಆಧಾರದ ಮೇಲೆ ಕೂಡಲೇ ಬಿಡುಗಡೆ ಮಾಡುವುದು. ಅಂದರೆ ಈಗಿರುವಂತೆ ರಾಜ್ಯ ಸರ್ಕಾರವು ಖರ್ಚು ಮಾಡಿ ಖರ್ಚಿನ ಲೆಕ್ಕ ಒದಗಿಸಿಕೊಟ್ಟ ನಂತರ ಕೊಡುವಂತಲ್ಲ, ಏಕೆಂದರೆ ಪರಿಹಾರವನ್ನು ತುರ್ತಾಗಿ ಒದಗಿಸಬೇಕಾದ ಸಂದರ್ಭದಲ್ಲಿ ಹಣಕಾಸಿನ ಅಡಚಣೆ ಉಂಟಾಗಬಾರದೆಂಬ ಕಾರಣಕ್ಕಾಗಿ.

ಇ) ಇಂಟರ್ ಸೆಕ್ಟೋರಲ್ ಅಡ್ಜಸ್ಟ್‌ಮೆಂಟ್‌ಗೆ ಅವಕಾಶ ಮಾಡಿಕೊಡುವುದು,

ಈ) ಈಗಿರುವಂತೆ ರಾಜ್ಯ ಸರ್ಕಾರವು ಮನವಿ ಪತ್ರ ಒದಗಿಸಿಕೊಟ್ಟ ನಂತರ ರಾಜ್ಯ ಸರ್ಕಾರಕ್ಕೆ ಕೇಂದ್ರ ಅಧ್ಯಯನ ತಂಡ ಭೇಟಿ ಮಾಡಿ ಪರಿಸ್ಥಿತಿಯನ್ನು ವೀಕ್ಷಿಸಿ, ಒಂದು ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು. ಈ ವರದಿಯನ್ನು ಅನುಸರಿಸಿ, ಕೇಂದ್ರ ಸರ್ಕಾರವು ಧನ ಸಹಾಯವನ್ನು ಬಿಡುಗಡೆ ಮಾಡುವುದು. ಈ ಕೇಂದ್ರ ತಂಡ ಯಾವ ಆಧಾರದ ಮೇಲೆ ಮತ್ತು ಏನು ಶಿಫಾರಸ್ಸು ಮಾಡುವುದೆಂಬ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿ ಒದಗಿಸಿಕೊಡಲಾಗುತ್ತಿಲ್ಲ. ಆದುದರಿಂದ ಕೇಂದ್ರ ಸರ್ಕಾರವು ಮುಂದೆ ಈ ಕೇಂದ್ರ ಅಧ್ಯಯನ ತಂಡವು ಮಾಡುವ ವರದಿಯನ್ನು ರಾಜ್ಯ ಸರ್ಕಾರಕ್ಕೂ ಅದರ ಮಾಹಿತಿಗಾಗಿ ಒದಗಿಸಿಕೊಡಬೇಕೆಂದು ಕೇಳಲಾಗಿದೆ.

ಉ) ಶಾಶ್ವತ ಅಭಾವ (ಬರ) ಪರಿಹಾರ ಕಾರ್ಯಕ್ರಮಗಳಾದ ಖುಷ್ಕಿ ಭೂ ಅಭಿವೃದ್ಧಿ ಯೋಜನೆ ಹಾಗೂ ಸ್ಪ್ರಿಂಕ್ಲರ್ ಇರಿಗೇಷನ್ ಯೋಜನೆಗಳನ್ನು ಕೂಡ ಬರಪರಿಹಾರ ಯೋಜನಾ ಸಂಬಂಧ ಖರ್ಚಿನಲ್ಲಿ ಸೇರಿಸಲು ಅವಕಾಶ ಮಾಡಿಕೊಡಬೇಕೆಂದು ಕೂಡ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ,

ಊ) ಆಳವಾಗಿ ಕೊರೆಯುವ ರಿಗ್‌ಗಳು ನೀರಿನ ಟ್ಯಾಂಕರ್‌ಗಳು, ಮೇವು ಬೆಳೆಯುವ ಯಂತ್ರಗಳು, ಮೊಬೈಲ್ ವ್ಯಾನ್ಸ್ ಮುಂತಾದವುಗಳನ್ನು ಖರೀದಿಸಲು ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಬಾಬ್ತುಗಳನ್ನು ಕೂಡ ಬರ ಪರಿಹಾರ ಕೇಂದ್ರ ಸಹಾಯದಲ್ಲಿ ಕೂಡಿಸಲು ಕೇಂದ್ರವನ್ನು ಒತ್ತಾಯ ಮಾಡಲಾಗಿದೆ.

ಈ ಸಂಬಂಧದಲ್ಲಿ ಇನ್ನೊಂದು ಆಶಾದಾಯಕ ಬೆಳವಣಿಗೆಯೆಂದರೆ, ಪ್ರಧಾನ ಮಂತ್ರಿಗಳು ಸೆಪ್ಟೆಂಬರ್ ೩ನೇ ದಿನಾಂಕದಂದು ಎಲ್ಲಾ ಅಭಾವ ಪೀಡಿತ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನವನ್ನು ಕರೆದಿದ್ದು, ಆವಾಗ ರಾಷ್ಟ್ರದಲ್ಲಿ ತಲೆದೋರಿದ ಅಭಾವ ಪರಿಸ್ಥಿತಿಯನ್ನು ಎದುರಿಸಲು ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚೆಯಾಗಲಿದೆ. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ನಾನು ಮತ್ತು ಮುಖ್ಯಮಂತ್ರಿಗಳು ಈ ನಮ್ಮ ಮೇಲೆ ನಮೂದಿಸಿದ ಅನೇಕ ವಿಚಾರ, ಬೇಡಿಕೆಗಳನ್ನು ಒತ್ತಾಯಪೂರ್ವಕವಾಗಿ ಮಂಡಿಸುವೆವು.

ಪರಿಹಾರ ಕಾರ್ಯಕ್ರಮಗಳನ್ನು ಚುರುಕಾಗಿ ನಡೆಸಿಕೊಂಡು ಹೋಗಲು, ರಾಜ್ಯ ಸರ್ಕಾರಕ್ಕೆ ಅನುವು ಮಾಡಿಕೊಡುವ ಸಲುವಾಗಿ, ಕೇಂದ್ರ ಸರ್ಕಾರವು ತಕ್ಷಣ ಒಂದು ಕೇಂದ್ರ ಅಧ್ಯಯನ ತಂಡವನ್ನು ರಾಜ್ಯಕ್ಕೆ ಕಳುಹಿಸಿ, ಮುಂದಿನ ೧೦-೧೫ ದಿನಗಳಲ್ಲಿ ಕೇಂದ್ರ ಧನ ಸಹಾಯವನ್ನು ಅತಿ ಶೀಘ್ರವಾಗಿ ಒದಗಿಸಿಕೊಡುತ್ತದೆಂಬ ಆಶಾಭಾವನೆಯನ್ನು ಹೊಂದಿದೆ. ಈ ಕೇಂದ್ರ ಸಹಾಯ ಧನವನ್ನು ಒಳಗೊಂಡಂತೆ, ರಾಜ್ಯ ಸರ್ಕಾರದ ಸಂಪನ್ಮೂಲಗಳನ್ನೂ ಹೊಂದಿಸಿಕೊಂಡು ರಾಜ್ಯ ಸರ್ಕಾರವು ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುತ್ತದೆಂಬ ಆಶ್ವಾಸನೆಯನ್ನು ನೀಡುತ್ತೇನೆ. ಯಾವುದೇ ಕಾರಣಗಳಿಗಾಗಿಯಾದರೂ, ಸರ್ಕಾರವು ಕೆಲಸವನ್ನು ಆರಿಸಿ ಬರುವ ಯಾವುದೇ ವ್ಯಕ್ತಿಗೂ ಕೆಲಸ ನೀಡದೆ ವಾಪಸ್ಸು ಕಳುಹಿಸಲಾಗುವುದಿಲ್ಲ. ಹಾಗೂ ಏನೇ ಆರ್ಥಿಕ ಸಂಕಷ್ಟ ಹಾಗೂ ಅಡೆತಡೆಗಳು ಬಂದರೂ, ಅವನ್ನೆಲ್ಲಾ ಬದಿಗೊತ್ತಿ ರಾಜ್ಯದ ಬಾಧಿತ ಜನ ಹಾಗೂ ಜಾನುವಾರುಗಳಿಗೆ, ನಿರಂತರವಾಗಿ ಮುಂದಿನ ಹಂಗಾಮಿನವರೆಗೂ ಪರಿಹಾರ ಒದಗಿಸಿಕೊಡುವ ಕರ್ತವ್ಯಕ್ಕೆ ಸರ್ಕಾರವು ಪೂರ್ಣಬದ್ಧವಾಗಿದೆ ಎಂದು ಈ ಮೂಲಕ ಸದನದಲ್ಲಿ ಮತ್ತೊಮ್ಮೆ ಘೋಷಿಸುತ್ತೇನೆ. ಇದಲ್ಲದೆ; ಈ ಬೃಹತ್ ಕಾರ್ಯದಲ್ಲಿ ಸ್ವಯಂ ಸೇವಾ ಸಂಘ ಸಂಸ್ಥೆಗಳನ್ನು ಹಾಗೂ

ಇನ್ನಿತರೇ ಸಂಘ ಸಂಸ್ಥೆಗಳನ್ನು ಪರಿಹಾರ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ನಾನು ಈ ಮೂಲಕ ಪರಿಹಾರವನ್ನು ಒದಗಿಸಲು ಈ ಸದನದ ಎಲ್ಲಾ ಸದಸ್ಯರಿಗೂ ನಾನು ನನ್ನ ಕಳಕಳಿಯ ಮನವಿಯನ್ನು ಸಹಕಾರವನ್ನು ಕೇಳಿಕೊಳ್ಳುತ್ತೇನೆ.

ಅನುಬಂಧ

೩೧-೭-೮೭ರ ಕೊನೆಗೆ ಮುಂಗಾರು ಬಿತ್ತನೆಯ ಪ್ರಗತಿ

ಕ್ರ. ಸಂ.	ಜಿಲ್ಲೆಯ ಹೆಸರು	ಸಾಮಾನ್ಯ		೧೯೮೭
		ಸಾಮಾನ್ಯ ಕ್ಷೇತ್ರ	ಬಿತ್ತಬೇಕಾಗಿರುವ ಸಾಮಾನ್ಯ ಕ್ಷೇತ್ರದ ಶೇಕಡಾವಾರು	ಪ್ರಗತಿಯಲ್ಲಿರುವ ಬಿತ್ತನೆ ಕ್ಷೇತ್ರ (ಹಂಗಾಮಿ)
೧	೨	೩	೪	೫
೧.	ಬೆಂಗಳೂರು	೩.೪೧	೪೯.೯	೦.೪೨
೨.	ಕೋಲಾರ	೨.೫೨	೬೭.೫	೦.೩
೩.	ತುಮಕೂರು	೪.೧೫	೩೮.೭	೦.೬೮
೪.	ಶಿವಮೊಗ್ಗ	೨.೯೯	೬೬.೯	೧.೭೬
೫.	ಚಿತ್ರದುರ್ಗ	೪.೧೧	೭೩.೨	೨.೧೪
೬.	ಮೈಸೂರು	೪.೭೧	೬೩.೭	೨.೪೮
೭.	ಮಂಡ್ಯ	೨.೪೩	೩೯.೧	೦.೩೫
೮.	ಕೊಡಗು	೦.೪೯	೬೧.೨	೦.೦೮
೯.	ಹಾಸನ	೨.೭೬	೬೫.೨	೧.೬೦
೧೦.	ಚಿಕ್ಕಮಗಳೂರು	೧.೭೭	೭೩.೪	೦.೮೦
೧೧.	ದಕ್ಷಿಣಕನ್ನಡ	೧.೧೨	೯೮.೨	೦.೯೬
೧೨.	ಧಾರವಾಡ	೭.೭೦	೭೧.೪	೫.೭೭
೧೩.	ಉತ್ತರಕನ್ನಡ	೧.೦೦	೭೦.೦	೦.೬೩
೧೪.	ಬೆಳಗಾಂ	೬.೨೨	೮೭.೭	೫.೬೫
೧೫.	ಬಿಜಾಪುರ	೫.೫೬	೮೦.೯	೪.೩೭
೧೬.	ರಾಯಚೂರು	೫.೯೦	೭೬.೩	೪.೪೨
೧೭.	ಬಳ್ಳಾರಿ	೩.೮೪	೭೮.೦	೨.೮೫
೧೮.	ಗುಲ್ಬರ್ಗಾ	೬.೨೫	೯೯.೦	೫.೩೮
೧೯.	ಬೀದರ್	೨.೯೮	೧೦೦.೦	೩.೦೩
	ಒಟ್ಟು	೬೯.೯೫	೭೩.೧	೪೩.೮

ಎ : ಉತ್ತಮ, ಬಿ : ತೃಪ್ತಿಕರ

ಕರೆ ಕೊಡುತ್ತೇನೆ. ಮತ್ತು ರಾಜ್ಯದ ಸಂಕಷ್ಟದ ಈ ದಿನಗಳಲ್ಲಿ ನೊಂದ ಜನತೆಗೆ ಸರ್ವ ವಿಧದ ಮಾಡಿಕೊಳ್ಳುತ್ತೇನೆ ಮತ್ತು ಈ ವಿಷಯದಲ್ಲಿ ತಮ್ಮೆಲ್ಲರ ಸಲಹೆ-ಸೂಚನೆಗಳನ್ನು ಮತ್ತು ಹಾರ್ದಿಕ

ಧ—ಅ

ಕೆಲಸ ಮತ್ತು ಬೆಳೆದ ಬೆಳೆಗಳ ಸ್ಥಿತಿಯ ಬಗ್ಗೆ ತೋರಿಸುವ ಪಟ್ಟಿ

ಮುಂಗಾರು ವಾಸ್ತವಿಕ		ಒಟ್ಟು ಕ್ಷೇತ್ರ		ಪ್ರಸಕ್ತ ಸಾಲಿನ ಬಿತ್ತನೆ ಕ್ರಿಯೆಯ ಪ್ರಗತಿ ಎ. ಬಿ. ಸಿ. ಡಿ.	ಬೆಳೆದಿರುವ ಭೂಮಿ ಬೆಳೆಯ ಸ್ಥಿತಿ ಎ.ಬಿ. ಸಿ.ಡಿ	ಪ್ರಸಕ್ತ ಸಾಲಿನಲ್ಲಿ ಬಿತ್ತಿದ ಕ್ಷೇತ್ರದಲ್ಲಿ ನಷ್ಟದ ವಿಸ್ತೀರ್ಣ
ಸಾಮಾನ್ಯ ಕ್ಷೇತ್ರ ಬಿತ್ತಿರುವ ಕ್ಷೇತ್ರದ ಶೇಕಡಾವಾರು	ಶೇಖಡಾ ಬಿತ್ತಿರುವ ಕ್ಷೇತ್ರ ೧೯೮೬ರಲ್ಲಿ (ಮುಂಗಾರು)	೧೯೮೬ರ ಮುಂಗಾರುವಿನಲ್ಲಿ ಪ್ರತ್ಯಕ್ಷ ಬಿತ್ತಿದ ಕ್ಷೇತ್ರ	೧೯೮೬ರ ಮುಂಗಾರುವಿನಲ್ಲಿ ಪ್ರತ್ಯಕ್ಷ ಬಿತ್ತಿದ ಶೇಕಡಾ ಸಾಮಾನ್ಯ			
೬	೭	೮	೯	೧೦	೧೧	೧೨
೧೨.೩	೨೭.೩	೩.೩೨	೯೭.೪	ಸಿ	ಸಿ	೦.೦೨
೧೪.೩	೨೯.೦	೨.೪೩	೯೬.೪	ಸಿ	ಸಿ	—
೧೬.೩	೩೦.೮	೩.೯೧	೯೪.೨	ಸಿ	ಸಿ	—
೫೮.೯	೫೩.೨	೨.೯೪	೯೮.೩	ಸಿ	ಸಿ	೦.೪೬
೫೨.೨	೬೯.೩	೫.೦೮	೧೦೦.೦	ಸಿ	ಸಿ	೧.೩೪
೫೨.೬	೬೫.೪	೪.೪೨	೯೮.೮	ಸಿ	ಸಿ	೧.೪೩
೧೪.೪	೨೪.೭	೨.೩೮	೯೭.೯	ಸಿ	ಸಿ	೦.೦೯
೧೬.೩	೬೯.೪	೦.೪೮	೧೦೦.೦೦	ಸಿ	ಸಿ	೦.೦೩
೫೭.೯	೬೪.೫	೨.೪೦	೨೭.೦೦	ಸಿ	ಸಿ	೧.೦೬
೪೫.೨	೭೮.೦	೧.೮೫	೧೦೦.೦೦	ಸಿ	ಸಿ	೦.೫೦
೮೫.೭	೯೦.೨	೧.೦೩	೯೨.೦	ಬಿ : ಸಿ	ಸಿ	—
೭೪.೯	೭೮.೪	೬.೭೪	೮೭.೦	ಬಿ	ಸಿ	೫.೧೧
೬೩.೦	೬೦.೦	೦.೮೮	೮೮.೦	ಬಿ : ಸಿ	ಸಿ	೦.೨೦
೯೦.೧	೮೮.೨	೫.೮೯	೯೩.೯	ಬಿ	ಸಿ	೧.೮೫
೭೮.೬	೮೪.೨	೪.೮೫	೮೭.೨	ಬಿ	ಸಿ	೦.೬೮
೭೪.೯	೭೮.೧	೫.೫೦	೯೩.೨	ಬಿ	ಸಿ	೨.೮೩
೭೪.೨	೮೬.೨	೪.೬೦	೧೦೦.೦	ಬಿ	ಸಿ	೦.೦೬
೮೬.೧	೫೪.೯	೫.೮೫	೯೩.೬	ಬಿ	ಸಿ	—
೧೦೦.೦೦	೭೧.೫	೨.೭೭	೯೨.೬	ಬಿ	ಸಿ	—
೬೨.೬	೬೫.೬	೬೭.೩೦	೯೬.೨	ಬಿ ; ಸಿ	ಸಿ	೧೫.೬೬

ಸಿ ; ಅತೃಪ್ತಿಕರ, ಡಿ : ಹೀನ

ಅನುಬಂಧ

ಕರ್ನಾಟಕ ರಾಜ್ಯದಲ್ಲಿನ ಮುಖ್ಯ ಅಣೆಕಟ್ಟು ಜಲಾಶಯಗಳಲ್ಲಿನ ೧೯೮೭ ಮತ್ತು

ಅನು ಕ್ರಮ ಸಂಖ್ಯೆ	ಜಲಾಶಯಗಳ ಹೆಸರು	ಎಫ್ ಆರ್ ಎಲ್ (ಅಡಿಗಳಲ್ಲಿ)	ವರ್ಷ	ಜೂನ್
೧	೨	೩	೪	೫
೧.	ಕೆ. ಆರ್. ಸಾಗರ	೧೨೪.೮೦	೧೯೮೭	೮೦.೦೦
			೧೯೮೬	೮೯.೬೫
೨.	ಕಬಿನಿ	೨೨೮೪.೦೦	೧೯೮೭	೨೨೦೨.೦೮
			೧೯೮೬	೨೨೭೨.೫೦
೩.	ಹೇಮಾವತಿ	೨೯೨೨.೦೦	೧೯೮೭	೨೮೬೭. .೮
			೧೯೮೬	೨೨೮೨.೬೧
೪.	ಹಾರಂಗಿ	೨೮೫೯.೦೦	೧೯೮೭	೨೭೯೪.೪೪
			೧೯೮೬	೨೮೩೭.೫೭
೫.	ಭದ್ರ	೧೮೬.೦೦	೧೯೮೭	೧೨೭.೩೦
			೧೯೮೬	೧೩೦.೬೦
೬.	ತುಂಗಭದ್ರ	೧೬೩೩.೦೦	೧೯೮೭	೧೫೮೧.೯೭
			೧೯೮೬	೧೫೯೪.೬೬
೭.	ಘಟಪ್ರಭ	೨೧೭೫.೦೦	೧೯೮೭	೨೦೭೬.೮೦
			೧೯೮೬	೨೧೦೪.೯೦
೮.	ಮಲಪ್ರಭ	೨೦೭೯.೫೦	೧೯೮೭	೨೦೩೭.೪೫
			೧೯೮೬	೨೦೪೩.೬೦
೯.	ನಾರಾಯಣ್ ಪುರ್ (ಯಂಕೆಪಿ)	೧೬೧೫.೦೦	೧೯೮೭	೧೬೦೦.೧೫
			೧೯೮೬	೧೫೯೪.೯೦

ಧ—ಬಿ

೧೯೮೬ನೇ ಸಾಲಿನ ಅವಧಿಯಲ್ಲಿ ಬೇರೆ ಬೇರೆ ತಿಂಗಳುಗಳಲ್ಲಿ ಇದ್ದ ನೀರಿನ ಮಟ್ಟ

ಅಣೆಕಟ್ಟು, ಜಲಾಶಯಗಳಲ್ಲಿ, ತಿಂಗಳ ಅಂತ್ಯದಲ್ಲಿದ್ದ ನೀರಿನ ಮಟ್ಟ (ಅಡಿಗಳಲ್ಲಿ)		ಜಲಾಶಯದ ಸಾಮರ್ಥ್ಯ (ಟಿಎಂಸಿಯಲ್ಲಿ)		
ಜುಲೈ	ಆಗಸ್ಟ್ (೧೭-೮-೮೭ ರವರೆಗೆ)	ಎಫ್‌ಆರ್‌ಎಲ್	ವಾಸ್ತವಿಕ	ಸಾಮಾನ್ಯ ಶೇಕಡ ಸಾಮರ್ಥ್ಯ
೬	೭	೮	೯	೧೦
೮೦.೧೧	೮೩.೨೫	೪೦.೮೨	೪.೨೬	೧೦.೪೩
೧೦೬.೨೯	೧೨೪.೦೭	—	೪೦.೩೭	
೨೨೭೨.೬೨	೨೨೬೮.೩೭	೯.೭೨	೧.೧೫	೧೧.೮೩
೨೨೮೨.೬೨	೨೨೮೨.೭೯	—	೯.೦೩	
೨೮೮೦.೯೦	೨೮೭೮.೨೮	೩೨.೭೩	೪.೭೩	೧೪.೪೫
೨೯೦೩.೦೮	೨೯೧೮.೭೩	—	೩೦.೨೩	
೨೮೭೮.೧೪	೨೮೧೫.೩೨	೭.೭೫	೧.೩೨	೧೭.೦೩
೨೮೫೬.೮೬	೨೮೫೫.೭೮	—	೭.೨೦	
೧೩೭.೧೧	೧೩೪.೫೪	೫೫.೯೫	೧೪.೭೭	೨೬.೩೯
೧೫೦.೨೪	೧೭೮.೦೦	—	೫೩.೬೫	೨೩.೯೭
೧೬೦೩.೦೫	೧೬೦೦.೯೩	೧೧೫.೬೮	೨೬.೯೫	
೧೬೧೮.೩೨	೧೬೩೭.೭೯	—	೧೧೫.೪೭	
೨೧೨೮.೪೦	೨೧೨೬.೭೫	೪೯.೧೦	೧೮.೯೮	೩೮.೬೫
೨೧೪೬.೦೦	೨೧೭೧.೪೬	—	೪೭.೦೦	
೨೧೪೭.೯೫	೨೦೪೬.೩೫	೩೪.೩೪	೪.೬೭	೧೩.೫೯
೨೦೫೫ ೭೦	೨೦೬೨.೪೫	—	೧೫.೫೩	
೧೬೦೧.೫೦	೧೬೦೨.೮೫	೩೦.೪೭	೧೩.೬೫	೪೪.೭೯
೧೫೯೪.೭೫	೧೫೯೪.೮೬	—	೧೬.೨೦	

ಈ ನನ್ನ ಹೇಳಿಕೆಯ ಜೊತೆಗೆ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ನೀರಾವರಿ ಅಣೆಕಟ್ಟುಗಳ ನೀರಿನ ಸಂಗ್ರಹ ದಿನಾಂಕ ೨೦–೮–೮೭ ರಲ್ಲಿ ಇರತಕ್ಕ ಬಗ್ಗೆ ಒಂದು ವಿವರಣೆಯನ್ನು ಸಹ ಕೊಟ್ಟಿದ್ದೇನೆ. ಕೇಂದ್ರಕ್ಕೆ ಮೆಮೋ ರಾಂಡಮ್ ಕೂಡ ಕೊಟ್ಟಿದ್ದೇವೆ. ಈಗಾಗಲೇ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಹೇಳಿದಂತೆ ಬಹಳ ಮಹತ್ವವಾದ ಬರಗಾಲ ಚರ್ಚೆಯನ್ನು ಇಂದೇ ತೆಗೆದುಕೊಳ್ಳಬೇಕೆಂದು ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟಾಗ, ನನ ಹೇಳಿಕೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಈಗ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಆ ಕಡೆಯುವರು ಈ ಕಡೆಯುವರು ಮಾತನಾಡುವ ಸದಸ್ಯರುಗಳ ಹೆಸರುಗಳನ್ನು ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಐದು ವರ್ಷಗಳಿಂದ ಸತತವಾಗಿ ಬರಗಾಲ ಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಂದೂ ಬಾರದ ಬರಗಾಲ ಭಾರತದೇಶದಲ್ಲಿಯೇ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮಲ್ಲಿ ಐದುವರ್ಷಗಳಿಂದ ಬರಗಾಲವಿರುವಾಗ ಭಾರತದಲ್ಲೂ ಬಂದಿದೆ.

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರು ತಮ್ಮ ಭಾಷಣ ಪ್ರಾರಂಭ ಮಾಡಿ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಹತ್ವದ ವಿಚಾರದ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಅರಿವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಸೂಚಿಸುತ್ತಿದ್ದೇನೆ. ಇದು ಬರಗಾಲದ ಸಮಸ್ಯೆ, ಅದರ ಬಗ್ಗೆ ಚರ್ಚೆ ಅಷ್ಟೇ ಮುಖ್ಯವಾದುದು ಎನ್ನುವುದನ್ನು ಅರಿತುಕೊಂಡು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಆಧ್ಯತೆಯನ್ನು ಕೊಟ್ಟರು ಹಾಗೂ ಅವರು ಒಪ್ಪಿಕೊಂಡಿದ್ದಾರೆ. ಇದರ ಆದ್ಯತೆಯ ಬಗ್ಗೆ ನಾನೇನು ಹೇಳುವ ಹಾಗೆ ಇಲ್ಲ. ಎಲ್ಲರಿಗೂ ಗೊತ್ತಿರುವಹಾಗೆ ಅದರಲ್ಲೂ ಸರ್ಕಾರ ಹೇಳುವಹಾಗೆ, ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಹೇಳಿರುವಹಾಗೆ ಈ ಸಾರಿಯ ಬರಗಾಲ ಬಹಳ ತೀವ್ರವಾದ ಬರಗಾಲ. ಬರಗಾಲ ಬರಗಾಲವೆಂದು ಹೇಳಿಕೊಂಡು ಶುರುಮಾಡಿ, ನಾನು ಕರ್ನಾಟಕ ರಾಜ್ಯದ ಮೈಸೂರು ಪ್ರದೇಶದಿಂದ ಬಂದಿದ್ದು ಅಲ್ಲ ಸುಮಾರು ೧೦ ವರ್ಷಗಳಿಂದಲೂ ನಾವು ಬರಗಾಲದ ಜೊತೆಯಲ್ಲಿದ್ದೇವೆ. ಮಳೆಯಲ್ಲಿ ಯಾವಾಗಲೂ ನೆನೆದುಕೊಂಡು ಹೋಗುವಹಾಗೆ, ನಾವು ಬರಗಾಲದ ಜೊತೆಯಲ್ಲಿಯೇ ಬೆರೆಯಬೇಕು. ಇದೇ ತರಹ ಪ್ರಪಂಚವೆಲ್ಲ ಹೀಗೆ ಇದೆ, ಇದೇರೀತಿಯಲ್ಲಿ ನಾವು ಬದುಕಬೇಕು. ಹೊಟ್ಟೆ ಹಸಿದುಕೊಂಡಿರುವುದು ದೇವರು ಕೊಟ್ಟ ವರ. ನಮ್ಮ ಜನರ ಮಕ್ಕಳು ಮರಿಗಳು ಅರೆ ಹೊಟ್ಟೆಯಲ್ಲಿ, ಅರೆ ಬಟ್ಟೆಯಲ್ಲಿದ್ದು, ಇದೇ ನಮ್ಮ ಬಾಳಿನ ಜೀವನದ ದಾರಿ, ಇದೇ ಸೊಗಸಿನ ದಾರಿಯೆಂದು ನಾವು ತಿಳಿದು ಕೊಂಡು, ೮–೯ ವರ್ಷಗಳಿಂದ ಜನರಲ್ಲಿ ಹೇಳುತ್ತಾ ಇರಬೇಕು.

೨–೦೦ ಪಿ. ಎಂ.

ಮೈಸೂರು ಜಿಲ್ಲೆಯಲ್ಲಿರುವ ಗುಂಡ್ಲುಪೇಟೆ ತಾಲ್ಲೂಕನ್ನು ಡ್ರಾಟ್ ಪ್ರೋನ್ ಏರಿಯಾ ಎಂದು ಹೇಳುತ್ತಾರೆ. ರೇನ್ ಫ್ಯಾಡೋ ಏರಿಯಾ ಎಂದು ಹೇಳುತ್ತಾರೆ. ಏನೇನು ಹೆಸರಿಟ್ಟರೂ ಇಲ್ಲಿ ಯಾವಾಗಲೂ ಬರಗಾಲ. ನಮ್ಮದೇನೋ ಬರಗಾಲ ಇದೆ, ಎಲ್ಲಿಂದಲೋ ಹುಲ್ಲು ತಂದುಕೊಡುತ್ತಾರೆ, ಹೇಗೋ ಮಾಡಿ ಇಷ್ಟು ಧಾನ್ಯವನ್ನು ಕೊಡುತ್ತಾರೆ, ನಾವು ನಡೆಸಿಕೊಂಡು ಹೋಗುತ್ತೇವೆ ಎಂದರೆ ಈಗ ಮೂರು–ನಾಲ್ಕು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಬರಗಾಲ ಬರಗಾಲ ಎಂದು ಬರೇ ಬರಗಾಲವನ್ನು ಕಾಣುತ್ತಿದ್ದೇವೆ. ಹೋದವರ್ಷ ಬೇಕಾದಷ್ಟು ಕೇಂದ್ರದಿಂದ ಹಣ ಬಂತು. ನಮ್ಮ ಸರ್ಕಾರದವರೂ ಖರ್ಚು ಮಾಡಿದರು. ಆದರೆ ಸರಿಯಾದ ರೀತಿಯಲ್ಲಿ ಖರ್ಚು ಆಗಲಿಲ್ಲವೆಂದು ನಮಗೆ ಗೊತ್ತು, ತಮಗೂ ಗೊತ್ತು. ಇದು ಸರಿಯಾಗಿ ಖರ್ಚಾಗಲಿಲ್ಲ, ಯಾರಿಗೆ ಸೇರಬೇಕಾಗಿತ್ತೋ ಅವರಿಗೆ ಸೇರಲಿಲ್ಲ. ಯಾವರೀತಿ ಸರಿಯಾದ ರೀತಿಯಲ್ಲಿ ಖರ್ಚಾಗಬೇಕಿತ್ತೋ ಅದು ಆಗಲಿಲ್ಲ, ಯಾರಿಗೆ ಕೆಲಸ ದೊರೆಯಬೇಕಾಗಿತ್ತೋ ಅವರಿಗೆ ದೊರೆಯಲಿಲ್ಲ ಎನ್ನುವುದನ್ನು ಅನೇಕರು ಒಪ್ಪಿಕೊಂಡಿದ್ದಾರೆ. ತಮ್ಮ ಮನಸ್ಸಿಗೂ ಇದು ಗೊತ್ತಿದೆ. ಮೇಲೆ ಇಲ್ಲವೆಂದು ಹೇಳಿದರೂ ತಮಗೆ ಇದರ ಅರಿವು ಆಗಿದೆ. ಆದರೆ ಈ ಸಾರಿ ಮಾತ್ರ ಇದಕ್ಕೆ ಯಾವುದೇ ರೀತಿಯ ರಾಜಕೀಯವಾಗಲೀ, ರಾಜ

ಕೀಯ ಬಣ್ಣವಾಗಲೀ ಹಚ್ಚುವುದಕ್ಕೆ ಹೋಗಬಾರದು ಎಂದು ಬಹಳ ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನಾನು ಈಗ ಹತ್ತು ದಿವಸಗಳ ಕೆಳಗೆ ಬಳ್ಳಾರಿಯಿಂದ ಹಿಡಿದು ಬೆಳಗಾವಿಯವರೆಗೆ ಪ್ರವಾಸ ಹೋಗಿ ಬಂದಿದ್ದೇನೆ. ಈ ಭಾಗದಲ್ಲೂ ಎಲ್ಲಾ ಕಡೆಗೆ ಹೋಗಿಬಂದಿದ್ದೇನೆ. ಹಾಸನ ಜಿಲ್ಲೆಯಲ್ಲೂ ಸುತ್ತಾಡಿಬಂದಿದ್ದೇನೆ ಮಲೆನಾಡಿನ ಏನು ಭತ್ತದ ಕಣಜ ಎಂದು ಹೇಳುತ್ತಿದ್ದರು ಅಲ್ಲಿ ಬೆಳೆ ಹೋಗಿದೆ. ಮಲೆನಾಡಿನಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಸ್ವಲ್ಪ ಮಳೆ ಬಂತು ಎಂದು ರೈತರು ಬಿತ್ತನೆ ಮಾಡಿಬಿಟ್ಟರು. ರೈತರು ಆಶಾವಾದಿಗಳು, ತಿರುಗಿ ಮಳೆ ಬರುತ್ತದೆ ಎಂಬ ಆಸೆಯಿಂದ ಕೈಯಿಂದ ದುಡ್ಡನ್ನು ಕಳೆದುಕೊಂಡುಬಿಟ್ಟರು. ಈಗ ತಿರುಗಿ ಮಳೆ ಬಂದಹಾಗೆ ಆಯಿತು ಎಂದು, ಒಣಗಿದ ಪೈರು ಚಿಗುರುತ್ತದೆ ಎಂದು ನೋಡಿದರೆ, ಎಲ್ಲಿ ಇರಿಗೇಶನ್ ಇದೆಯೋ ಅಲ್ಲಿ ಪರವಾಗಿಲ್ಲ. ಆದರೆ ಇಲ್ಲದೇ ಇರುವ ಕಡೆ ಪೈರು ಒಣಗಿ ಹೋಗಿದೆ ನೋಡುವುದಕ್ಕೆ ಹಸಿರೇನೋ ಕಾಣುತ್ತದೆ. ಆದರೆ ಪೈರು ಕೈಗೆ ಹತ್ತುವ ಹಾಗಿಲ್ಲ. ನೆಲಗಡಲೆ ಭತ್ತ, ಜೋಳ, ಹತ್ತಿ ಯಾವುದೇ ಬೆಳೆ ಕೂಡ ರೈತರ ಕೈಗೆ ಹತ್ತುವ ಹಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಬವಣೆ ಬೇರೆ ಸೇರಿದೆ. ಕೆಲವು ಕಡೆಗಳಲ್ಲಿ ಕುಡಿಯುವ ನೀರಿನ ಕಷ್ಟ ಬಹಳ ಇದೆ. ಕೆಲವು ಕಡೆ ಪರ್ಮನೆಂಟ್ ಆಗಿ ಅವರ ಕಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯತೆ ಇದ್ದರೂ. ಅದಕ್ಕೆ ಕೈಹಾಕದೆ ಬಾವಿ ತೆಗೆಯುತ್ತಾರೆ. ಅದಕ್ಕೆ ಪಂಪು ಹಾಕದೆ ಕೊರದಿರುವ ಬಾವಿಗಳು ಹಾಗೆಯೇ ನಿಂತುಹೋಗಿವೆ. ಕೆಲವಕ್ಕೆ ಕರೆಂಟ್ ಇಲ್ಲದೇ ಇದೆ. ಇನ್ನೂ ಕೆಲವಕ್ಕೆ ಪಂಪು ಇಲ್ಲದೇ ಇದೆ. ಅವುಗಳನ್ನು ಏತಕ್ಕಾದರೂ ಕೊರೆದಿದ್ದಾರೋ ನನಗೆ ಗೊತ್ತಿಲ್ಲ ಎಲ್ಲೋ ಪಾತಾಳದಲ್ಲಿ ನೀರು ಇದ್ದರೆ, ಇಲ್ಲಿ ಬಾವಿಗಳನ್ನು ತೋಡಿದರೆ ಏನು ಪ್ರಯೋಜನ ಆಯಿತು ಎಂದು ನನಗಂತೂ ಅರ್ಥವಾಗುತ್ತಿಲ್ಲ. ಈಗಾಗಿ ಕೆಲವು ಕಡೆ ಕುಡಿಯುವ ನೀರಿಗೆ ಕಷ್ಟ ಇದೆ. ಇನ್ನು ಕೆಲವು ಕಡೆ ಜನರು ಏನು ಹೇಳಿದರು ಎಂದರೆ, ನಮಗೇನಾದರೂ ಇನ್ನು ಮುಂದಕ್ಕೆ ಮಳೆ ಆಯಿತು ಎಂದರೆ ಕುಡಿಯುವ ನೀರಿನ ಬರ ಕಡಿಮೆ ಆಗಬಹುದು, ಇಲ್ಲದೇ ಹೋದರೆ ಮೂರು-ನಾಲ್ಕು ತಿಂಗಳು ಬಿಟ್ಟರೆ ಕುಡಿಯುವ ನೀರಿನ ಕಷ್ಟ ಬಹಳ ಆಗುತ್ತದೆ ಎಂದು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹತ್ತು-ಹನ್ನೆರಡು ಪುಟಗಳಷ್ಟು ಉದ್ದದ ಕಾಗದವನ್ನು ಪ್ರವಾಸದಿಂದ ಬಂದ ತಕ್ಷಣ ಬರೆದಿದ್ದೇನೆ. ಜನರಿಂದ ಏನೇನು ಮನವಿಗಳು ಬಂದವು ಮತ್ತು ಯಾವ ತರಹ ಅವುಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ ಎಂದು ಹೇಳಿದ್ದೇನೋ ಅದೇ ರೀತಿಯಾಗಿ ನಾನು ವಿವರವಾಗಿ ಬರೆದಿದ್ದೇನೆ. ಆದನ್ನೆಲ್ಲಾ ಓದುವುದಕ್ಕೆ ಅವರಿಗೆ ಸಾಧ್ಯವಾಗದೇ ಇರಬಹುದು. ಕುಡಿಯುವ ನೀರಿನ ವಿಚಾರದಲ್ಲಿ ಶಾಶ್ವತವಾಗಿ ಕೆಲವು ಪಂಪುಗಳಿಗೆ ರಿಪೇರಿ ಮಾಡುವುದಕ್ಕೆ ಬಿಡಿಭಾಗಗಳು ಇಲ್ಲ. ರಿಪೇರಿ ಮಾಡುವವರು ಇಲ್ಲ. ಹೀಗೆಲ್ಲಾ ಅನೇಕ ಜನರು ಹೇಳುತ್ತಿದ್ದಾರೆ. ರಾಯಚೂರು, ಸಿಂಧಗಿ, ಜಮಖಂಡಿ ರಾಯಭಾಗ, ಸಂಕೇಶ್ವರ, ಚಿಕ್ಕೋಡಿ, ಖಾನಾಪುರ, ಗುಲ್ಬರ್ಗಾ, ಬೀದರ್, ಕಡೆಗಳಲ್ಲಿ ಜನವರಿಯಿಂದ ಪ್ರತಿವರ್ಷ ಕುಡಿಯುವ ನೀರಿನ ಸಮಸ್ಯೆ ಇದೆ. ಬಿಜಾಪುರಕ್ಕೆ ನೀರು ಬರಬೇಕಾಗಿದ್ದರೆ ಕೊರವೆಹಳ್ಳಕ್ಕೆ ಅನೇಕ ರೈತರು ತಡೆಗೋಡೆ ಕಟ್ಟಿಕೊಂಡು ವ್ಯವಸಾಯಕ್ಕೆ ನೀರು ಬಿಡುತ್ತಿರುವುದರಿಂದ ಕುಡಿಯುವ ನೀರಿಗೆ ಅಭಾವ ಬಂದಿದೆಯೆಂದು ಜನರು ಹೇಳಿಕೊಂಡಿದ್ದಾರೆ.

ಇನ್ನು ಲೋಕೋಪಯೋಗಿ ಇಲಾಖೆ ವಿಚಾರದಲ್ಲಿ ಹೇಳುವುದಕ್ಕೆ ಹೋದರೆ, ಮಾನ್ವಿಗೆ ಬರುವ ಕಾಲುವೆಗೆ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇದು ಎರಡು ಸಾರಿ ಒಡೆದು ಹೋಗಿದೆ. ಈ ರೀತಿ ಒಡೆದು ಹೋಗಲು ಕಾರಣವೇನು ? ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದುದು ಎಲ್ಲಿ ಹೋಯಿತು. ಈ ರೀತಿ ಒಡೆದು ಹೋಗುವ ಕೆಲಸಕ್ಕೆ ಏಕೆ ಇಷ್ಟು ಹಣ ಖರ್ಚು ಮಾಡಿದರು. ಏಕೆ ಈ ತರಹ ಕೆಲಸ ಮಾಡುತ್ತಾರೆ ? ಇಷ್ಟು ಖರ್ಚು ಮಾಡಿದರೂ ಕೂಡ ಅಲ್ಲಿಯ ಜನಕ್ಕೆ ಕುಡಿಯುವ ನೀರಿಗೆ ತೊಂದರೆ ಆಗಿದೆ. ಇನ್ನು ರಾಯಚೂರು ಜಿಲ್ಲೆಯಲ್ಲಿ ೧೯೮೬ರಲ್ಲಿ ಲಿಫ್ಟ್ ಇರಿಗೇಷನ್‌ಗಾಗಿ ೨೦-೩೦ ಸಾರಿ ಶಂಕುಸ್ಥಾಪನೆ ನಡೆಸಿದ್ದಾರೆ. ಆದರೆ ಕಾಮಗಾರಿ ಕೆಲಸಕ್ಕೆ ಮಾತ್ರ ಹಣ ಬಿಡುಗಡೆ ಮಾಡಿಲ್ಲ. ಇದನ್ನು ೨೦-೩೦ ಸಾರಿ ಶಂಕುಸ್ಥಾಪನೆ ಮಾಡಿದ್ದರೂ ಒಂದು ಕೆಲಸವೂ ನಡೆದಿಲ್ಲ. ಕುರಗುಂಡ ಗ್ರಾಮದಲ್ಲಿ ಒಂದು ಕೆರೆ ಇದೆ ಇದು ಒಬ್ಬರಿಗೆ ಮಾತ್ರ ಸಂಬಂಧಿಸಿದೆ ಅವರ ಸರ್ವೆ ನಂಬರ್ ಅದರ ಕೆಳಗೆ ೪-೫ ಎಕರೆ ಜಮೀನು ಇದೆ, ಇದು ಅವರಿಗೆ ಮಾತ್ರ ಅನುಕೂಲ ಆಗುತ್ತಾ ಇದೆ. ಇದಕ್ಕೆ ಪ್ರತಿ ವರ್ಷ ಸರ್ಕಾರದವರು ೪೦-೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇವರಿಗೆ ಯಾರೂ ಹೇಳುವವರು, ಕೇಳುವವರು ಇಲ್ಲ. ಹೀಗೆ ಅನೇಕ ಕೆಲಸಗಳು ನಡೆಯುತ್ತಾವೆ. ದೇವದುರ್ಗ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿ ಕೆಲಸಗಳ ಬಗ್ಗೆ ರೋಡಿಗೆ ಮಣ್ಣು

ಹಾಕಿ ಜನರಿಗೆ ಕೆಲಸ ಕೊಡುತ್ತಿದ್ದಾರೆ. ಅಲ್ಲಿನ ಜನ ನಮಗೆ ಈತರಹ ಮಾಡುವ ಬದಲು ಕೃಷ್ಣದಂಡೆ ಚಾನಲ್ ವರ್ಕ್ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಚಾನಲ್ ವರ್ಕ್ ಮಾಡಿಸಿಕೊಟ್ಟರೆ, ನೀರಾವರಿಗೂ ಅನುಕೂಲವಾಗುತ್ತದೆ, ಜೊತೆಗೆ ಬರ ಪರಿಹಾರ ಕೆಲಸವೂ ಆದಂತೆ ಆಗುತ್ತದೆ. ಅದು ಬಿಟ್ಟು ಯಾವುದೋ ರೀತಿಯ ಕೆಲಸ ಮಾಡಿಸಿ, ಬರ ಪರಿಹಾರ ಮಾಡುತ್ತಿದ್ದಾರೆ ಎಂದು ಅಲ್ಲಿನ ಜನರು ದೂರುತ್ತಿದ್ದಾರೆ. ಇಲ್ಲಿ ಇನ್ನೊಂದು ತಮಾಷೆಯಾಗುತ್ತಿದೆ ಯು.ಕೆ.ಪಿ. ಇಲ್ಲಿಂದ ಯಾರಾದರೂ ಒಂದು ಚೀಟಿ ಬರೆದುಕೊಟ್ಟರೆ ಸಾಕು, ಅವರಿಗೆ ೨೦ ಲಕ್ಷ ರೂಪಾಯಿಗಳ ಕೆಲಸ ಕೊಡುತ್ತಿದ್ದಾರೆ. ಈ ರೀತಿ ೪ ಜನರಿಗೆ ೨೦ ಲಕ್ಷ ರೂಪಾಯಿಗಳ ಕೆಲಸವನ್ನು ಕೊಟ್ಟಿದ್ದಾರೆ. ಇದು ಯಾವತರಹ ಕೆಲಸ ಕೊಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಮುಖ್ಯಮಂತ್ರಿಗಳಿಗೆ ದೀರ್ಘವಾದ ಪತ್ರ ಬರೆದಿದ್ದೇನೆ. ಅವರು ಇನ್ನೂ ಯಾವುದಕ್ಕೂ ಜವಾಬು ಬರೆದಿಲ್ಲ. ರಾಯಚೂರು, ಶಹಪುರ, ಜೇವರ್ಗಿ ಇಲ್ಲೆಲ್ಲಾ ಕೆಲಸ ಮಾಡಿರುವವರಿಗೆ ಹಣ ಕೊಟ್ಟಿಲ್ಲ. ನಾನು ಈ ವಿಚಾರವಾಗಿ ಹೇಳದೇ ಇದ್ದರೂ, ಆಗದೇ ಇರುವ ಕೆಲಸಗಳ ಬಗ್ಗೆ ಹೇಳುತ್ತೇನೆ. ಅನಂತರ ಹಳಿಯಾಳ ಭಾಗದಲ್ಲಿ ಎಲೆಕ್ಟ್ರಿಸಿಟಿ ವೈರ್ ಕೊಟ್ಟಿಲ್ಲವೆಂದು ಅಲ್ಲಿನ ಜನ ಹೇಳುತ್ತಿದ್ದಾರೆ. ಎಲ್ಲಿ ನೋಡಿದರೂ ಇದು ಆಗಿಲ್ಲ ಅದು ಆಗಿಲ್ಲ. ಎಂಬ ದೂರುಗಳೇ ಜಾಸ್ತಿ ಕೇಳಿ ಬರುತ್ತಿವೆ. ಜನಗಳು ಇಂಥಾದ್ದು ನಮಗೆ ಆಗಿದೆ ಎಂದು ಸಂತೋಷವಾಗಿ ಹೇಳಿದ್ದು ಎಲ್ಲೂ ಕಂಡುಬರಲಿಲ್ಲ. ಇನ್ನು ಬೆಳಗಾಂ ಜಿಲ್ಲೆಯ ಮಾರ್ಕಂಡೇಯ ಯೋಜನೆ ವಿಚಾರ ಹೇಳಿದ್ದಾರೆ. ಮೊದಲಿನಿಂದಲೂ ಇದರ ಬಗ್ಗೆ ಆಗಬೇಕಾದ ಕೆಲಸ ನಡೆಯುತ್ತಾ ಇಲ್ಲ. ಈ ಯೋಜನೆಯನ್ನು ಹೇಗೆ ಮಾಡುತ್ತಾರೋ, ಎಂದು ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿ ಸುಮಾರು ಅಧಿಕಾರಿಗಳನ್ನು ನೋಡಿದೆ. ೨೦ ಪರ್ಸೆಂಟ್ ಬೆಳೆ ಆಗುವುದು ಕಷ್ಟವಿದೆಯೆಂದು ಅಫಿಷಿಯಲ್ ಆಗಿ ಹೇಳುತ್ತಿದ್ದಾರೆ. ಜನಗಳಿಗೆ ತೊಂದರೆ ಇದೆ, ಈ ರೀತಿಯ ಬರ ಪರಿಹಾರಕ್ಕಾಗಿ ಏನಾದರೂ ಮಾಡಬೇಕಾಗುತ್ತದೆ. ಇನ್ನು ಕಷ್ಟದಲ್ಲಿರತಕ್ಕ ಜನರಿಗೆ ಫುಡ್ ವಿತರಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ನಾನು ಮೊದಲೇ ಹೇಳಿದೆ. ಈ ಬರ ಪರಿಹಾರ ಕಾರ್ಯಗಳ ವಿಚಾರದಲ್ಲಿ, ಫುಡ್ ವಿತರಣೆಯಲ್ಲಾಗಲೀ, ಕುಡಿಯುವ ನೀರಿನ ವಿಚಾರದಲ್ಲಾಗಲೀ, ಏನಾದರೂ ಕೆಲಸ ಕೊಡುವುದರಲ್ಲಾಗಲೀ, ಅಧ್ಯಕ್ಷರೇ, ದಯಮಾಡಿ ರಾಜಕೀಯ ಬೆರೆಸಬಾರದು. ಈ ಗೇಣುದ್ದ ಹೊಟ್ಟೆ ತುಂಬಿಕೊಳ್ಳುವುದಕ್ಕೆ ಜನ ಬಹಳ ಕಷ್ಟಪಡುತ್ತಿದ್ದಾರೆ. ಈ ಪಾರ್ಟಿ. ಪನ್ನಂಗ ರಾಜಕೀಯ ಮಾಡಬೇಡಿ. ಈ ಆಹಾರ ವಿತರಣೆ ಹೇಗೆ ಆಗುತ್ತಿದೆ ಎಂದರೆ, ಇವನು ಆ ಪಾರ್ಟಿ, ಇವನಿಗೆ ಕೊಡಬೇಡಿ, ಅವನಿಗೆ ಕೊಡಬೇಡಿ ಈ ತರಹ ಹೇಳುವುದು ಸರಿಯಲ್ಲ. ಇದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದೆ. ಇದಕ್ಕೆ ಯಾವುದಾದರೂ ಒಂದು ನಿಯಮವನ್ನು ಹಾಕಿಕೊಳ್ಳಿ ಎಂದು. ಅದಕ್ಕೆ ಅವರು ಎಲ್ಲಿ ಸೊಸೈಟಿಗಳು ಇವೆ ಅಲ್ಲಿ ಕೊಡುತ್ತೇವೆ, ಎಲ್ಲಿ ಸೊಸೈಟಿ ಇಲ್ಲ ಅಲ್ಲಿ ಮಂಡಲ್ ಪಂಚಾಯಿತಿಗೆ ಕೊಡುತ್ತೇವೆ, ಇಲ್ಲವೇ ಯಾರಾದರೂ ಒಳ್ಳೆಯವರು ಮುಂದೆ ಬಂದರೆ ಅವರಿಗೆ ಕೊಡುತ್ತೇವೆಂದರು. ಇವರು ಚೆನ್ನಾಗಿ ಕೆಲಸ ಮಾಡಿಕೊಂಡಿರುವವರಿಗೆ ಕೊಡುವುದಿಲ್ಲ. ನೀವು ಹೇಳಿದವರಿಗೆ ಅವರು ಕೊಡಬೇಕು. ಜಿಲ್ಲಾ ಪರಿಷತ್ತಿನಲ್ಲಿ ಸೆಕ್ರೆಟರಿ ಹೇಳಿದಹಾಗೆ ಕೇಳಬೇಕು. ಅವರು ಹೇಳಿದಹಾಗೆ ಕೇಳದೇ ಇದ್ದರೆ ಸಸ್ಪೆಂಡ್ ಮಾಡುತ್ತಾರೆ. ಇನ್ನೊಂದು ಕಡೆ ಪಾರ್ಟಿ ಪ್ರೆಸಿಡೆಂಟ್ ಹೇಳಿದಹಾಗೆ ಕೇಳಬೇಕು. ಇದು ಒಂದು ತರಹ ಪ್ರೆಸ್ಟೀಜ್ ಇಷ್ಯೂ ಆಗಿದೆ. ಇದನ್ನೂ ಸಹ ಪ್ರೆಸ್ಟೀಜ್ ಇಷ್ಯೂ ಆಗಿ ತೆಗೆದುಕೊಂಡಿದ್ದಾರೆ. ಜನಗಳು ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ ಪ್ರೆಸ್ಟೀಜ್ ಇಷ್ಯೂ ಎಲ್ಲಿ ಬರತ್ತದೆ ? ಹೊಟ್ಟೆ ಮೊದಲು. ಆಮೇಲೆ ಪ್ರೆಸ್ಟೀಜ್, ಹೊಟ್ಟೆ ಮೊದಲು ಸಾಕಿಕೊಳ್ಳಿ ಆಮೇಲೆ ಪ್ರೆಸ್ಟೀಜ್ ಇಷ್ಯೂ ಬರುತ್ತದೆ. ಯಾವುದಕ್ಕೆ ನೋಡಿದರೂ ಪ್ರೆಸ್ಟೀಜ್. ಪ್ರೆಸ್ಟೀಜ್, ಪ್ರೆಸ್ಟೀಜ್, ಲೆಕ್ಕಾಚಾರ ಬೇಡವೇ ? ಇವರಿಗೆ ಸಾಯುವುದಕ್ಕೂ ಪ್ರೆಸ್ಟೀಜ್, ಉಸಿರಾಡುವುದಕ್ಕೂ ಪ್ರೆಸ್ಟೀಜ್, ಮೇಲಕ್ಕೆ ಹೋಗುವುದಕ್ಕೂ ಪ್ರೆಸ್ಟೀಜ್, ಕೆಳಕ್ಕೆ ಬರುವುದಕ್ಕೆ ಪ್ರೆಸ್ಟೀಜ್. ಈ ಪ್ರೆಸ್ಟೀಜ್ ಎನ್ನುವ ವರ್ಡ್ ಕೇಳಿ ಕೇಳಿ ನನಗಂತೂ ಸಾಕಾಗಿ ಹೋಗಿದೆ. ಇವರಿಗೆ ಎಲ್ಲೆಲ್ಲೂ ಅದೇ ಇದ್ದ ಹಾಗೆ ಕಾಣುತ್ತಿದೆ.

ಇನ್ನು ಅಧಿಕಾರಿಗಳ ಸ್ಥಿತಿಯಂತೂ ಹೇಳತೀರದಾಗಿದೆ. ಅಧಿಕಾರಿಗಳು ಹಾಗೆ ಆಡುತ್ತಿದ್ದಕ್ಕೆ ಅವರಿಗೆ ಆಗಿರುವುದು ಸರಿ ಎಂದು ಎನಿಸುತ್ತದೆ. ಕೆಲವು ಅಧಿಕಾರಿಗಳಂತೂ ಫುಟ್‌ಬಾಲ್ ಆದಹಾಗೆ ಆಗಿಹೋಗಿದ್ದಾರೆ. ಬೆಳಗ್ಗೆ ಎಲ್ಲೋ ಸಾಯಂಕಾಲ ಇನ್ನೆಲ್ಲೋ ನಾಳೆ ಎಲ್ಲೋ ಒಂದೂ ಗೊತ್ತಿಲ್ಲದ ಹಾಗೆ ಆಗಿದೆ. ಎಷ್ಟು ಅವರ ಟ್ರಾನ್ಸ್‌ಫರ್‌ಗಳು. ಪಾರ್ಟಿ ಪ್ರೆಸಿಡೆಂಟ್ ಹೇಳಿದಹಾಗೆ ಕೇಳಬೇಕು, ಜಿಲ್ಲಾ ಪರಿಷತ್ ಪ್ರೆಸಿಡೆಂಟ್ ಹೇಳಿದಹಾಗೆ ಕೇಳಬೇಕು, ಮಂಡಲ್ ಪಂಚಾಯತ್ ಪ್ರಧಾನ್ ಹೇಳಿದ

ಹಾಗೆ ಕೇಳಬೇಕು, ಎಷ್ಟು, ಜನ ಹೇಳುವುದು, ಯಾರ ಮಾತು ಕೇಳಬೇಕು, ಒಂದೂ ಗೊತ್ತಿಲ್ಲ. ಇವರಿಗೆಲ್ಲಾ ಏನಾದರೂ ರೂಲ್ಸ್ ರೆಗ್ಯುಲೇಷನ್ಸ್ ಗೊತ್ತಿದೆಯೋ, ಯಾರು ಯಾರೋ ಓಟು ಹಾಕಿದರೂ, ಇವರು ಗೆದ್ದು ಬಂದು ಬಿಟ್ಟಿದರು. ಇವರು ಹೇಳಿದಹಾಗೆ ಆಫೀಸರ್ಸ್ ಎಲ್ಲಾ ಕೇಳಬೇಕು. ಜನರಿಗೆ ಹೊಟ್ಟೆ ತುಂಬಿಸುವ ವಿಚಾರದಲ್ಲಿ, ಆಹಾರ ಹಂಚುವ ವಿಚಾರದಲ್ಲಿ ಇವರು ಪ್ರೆಸ್ಟೀಜ್ ಇಷ್ಯೂ ಮಾಡುತ್ತಿದ್ದಾರೆ. ಯಾರ ಮನೆಯದೋ ಆಹಾರ. ಕೊಡುವವರು ಸೆಂಟ್ರಲ್ ಗೌರ್ನಮೆಂಟ್‌ನವರು, ಸರಕಾರ ಕೊಡತಕ್ಕದ್ದು, ಅದನ್ನು ಜನಗಳಿಗೆ ಹಂಚುವುದರಲ್ಲಿ ಪ್ರೆಸ್ಟೀಜ್ ಇಷ್ಯೂ. ಈ ರೀತಿ ಮಾಡಿ ಕೊಂಡು ಬಂದಿದ್ದೀರಿ. ನೀವು ಹೇಳಿದವರಿಗೆ ಕೊಡಬೇಕು. ಅವರು ಬಜಾರ್‌ನಲ್ಲಿ ಮಾರಿಕೊಂಡು ಹೋಗಬೇಕು. ಅವರಿಗೆಲ್ಲಾ ಆಹಾರಕ್ಕೆ ಬದಲು ಪ್ರೆಸೆಂಟೇಷನ್ ಕೊಟ್ಟುಬಿಡಿ. ಸಕ್ಕರೆ ಇಷ್ಟು ಚೀಲ ಕೊಡಬೇಕು, ಅದರ ಬದಲು ಇಷ್ಟು ದುಡ್ಡು, ಅಕ್ಕಿ ಬದಲು ಇಷ್ಟು ದುಡ್ಡು ಎಂದು ಕೊಟ್ಟುಬಿಡಿ, ಅದನ್ನು ನಿಮ್ಮ ಪ್ರಧಾನ್ ತೆಗೆದುಕೊಂಡು ಹೋಗಲಿ, ಜೋಳದ ಬದಲು ಇಷ್ಟು ದುಡ್ಡು ಎಂದು ಕೊಡಿ, ಅದನ್ನು ನಿಮ್ಮ ಪಾರ್ಟಿ ಪ್ರೆಸಿಡೆಂಟ್ ತೆಗೆದುಕೊಂಡು ಹೋಗಲಿ. ಎಲ್ಲರಿಗೂ ಪ್ರೆಸೆಂಟೇಷನ್ ಕೊಟ್ಟು ಬಿಡಿ. ಗಿಫ್ಟ್ ಕೊಟ್ಟುಬಿಡಿ. This has become gifts from the Government.

ಆಹಾರದ ವಿಚಾರ ಹೀಗೆ, ಇನ್ನು ರೂರಲ್ ಡೆವಲಪ್‌ಮೆಂಟ್, ಹೌಸ್ ಡಿಸ್ಟ್ರಿಬ್ಯೂಷನ್ ವಿಚಾರ. ಮನೆಗಳ ವಿಚಾರದಲ್ಲಿ ಇದು ಮೊದಲೇ ಎಲ್ಲಾ ಆಕ್ಷನ್ ಪ್ಲಾನ್ ಆಗಿ, ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಅಪ್ರೂವ್ ಆಗಿ, ಎಲ್ಲಾ ಆಗಿದೆ. ಆದರೆ ಈಗ ಇಲ್ಲಿ ಬೇಡ ಎಂದು ಹೇಳುತ್ತಿದ್ದಾರೆ, ಆದುದರಿಂದ ಅಲ್ಲಿ ಕೊಡುತ್ತೇವೆ, ಅವನಿಗೆ ಬೇಡ ಇವನಿಗೆ ಕೊಡು. ಇವನು ಕೇಳಿದ್ದಾನೆ ಆದ್ದರಿಂದ ಅವನಿಗೆಕೊಡು. ಈ ರೀತಿ ಮಾಡುತ್ತಿದ್ದಾರೆ. ನಮ್ಮ ಗುಂಡಲುಪೇಟೆ ತಾಲ್ಲೂಕಿನಲ್ಲಿ ಕೆಲವು ಕಡೆ ಈ ರೀತಿ ಆಗಿದೆ. ಹೆಸರು ಹೇಳುತ್ತೇನೆ, ಬೇಕಾದರೆ ಬರೆದುಕೊಳ್ಳಿ, ಬಾವನಬೀಡು, ಶಾಡರಹಳ್ಳಿ, ಎಲಿಯೂರು, ಪುತ್ತನಪುರ, ಈ ಮುಂತಾದ ಗ್ರಾಮಗಳಲ್ಲಿ ಈ ರೀತಿ ಆಗಿದೆ. ಇನ್ನು ಸಿಂಧಗಿ ತಾಲ್ಲೂಕಿನಲ್ಲಿ ಹಿಟ್ಟನಹಳ್ಳಿ ತಾಂಡಾದಲ್ಲಿ ಈ ರೀತಿ ಆಗಿದೆ. ಅದು ತಾಂಡಾದಲ್ಲಿ. ಅಲ್ಲಿ ೧೨ ಜನರಿಗೆ ಮನೆ ಕೊಟ್ಟಿರುವುದನ್ನು ಈಗ ಬಿಡಿಸಿ ಬಿಟ್ಟಿದ್ದಾರೆ. ಆಮೇಲೆ ಇದರಲ್ಲಿ ಇನ್ನೂ ಒಂದು ತಮಾಷೆ ಎಂದರೆ, ಮನೆ ಜಮೀನು ಇರುವವರಿಗೆ ಎರಡೆರಡು ಮನೆ ಕೊಟ್ಟಿದ್ದಾರೆ ಎರಡೆರಡು ಮನೆ. ಎಂತಹ ವಿತರಣೆ ? ಎಂತಹ ಚೆಂದದ ವಿತರಣೆ. ಇದು ಎಂತಹ ರೂರಲ್ ಡೆವಲಪ್‌ಮೆಂಟ್. ನಮ್ಮ ಅಧಿಕಾರ ನಿಮಗೆ, ನಮ್ಮ ಮನೆ ನಿಮಗೆ, ನಮ್ಮ ಊಟ ನಿಮಗೆ, ನಮ್ಮ ದುಡ್ಡು ನಿಮಗೆ, ಈ ರೀತಿ ಆಗಿದೆ.

ಆಮೇಲೆ ಎಲ್ಲಿ ನೋಡಿದರೂ ಮಂಡಲ ಪಂಚಾಯತಿಗಳಿಗೆ ಸೆಕ್ರೆಟರಿಗಳನ್ನು ಅಪಾಯಿಂಟ್ ಮಾಡಿಲ್ಲ. ಕೆಲವು ಮಂಡಲ ಪಂಚಾಯತಿಗಳಿಂದಲೂ ಪ್ಲಾನ್ ಬಂದು ಬಿಟ್ಟಿದೆ. ಆದರೆ ಕೆಲವು ಮಂಡಲಗಳಿಗೆ ಇನ್ನೂ ಸೆಕ್ರೆಟರಿಯೇ ಅಪಾಯಿಂಟ್ ಆಗಿಲ್ಲ. ಅಲ್ಲಿಂದ ಇನ್ನೂ ಪ್ಲಾನ್ ಬಂದಿಲ್ಲ. ಏತಕ್ಕೆ ಪ್ಲಾನ್ ಬಂದಿಲ್ಲ ಎಂದರೆ, ಸೆಕ್ರೆಟರಿನೇ ಅಪಾಯಿಂಟ್ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಎಲ್ಲಾ ಅವರವರ ಮನೆಯಲ್ಲೇ ಆಫೀಸ್ ಆಗಿಹೋಗಿದೆ. ಲಿಂಗಾಯಿತರು ಇದ್ದರೆ, ಲಿಂಗಾಯಿತರ ಮನೆಯಲ್ಲಿ ಆಫೀಸ್. ಬ್ರಾಹ್ಮಣರು ಇದ್ದರೆ, ಬ್ರಾಹ್ಮಣರ ಮನೆಯಲ್ಲೇ ಆಫೀಸ್, ಒಕ್ಕಲಿಗರು ಇದ್ದರೆ, ಒಕ್ಕಲಿಗರ ಮನೆಯಲ್ಲೇ ಆಫೀಸ್, ಈ ರೀತಿ ಆಗಿದೆ. ಹರಿಜನರು ಅವರ ಮನೆಯೊಳಗೆ ಬರುವಹಾಗೆ ಇಲ್ಲ, ಬರುವುದಕ್ಕೆ ಬಿಡುವ ಹಾಗೂ ಇಲ್ಲ. ಹೀಗೆ ನಡೆಯುತ್ತಿದೆ. ಬೇಕಾದರೆ ಸಿರಗುಪ್ಪದಲ್ಲಿ ಹೋಗಿ ನೋಡಿ ಯಾರ ಮನೆಯಲ್ಲಿ ಆಫೀಸ್ ನಡೆಯುತ್ತಿದೆ ಎಂದು ಯಾರು ಹೋಗುವುದಕ್ಕೆ ಆಗುವುದಿಲ್ಲ, ಬಡಬಗ್ಗರು ಹೋಗಿ ಏನೂ ಕೇಳುವಹಾಗೆ ಇಲ್ಲ. ಇದು ನೀವು ಆಡಳಿತ ನಡೆಸುತ್ತಿರುವ ರೀತಿ. ರಾಯಬಾಗ್ ತಾಲ್ಲೂಕಿನಲ್ಲಿ ಮೀನ್‌ಸಾಲಿ ಕೆರೆ ಮತ್ತು ಬ್ಯಾಕೋಡ್ ಕೆರೆ ಎಂದು ಎರಡು ಕೆರೆಗಳು ಇವೆ. ಈ ಕೆರೆಯ ನೀರನ್ನು ಅಲ್ಲಿನ ಶಾಸಕರೆ ಉಪಯೋಗಿಸಿಕೊಂಡು ಜನರು ಹತ್ತಿರ ಬರುವುದಕ್ಕೆ ಬಿಡುವುದಿಲ್ಲವೆಂದು ತಿಳಿದು ಬಂದಿದೆ. ಇದರ ಬಗ್ಗೆ ಸ್ವಲ್ಪ ತಾವು ನೋಡಬೇಕು. ಅಲ್ಲಿಂದ ಶಿಕ್ಷಣದ ಬಗ್ಗೆ ಹೇಳಬೇಕಾದರೆ, ಎಷ್ಟೋ ಶಾಲೆಗಳಲ್ಲಿ ಟೀಚರ್ಸ್‌ಗಳನ್ನೇ ಅಪಾಯಿಂಟ್ ಮಾಡಿಲ್ಲ. ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡುವುದಕ್ಕೆ ಕಮಿಟಿಯನ್ನು ನೇಮಿಸಿದ್ದೇವೆಂದು ಹೇಳಿದ್ದಾರೆ. ಕಮಿಟಿಯನ್ನು ನೇಮಿಸಿದರೆ ಟೀಚರ್ಸ್‌ಗಳನ್ನು ನೇಮಿಸಿದ ಹಾಗೆ ಆಗುತ್ತದೆಯೇ ? ಈಗಾಗಲೇ ಇರುವ ಟೀಚರ್ಸ್‌ಗಳಿಗೆ ಸರಿಯಾಗಿ ಸಂಬಳ ಕೊಟ್ಟಿಲ್ಲ. ಬರಗಾಲ ಬಂದಿದೆ ಎಂದು ಅವರಿಗೆ ಸಂಬಳ ಕೊಡಬಾರದೇ ? ಅವರು ಹೇಗೆ ಜೀವನ ಮಾಡಬೇಕು ?

ಶ್ರೀ ಬಿ. ಸೋಮಶೇಖರ್.—ಟೀಚರ್ಸ್‌ಗಳನ್ನು ನೇಮಕ ಮಾಡುವುದಕ್ಕೆ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿದ್ದೇವೆ. ಇನ್ನು ಎರಡು ತಿಂಗಳೊಳಗೆ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನು ಹತ್ತು ದಿವಸ ಮಾತ್ರ ಅಧಿವೇಶನ ನಡೆಯುತ್ತದೆ, ಆಮೇಲೆ, ನಾವು ಹೊರಟು ಹೋದರೆ ನಿಮ್ಮ ಮುಖ ನೋಡಬೇಕಾದರೆ ಮುಂದಿನ ವರ್ಷ ನೋಡಬೇಕು. ಅಲ್ಲಿಯವರೆಗೆ ನೋಡುವ ಹಾಗಿಲ್ಲ. ಇನ್ನು ಎರಡು ತಿಂಗಳೊಳಗೆ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುತ್ತೇವೆಂದು ಅವರು ಉತ್ತರದಲ್ಲಿ ಬರೆದುಕೊಟ್ಟರು, ಇವರು ಅದನ್ನು ಓದಿಬಿಟ್ಟರು. ಟೀಚರ್ಸ್‌ಗಳಿಗೆ ಸಂಬಳ ಕೊಡುವುದಕ್ಕೆ ನಿಮಗೆ ಏನಾಗಿದೇರಿ ? ಟೀಚರ್ಸ್‌ಗಳಿಗೆ ಸಂಬಳ ಕೊಡುವುದು ಬೇಡವೆ ? ಅವರಿಗೇನು ಸಂಸಾರ ಇಲ್ಲವೆ ? ಅವರು ಸಂಸಾರ ಮಾಡುವುದು ಬೇಡವೆ ? ಸಂಬಳ ಕೊಟ್ಟಿಲ್ಲವೆಂದು ಬಡೆದುಕೊಳ್ಳುತ್ತಿದ್ದಾರೆ. ಅವರಿಗೆ ಮಕ್ಕಳುಮರಿ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಎಲ್ಲಾ ಕಡೆಯೂ ಟೀಚರ್ಸ್‌ಗಳಿಗೆ ಸಂಬಳವನ್ನು ಕೊಟ್ಟಿದ್ದೇವೆ. ಕೆಲವು ಕಡೆ ಮಾತ್ರ ೧೫ ದಿವಸ ತಡ ಆಗಿತ್ತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಇವರು ಹೊಟ್ಟೆ ತುಂಬಿದವರು. ಸಂಬಳವನ್ನೇ ನಂಬಿಕೊಂಡಿರುವ ಅವರ ಹೊಟ್ಟೆ ಪಾಡೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜ್ಯದಲ್ಲಿ ಯಾವ ಸರ್ಕಾರಿ ನೌಕರನಿಗೂ ಸಂಬಳ ಕೊಡದೇ ಇಲ್ಲ. ಎಲ್ಲರಿಗೂ ಕೊಡಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾರಿಗೆ ಇನ್ನೂ ಸಂಬಳ ಕೊಟ್ಟಿಲ್ಲ ಎನ್ನುವ ಬಗ್ಗೆ ನಾನು ಪಟ್ಟಿಯನ್ನು ಕೊಡುತ್ತೇನೆ. ಆಗ ತಾವು ಏನು ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್.—ಸಂಬಳ ಕೊಡದೇ ಇದ್ದರೆ ಬೊಮ್ಮಾಯಿಯವರು ರಾಜೀನಾಮೆ ಕೊಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಬಳ ಕೊಡದೇ ಇದ್ದರೆ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಒಂದು ನಿಯಮ ಮಾಡಿದ್ದರೆ ಕೊಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ಸಂಬಳ ಕೊಟ್ಟಿದ್ದೇವೆಂದು ಸದನದಲ್ಲಿ ಹೇಳಿ ಸಂಬಳ ಕೊಡದೇ ಇದ್ದಾಗ ರಾಜೀನಾಮೆ ಕೊಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೊದಲು ಟೀಚರ್ಸ್‌ಗಳ ಹೊಟ್ಟೆಗೆ ಅನ್ನ ಹಾಕಿ. ಅವರಿಗೆ ಹುಲ್ಲು ಮೇಯಿಸಬೇಡಿ. ಮಾನ್ಯ ಜೀವರಾಜ್ ಆಳ್ವಾರವರು ಸದನದಲ್ಲಿ ಇಲ್ಲ. ದೇವದುರ್ಗದಲ್ಲಿ ಒಂದೇ ಒಂದು ಕಾಲೇಜು ಇತ್ತು. ಆ ಕಾಲೇಜನ್ನು ಸಹ ಇವರು ಮುಚ್ಚಿ ಬಿಟ್ಟಿದ್ದಾರೆ, ಒಂದೊಂದು ಕಡೆ ಎರಡು ಮೂರು ಕಾಲೇಜುಗಳನ್ನು ತೆರೆದಿದ್ದಾರೆ. ದೇವದುರ್ಗದಲ್ಲಿ ಇದ್ದ ಒಂದೇ ಒಂದು ಸರ್ಕಾರಿ ಕಾಲೇಜನ್ನು ಇವರು ಮುಚ್ಚಿದ್ದಾರೆ. ಅಲ್ಲಿನ ಮಕ್ಕಳೆಲ್ಲಾ ನಮಗೆಲ್ಲಾ ಇದ್ದದ್ದು ಒಂದೇ ಕಾಲೇಜು ಅದನ್ನು ಸರ್ಕಾರ ಮುಚ್ಚಿಬಿಟ್ಟಿದೆಯೆಂದು ಹೇಳಿದರು. ಆಮೇಲೆ ಸರ್ಕಾರ ರೈತರುಗಳಿಂದ ಸಾಲ ವಸೂಲಿ ಮಾಡುವುದಕ್ಕೆ ಹೊರಟಿದೆ. ಮಳೆ ಬೆಳೆ ಇಲ್ಲದೆ ಇರುವಂಥ ಈ ಕಾಲದಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ನವರು ಮತ್ತು ಇತರೆ ಬ್ಯಾಂಕುಗಳವರು ಪೆಂಡಿಂಗ್ ಡ್ಯೂಸ್, ಸಹಕಾರಿ ಸಂಘದ ಸಾಲ, ನೀರಿನ ದರ, ಕಂದಾಯ ವಸೂಲಿ, ಪಂಚಾಯಿತಿ ವಸೂಲಿ, ಎಂದು ಗಾಯದ ಮೇಲೆ ಉಪ್ಪು ಹಚ್ಚಿ ಹಚ್ಚಿ ರೈತರುಗಳ ಮನೆಗಳ ಮೇಲೆ ದಾಳಿ ಮಾಡಿ ಅವರ ಮನೆಯಲ್ಲಿದ್ದ ಕುಡಿಕೆ ಮಡಿಕೆಗಳನ್ನು ಹೊರಗೆ ಎತ್ತಿಹಾಕಿ ನಿಮ್ಮ ಅಧಿಕಾರಿಗಳು ಪುಣ್ಯ ಕಟ್ಟಿಕೊಳ್ಳುತ್ತಿದ್ದಾರೆ. ದಯಮಾಡಿತಾವೂ ಈ ಪುಣ್ಯ ಕಾರ್ಯ ದಲ್ಲಿ ಭಾಗಿಗಳಾಗಬೇಡಿ. ನನಗಂತೂ ಈ ಅಟ್ರಾಸಿಟೀಗಳು, ಮರ್ಡರ್‌ಗಳು ಜನಗಳ ಮೇಲೆ ಆಗುತ್ತಿರುವುದನ್ನು ಕೇಳಿ ಕೇಳಿ ತಲೆ ತಿರುಗುತ್ತಿದೆ.

ನಾನು ಹೋದ ಕಡೆಗಳಲ್ಲಿ ಜನಗಳ ಕಷ್ಟಗಳನ್ನು ಕೇಳಿ, ಕೇಳಿ, ನನ್ನ ತಲೆ ತಿರುಗುತ್ತಾ ಇತ್ತು. ಮಾನ್ವಿ ತಾಲ್ಲೂಕಿನಲ್ಲಿ ಮೂರು ರಾಜಕೀಯ ಮರ್ಡರ್‌ಗಳು ಆಗಿವೆ. ಆ ಬಗ್ಗೆ ಪತ್ರಿಕೆಯಲ್ಲಿ ಕೂಡ ವಿವರ ಬಂದಿದೆ. ಅಂತಹ ಕಡೆಗಳಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೇವರೆ, ಅಲ್ಲಿಯ

ಶಾಸಕರು ಹೋಗಿ ಸಂಬಂಧಪಟ್ಟ ಆಫೀಸಿನ ಮುಂದೆ ಉಪವಾಸ ಕುಳಿತುಕೊಳ್ಳುತ್ತಾರೆ, ಇಂತಹ ತಮಾಷೆಯನ್ನು ನೋಡಿದ್ದೀರಾ ? ತಪ್ಪಿತಸ್ಥರನ್ನು ಶಿಕ್ಷಿಸುವ ಬದಲು, ಕಾನೂನು ಕ್ರಮಕ್ಕೆ ಒಳಪಡಿಸುವ ಹಂತದಲ್ಲಿ ಶಾಸಕರು ಹೀಗೆ ಆಫೀಸಿನ ಮುಂದೆ ಉಪವಾಸ ಕುಳಿತು ತಪ್ಪಿತಸ್ಥರ ಬಿಡುಗಡೆಗೆ ಒತ್ತಾಯ ಮಾಡುವುದು. ಇಂತಹ ಸನ್ನಿವೇಶದಲ್ಲಿ ಪೋಲೀಸ್ ಇಲಾಖೆ ತನ್ನ ಕರ್ತವ್ಯವನ್ನು ಹೇಗೆ ನಿರ್ವಹಣೆ ಮಾಡಲು ಸಾಧ್ಯವಾದೀತು ? ಇವೇ ಮುಂತಾಗಿ ಅನೇಕ ವಿಷಯಗಳನ್ನು ಒಳಗೊಂಡ ಕಾಗದವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಬರೆದಿದ್ದೇನೆ. ಮೊನ್ನೆ ಏನೋ ಒಂದೊಂದು ಮಂಡಲಕ್ಕೆ ಒಂದು ಕೆಲಸವನ್ನು ಕೊಡಿಸುತ್ತೇನೆ ಎಂದು ಏನೋ ಹೇಳಿದ್ದಾರೆ. ಒಂದು ಮಂಡಲಕ್ಕೆ ೫೦–೬೦ ಸಾವಿರ ರೂಪಾಯಿಗಳನ್ನು ನೀವು ಕೊಟ್ಟರೆ ಅದು ಸಾಕಾಗುತ್ತದಯೇ ? ಒಂದೊಂದು ಮಂಡಲದಲ್ಲಿ ೬–೭ ಗ್ರಾಮಗಳು ಇರುತ್ತವೆ. ಅವುಗಳಲ್ಲಿ ಕೆಲವು ದೊಡ್ಡ ಗ್ರಾಮಗಳು ಕೂಡ ಇರುತ್ತದೆ. ನಮ್ಮ ಕಡೆಯಂತೂ ದೊಡ್ಡ ದೊಡ್ಡ ಗ್ರಾಮಗಳು ಇರುವ ಮಂಡಲಗಳು ಹೆಚ್ಚು ಇವೆ. ಒಂದೊಂದು ಮಂಡಲಕ್ಕೆ ಒಂದು ಕಾಮಗಾರಿಯನ್ನು ಕೊಟ್ಟರೆ ಅದು ಸಾಕಾಗುತ್ತದೆಯೇ ? ಮೊದಲೇ ಏನೇನೂ ಗತಿ ಇಲ್ಲದೇ ಇರುವ ಜನಗಳು ಈಗ ಕಂಗಾಲಾಗಿ ಹೋಗಿದ್ದಾರೆ. ಆ ಜನಗಳಿಗೆ ಕೆಲಸ, ಧಾನ್ಯಗಳನ್ನು ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ತಾವುಗಳು ದಯವಿಟ್ಟು ಏನೂ ತಿಳಿದುಕೊಳ್ಳಬಾರದು. ನಿಮ್ಮ ಅಧಿಕಾರಿಗಳಿಗೆ ನೀವು ಎಚ್ಚರಿಕೆ ಕೊಡಬೇಕು. ಬರ ಬಂದರೆ ಅವರಿಗೆ ವರ ಬಂದ ಹಾಗೆ ಆಗುತ್ತದೆ. ಬರದ ಪರಿಸ್ಥಿತಿಯನ್ನು ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಬರ ಬಂದ ಕಾಲದಲ್ಲಿ ಸ್ಕೂಟರ್ ಇಟ್ಟುಕೊಂಡ ಅಧಿಕಾರಿ ಬುಲೆಟ್ ಇಟ್ಟುಕೊಳ್ಳುತ್ತಾನೆ. ಬುಲೆಟ್ ಇಟ್ಟುಕೊಂಡಿದ್ದವನು ಕಾರು ಕೊಂಡುಕೊಳ್ಳುತ್ತಾನೆ. ಬರಗಾಲ ಪರಿಹಾರ ಕಾಮಗಾರಿಗಳ ಮೂಲಕ ಜನರ ಕಷ್ಟ ನಿವಾರಣೆ ಆಗುವುದರ ಬದಲು, ಅಧಿಕಾರಿಗಳ ಪರಿಸ್ಥಿತಿ ಸುಧಾರಣೆಯಾಗುತ್ತದೆ. ಅವರ ಬರ ಪರಿಹಾರ ಆಗುತ್ತದೆಯೇ ಹೊರತು ಜನಗಳ ಬರ ಪರಿಹಾರ ಆಗುವುದಿಲ್ಲ. ಹೀಗೆ ಆಗುವುದಕ್ಕೆ ಅವಕಾಶವನ್ನು ಮಾಡಿಕೊಡಬಾರದು. ಅಧಿಕಾರಿಗಳು ಏನೋ ಇಷ್ಟು ಪ್ಲ್ಯಾನ್ ಪವರ್—ಅದು ಹಾಗೆ, ಇದು ಹೀಗೆ ಎಂದೆಲ್ಲಾ ಹೇಳುತ್ತಾ ಇರುತ್ತಾರೆ. ಒಂದು ಕಡೆ ೨೦ ಜನಗಳಿಂದ ಕೆಲಸ ಮಾಡಿಸಿ, ಆ ಕೆಲಸಕ್ಕೆ ೨೦೦ ಜನರು ಕೆಲಸ ಮಾಡಿದ್ದಾರೆ ಎಂದು ಪುಸ್ತಕದಲ್ಲಿ ತೋರಿಸಿ, ದುಡ್ಡು ತಿಂದು ಹಾಕುತ್ತಿದ್ದಾರೆ. ಈ ಮೂಲಕ ಅಧಿಕಾರಿಗಳು ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಈ ಎಲ್ಲಾ ವಿಚಾರಗಳು ನಿಮಗೂ, ನಮಗೂ ಗೊತ್ತಿದೆ. ಕೇಂದ್ರ ಸರಕಾರದವರಿಗೂ ಕೂಡ ಗೊತ್ತಿದೆ. ಆದ್ದರಿಂದ ಅವರು ಈ ವಿಚಾರದಲ್ಲಿ ಯೋಚನೆ ಮಾಡುತ್ತಾ ಇದ್ದಾರೆ. ಅವರು ಕೊಟ್ಟಂತಹ ದುಡ್ಡು ಇಲ್ಲಿ ಸರಿಯಾಗಿ ವೆಚ್ಚ ಆಗುತ್ತಾ ಇಲ್ಲ. ಅವರು ಕೊಟ್ಟ ಹಣ ಯಾರಿಗೆ ತಲುಪಬೇಕಾಗಿದೆಯೋ ಅವರಿಗೆ ತಲುಪುತ್ತಾ ಇಲ್ಲ ಎಂಬುದನ್ನು ಅವರು ತಿಳಿದುಕೊಂಡಿದ್ದಾರೆ. ಈ ವಿಚಾರದಲ್ಲಿ ಅವರು ನಮ್ಮನ್ನು ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ನೀವುಗಳು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ ನಮ್ಮ ದೇಶದಲ್ಲಿ ಬರಗಾಲ ಬಿದ್ದಿದೆ. ಜನಗಳು ತುಂಬಾ ಕಷ್ಟದಲ್ಲಿದ್ದಾರೆ. ಜನಗಳಿಗೆ ಬಂದಂತಹ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ನಾವೆಲ್ಲರೂ ಜವಾಬ್ದಾರರು. ಇಂತಹ ಸಮಯದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ನಿಜವಾಗಿ ಕಷ್ಟದಲ್ಲಿರುವವರಿಗೆ ಏನೇನು ಸಹಾಯವನ್ನು ಮಾಡಬೇಕೋ ಅದನ್ನು ಪ್ರಾಮಾಣಿಕವಾಗಿ ಮಾಡಬೇಕು. ಕುಡಿಯುವ ನೀರಾಗಲೀ, ಆಹಾರ ಧಾನ್ಯವಾಗಲೀ, ಅಥವಾ ಇನ್ನಿತರ ಯಾವುದೇ ವಿಚಾರವಾಗಲೀ, ನಾವು ಅದನ್ನು ಮನಗಂಡು ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು. ಕೆಲವು ಕಡೆಗಳಲ್ಲಿ ಬಿತ್ತನೆ ಮಾಡಬೇಕು ಅಂದರೆ, ಅವರಿಗೆ ಬೀಜಗಳು ಲಭ್ಯವಿಲ್ಲ. ಯಾವ ಭಾಗದಲ್ಲಿ ಯಾವ ಬೀಜಗಳ ಅವಶ್ಯಕತೆ ಇದೆ ಎಂದು ಕಂಡುಕೊಂಡು ಅವುಗಳ ಸರಬರಾಜಿಗೆ ವ್ಯವಸ್ಥೆ ಮಾಡಬೇಕು, ಇನ್ನು ಕೆಲವು ಕಡೆ ಬೆಳೆ ಬಂದಿದೆ, ಆದರೆ ತಡವಾಗಿ ಮಳೆ ಆಗಿರುವುದರಿಂದ ಚಿಟ್ಟೆ ರೋಗ ಬಂದಿದೆ. ಅಂತಹ ಕಡೆಗಳಲ್ಲಿನ ರೈತರಿಗೆ ಕ್ರಿಮಿಕೀಟ ನಾಶಕ ಔಷಧಿಗಳನ್ನು ರಿಯಾಯಿತಿ ಬೆಲೆಯಲ್ಲಿ ಒದಗಿಸಬೇಕು. ಸಬ್ಸಿಡಿ ಮೂಲಕ ಅಂತಹ ಔಷಧಿಗಳನ್ನು ಒದಗಿಸಬೇಕು. ಗೊಬ್ಬರವನ್ನು ಕೊಡಬೇಕಾಗುತ್ತದೆ. ಇದನ್ನು ಬಿಟ್ಟು ನೊಂದ ಜನರಿಗೆ ಹಿಂಸೆ ಮಾಡುವ ಕೆಲಸ ನಡೆದಿದೆ. ರೈತರಿಗೆ ಕೊಟ್ಟ ಸಾಲವನ್ನು ಹಿಂದಿರುಗಿ ಪಡೆಯುವುದಕ್ಕೆ ನೀವು ಅಧಿಕಾರಿಗಳಿಗೆ ಹೇಳಿದರೆ ಸಾಕು, ಅವರು ತಮ್ಮ ಕೆಲಸವನ್ನು ಪ್ರಾರಂಭಿಸುತ್ತಾರೆ ಅವರಿಗೆ ಮನಸ್ಸಿಗೆ ಬಂದಂತೆ ಹಿಂಸೆ ಕೊಡುವುದಕ್ಕೆ ಪ್ರಾರಂಭಿಸುತ್ತಾರೆ. ಸಾಲದ ಹಣವನ್ನು ಕೊಡುತ್ತೀಯೋ ಇಲ್ಲವೋ ಕೊಡದಿದ್ದದ್ದರೆ ನಿನ್ನನ್ನು ಪೋಲೀಸರಿಗೆ ಕೊಡುತ್ತೇವೆ, ಜೈಲಿಗೆ

ಹಾಕುತ್ತೇವೆ ಎಂದು ಹೇಳಿ ಅವರನ್ನು ಹೆದರಿಸುತ್ತಾರೆ. ನಮ್ಮ ಜನ ಪ್ರಾಮಾಣಿಕರಾದ ಜನರು. ಅವರು ಇಂದಿಗೂ ಖಾಕಿ ಬಟ್ಟೆಯನ್ನು ನೋಡಿದರೆ ಹೆದರಿಕೊಳ್ಳುವ ಜನರು. ಅವರು ಇಂತಹ ಕೆಲಸವನ್ನು ಮಾಡಿದರೆ ನೊಂದುಕೊಳ್ಳುತ್ತಾರೆ. ಅವರು ಕಾನೂನನ್ನು ಗೌರವಿಸುತ್ತಾರೆ. ಮೊದಲೇ ಕಷ್ಟ ಕಾರ್ಪಣ್ಯಗಳಿಂದ ನೊಂದ ಜನರೇನಿದ್ದಾರೆ ಅವರನ್ನು ಜೀವದ ಹೆಣವಾಗಿ ಮಾಡುವುದಕ್ಕೆ ತಾವುಗಳು ದಯವಿಟ್ಟು ಪ್ರಯತ್ನಿಸಬಾರದು ನೀವುಗಳು ಪ್ರವಾಸ ಕಾಲದಲ್ಲಿ ಆಯಾಯಾ ಭಾಗದಲ್ಲಿನ ಕಾರ್ಯಕರ್ತರುಗಳನ್ನು ಜೊತೆಗೂಡಿ ಅಲ್ಲಿನ ಕಷ್ಟ ಕಾರ್ಪಣ್ಯಗಳನ್ನು ನೋಡಬೇಕು. ಯಾರು ತಪ್ಪು ಮಾಡುತ್ತಾರೆ ಅವರನ್ನು ಶಿಕ್ಷಿಸಿ. ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ಜನರಿಗೆ ಬಂದಿರುವ ಈ ಕಷ್ಟ ಕಾಲದಲ್ಲಿ ನಿಜವಾಗಿ ಅವರ ಕಷ್ಟವನ್ನು ಅರಿತುಕೊಂಡು ಅವರಿಗೆ ಸಹಾಯ ಸಹಕಾರವನ್ನು ನೀಡಬೇಕು. ಈ ತರಹದ ಕೆಲಸ ಮಾಡದೆ ಈ ಬರಗಾಲ ಪರಿಹಾರದ ಬಗ್ಗೆ ನಮ್ಮನ್ನು ಕಾನ್ಫಿಡೆನ್ಸ್‌ಗೆ ತೆಗೆದುಕೊಂಡು ಕೆಲಸ ಮಾಡಿ. ನಾನು ಮುಖ್ಯಮಂತ್ರಿಗಳಿಗೆ ನಾನು ಬರೆದಿರುವ ೧೦-೧೨ ಪುಟಗಳ ಕಾಗದದ ನಕಲನ್ನು ಬೇಕಾದರೆ ತಮಗೂ ಕಳಿಸಿಕೊಡುತ್ತೇನೆ. ಅದನ್ನು ವಿವರವಾಗಿ ನೋಡಿ ಕೂಡಲೇ ಕೆಲಸಗಳನ್ನು ಶುರು ಮಾಡಿ. ಕೇಂದ್ರದಿಂದ ಬರುವ ಹಣಕ್ಕೂ ತಗಾದೆ ಮಾಡೋಣ. ಬಡವನ ಬಾಯಿಗೆ ನೀರು ಬಿಡುವಂತೆ ಕೆಲಸ ಮಾಡಿದರೆ ಆಗುವುದಿಲ್ಲ. ಬೇರೆ ಎಲ್ಲಾ ಕೆಲಸ ನಿಲ್ಲಿಸಿ ಇದಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು. ಆರ್. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಬರಗಾಲ ಎನ್ನುವುದನ್ನು ೪ ವರ್ಷಗಳಿಂದ ಸತತವಾಗಿ ನಮ್ಮ ರಾಜ್ಯದಲ್ಲಿ ಏನು ಅನುಭವಿಸಿದ್ದೇವೆ ಇದು ನಮ್ಮ ರಾಜ್ಯಕ್ಕಷ್ಟೇ ಸೀಮಿತವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ನಿಜಕ್ಕೂ ಈ ಬರಗಾಲ ಎನ್ನುವುದು ಏನಿದೆ ಇದು ರಾಷ್ಟ್ರಮಟ್ಟದ ಸಮಸ್ಯೆಯಾಗಿ ಪರಿಣಮಿಸಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ರಾಷ್ಟ್ರದ ಹಲವಾರು ರಾಜ್ಯಗಳು ಬರಗಾಲಕ್ಕೆ ತುತ್ತಾಗಿರುವ ಸಂದರ್ಭದಲ್ಲಿ ನಮ್ಮ ರಾಜ್ಯ ಕೂಡ ಮತ್ತೆ ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿದೆ. ಇಂಥ ಸಂದರ್ಭದಲ್ಲಿ ನಮ್ಮ ಸರ್ಕಾರ ಕೇಂದ್ರವನ್ನು ಅನುದಾನ ಕೊಡಬೇಕೆಂದು ಕೇಳಿ ಎರಡು ಮನವಿಪತ್ರಗಳನ್ನು ಈಗಾಗಲೇ ಕಳಿಸಿಕೊಟ್ಟಿದೆ. ಅವು ನಮ್ಮ ಮುಂದಿವೆ. ಒಂದರಲ್ಲಿ ೧೫ ಕೋಟಿ ರೂ.ಗಳನ್ನು ಅಡ್‌ಹಾಕಾಗಿ ಅಸಿಸ್ಟೆನ್ಸ್ ಕೊಡಬೇಕೆಂದೂ, ಮತ್ತೆ ಎರಡನೇ ಮನವಿ ಪತ್ರದಲ್ಲಿ ೨೧೯ ಕೋಟಿ ಬೇಕೆಂದೂ ಕೇಳಿದ್ದಾರೆ. ಇದರಲ್ಲಿ ನಾನು ಮೆಚ್ಚಿ ಕೊಂಡಿದ್ದು ಒಂದೇನೆಂದರೆ ಬರಗಾಲ ಪರಿಹಾರಕ್ಕಾಗಿ ಕೇಂದ್ರವು ಕೊಡುವ ಮುಂಗಡ ಹಣವನ್ನು ಯೋಜನಾ ವೆಚ್ಚದಲ್ಲಿ ಗ್ರಾಂಟ್ ಎಂದು ಪರಿಗಣಿಸಿ ಕೊಡಬೇಕೆಂದು ರಾಜ್ಯ ಕೇಂದ್ರವನ್ನು ಕೋರಿರುವುದು, ನಿಜಕ್ಕೂ ಸ್ವಾಗತಾರ್ಹವಾದುದು. ಏಕೆಂದರೆ ಪ್ರತಿ ವರ್ಷ ಬರಗಾಲ ಬಂದಾಗ ಕೇಂದ್ರವನ್ನು ಹಣಕ್ಕಾಗಿ ಕೇಳಿದಾಗ ಮಾರ್ಚಿಯಲ್ಲಿ ಕೊಡುವುದು ಎಂದು ಮಾತುಕತೆ ನಡೆಯುತ್ತಿತ್ತು. ಇದು ನಿಜಕ್ಕೂ ವಿಷಾದದ ಪರಿಸ್ಥಿತಿಯಾಗಿತ್ತು ಇದು ಹೋಗಬೇಕು. ಬರಗಾಲ ಬಂದಾಗ ರಾಜ್ಯದ ಜವಾಬ್ದಾರಿ ಒಂದೇ ಅಲ್ಲ. ಪರಿಹಾರ ಒದಗಿಸುವುದರಲ್ಲಿ ಕೇಂದ್ರದ ಜವಾಬ್ದಾರಿಯೂ ಇದೆ. ಆ ರೀತಿ ರಾಜ್ಯ ಸರ್ಕಾರ ಯಾವ ಯಾವುದನ್ನು ಮತ್ತು ಕೇಂದ್ರ ಯಾವ್ಯವುದನ್ನು ನಿರ್ವಹಿಸಬೇಕೆಂದು ಸೂತ್ರಗಳನ್ನು ಮಾಡಿದರೆ ಆಗ ಉಪಯೋಗವಾಗುತ್ತದೆ. ಬರಗಾಲ ನಿವಾರಣೆಯಾಗಲು ಆಗ ದಾರಿ ಮಾಡಿ ಕೊಟ್ಟಹಾಗಾಗುತ್ತದೆ. ಪ್ರತಿ ವರ್ಷವೂ ಬರಗಾಲ ಬರುತ್ತಿರುವುದಕ್ಕೆ ಕಾರಣಗಳೇನಿವೆ ಅದನ್ನು ಮೊದಲು ಹುಡುಕಬೇಕು. ಬರಗಾಲ ಬಂದಾಗ ನಾಲ್ಕು ಕಾಸು ಖರ್ಚು ಮಾಡಿ ಒಂದೂರಿನಲ್ಲಿ ರಸ್ತೆ ಮಾಡುವುದೋ ಇನ್ನೊಂದು ಊರಿನಲ್ಲಿ ಕೆರೆ ಕಟ್ಟುವುದೋ ಎಂದು ಮಾಡುವುದರಿಂದ ಶಾಶ್ವತ ಪರಿಹಾರ ಸಿಗುವುದಿಲ್ಲ ಏಕೆಂದರೆ ಸರ್ಕಾರ ಇತ್ತೀಚೆಗೆ ಕಳುಹಿಸಿರುವ ಆದೇಶಗಳ ಪ್ರಕಾರ ಹಲವಾರು ಕಡೆ ಸಭೆಗಳು ನಡೆದಿವೆ. ಜಿಲ್ಲಾ ಪರಿಷತ್ತು ಮಂಡಲ ಪಂಚಾಯ್ತಿಗಳ ಪ್ರಧಾನರುಗಳು ಸಭೆ ನಡೆಸಿದ್ದಾರೆ. ಸರ್ಕಾರ ತನ್ನ ಆದೇಶದಲ್ಲಿ ಏನು ಹೇಳುತ್ತದೆ ಎಂದರೆ ಒಂದು ಮಂಡಲಕ್ಕೆ ಒಂದು ಕೆಲಸವನ್ನು ಕೂಲಿಗಾಗಿ ಕಾಳು ಯೋಜನೆಯಲ್ಲಿ ತೆಗೆದುಕೊಳ್ಳಬೇಕು. ಒಂದು ಮಂಡಲದಲ್ಲಿ ೮ ರಿಂದ ೧೫ ಹಳ್ಳಿಗಳಿವೆ. ಕೆಲವು ಕಡೆ ೧೫-೨೦ ಸಾವಿರ ಜನಸಂಖ್ಯೆ ಇರುತ್ತದೆ. ಒಂದು ಕಡೆ ಇಂಥ ಕೆಲಸ ಆರಂಭವಾದರೆ ಬೇರೆ ಹಳ್ಳಿಗಳಿಗೆ ಏನು ಮಾಡುವುದು ? ಸರ್ಕಾರ ಮತ್ತೊಂದು ಕಡೆ ಕೆಲಸವಿಲ್ಲದ ಪ್ರತಿ ಕೃಷಿ ಕಾರ್ಮಿಕನಿಗೂ ಕೆಲಸ ಕೊಡಿ ಎಂದು ಇಲಾಖೆಗಳಿಗೆ ಆದೇಶ ಕಳಿಸಿದೆ. ಇದು ನನಗಂತೂ ಅರ್ಥವಾಗುವುದಿಲ್ಲ. ಒಂದು ಕಡೆ ಒಂದು ಮಂಡಲದಲ್ಲಿ ಒಂದೇ ಕೆಲಸ ಕೈಗೆತ್ತಿಕೊಳ್ಳಬೇಕೆನ್ನುವ ಮಾತು, ಮತ್ತೊಂದು ಕಡೆ ಎಲ್ಲಾ ಕೃಷಿ ಕಾರ್ಮಿಕರಿಗೂ ಕೆಲಸ ಕೊಡುವ ಮಾತು—ಹೀಗೆ ಹೇಳುವ ಈ ಎರಡು ವಿಚಾರಗಳು

ಸರಿಹೋಗುವ ವಿಚಾರವಲ್ಲ. ಈ ರೀತಿಯ ದ್ವಂದ್ವವನ್ನು ಸರ್ಕಾರ ಹೊಂದಿರಬಾರದು. ಆದ್ದರಿಂದ ಸರ್ಕಾರ ಸ್ಪಷ್ಟವಾದ ನೀತಿ ಹೊಂದಿರಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

೨.೩೦ ಪಿ. ಎಂ.

ಇನ್ನು ಕಳೆದ ವರ್ಷ ಅಥವಾ ಅದಕ್ಕೂ ಹಿಂದಿನ ವರ್ಷ ಈ ಸಣ್ಣ ರೈತರು, ಅತಿ ಸಣ್ಣ ರೈತರು, ಪರಿಶಿಷ್ಟ ವರ್ಗ, ಜಾತಿಯವರಿಗೆ ಪುಕ್ಕಟೆಯಾಗಿ ಬೀಜ ಗೊಬ್ಬರವನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಅಂದರೆ ಮುಂಗಾರು ಮತ್ತು ಹಿಂಗಾರು ಬೆಳೆಗೆ ಕೇಂದ್ರ ಸರಕಾರ ರಾಜ್ಯ ಸರಕಾರದ ಹಣದಲ್ಲಾಗಲೀ ಬರಗಾಲ ಕಾಮಗಾರಿ ಯೋಜನೆಯಲ್ಲಾಗಲೀ ಕೊಡತಕ್ಕಂಥಾದ್ದು ಏನಿದೆ ಅದನ್ನು ಈ ವರ್ಷ ನಿಲ್ಲಿಸಿದ್ದಾರೆ. ಪ್ರಾರಂಭದಲ್ಲಿ ರೈತರು ಬೀಜದ ಸ್ಕೇರ್‌ಸಿಟಿ ಎಂದು ಏನು ಹೇಳುತ್ತಾರೆ ಅದರ ಬಗ್ಗೆ ಎಷ್ಟು ಒದ್ದಾಡಿದರೆಂದರೆ ಎಲ್ಲಾ ಭಾಗಗಳಲ್ಲೂ ಕೂಡ ಈ ಬಗ್ಗೆ ಚರ್ಚೆಯಾಗಿದೆ. ಕರ್ನಾಟಕ ಬೀಜ ನಿಗಮ ಸರಿಯಾಗಿ ಕೆಲಸ ನಿರ್ವಹಿಸಿ ರಾಜ್ಯದ ಜನರಿಗೆ ರೈತರಿಗೆ ಬೇಕಾಗಿರತಕ್ಕಂತಹ ಬೀಜದ ಸವಲತ್ತನ್ನು ಮಾಡುತ್ತಿಲ್ಲ. ಕೃಷಿ ಮಂತ್ರಿಗಳು ಹೇಳಿಕೆಗಳನ್ನು ನೀಡಿದ್ದಾರೆ ಮುಂದಿನ ಸಾರಿ ಈ ರೀತಿ ಮಾಡುತ್ತಿದ್ದೇವೆ, ಸೀಸನ್ ಫ್ಲವರ್ ಸೀಡ್ಸ್ ಅನ್ನು ತಂದು ನೀಡುತ್ತಿದ್ದೇವೆಂದು ಹಲವಾರು ಮಾತನ್ನು ಹೇಳಿದ್ದಾರೆ. ಸಣ್ಣ ರೈತರು ಅತಿ ಸಣ್ಣ ರೈತರು ಪರಿಶಿಷ್ಟ ಜಾತಿ, ವರ್ಗದವರು ಬೀಜಕ್ಕೆ ಪಟ್ಟಂತಹ ಕಷ್ಟವನ್ನು ನೋಡಿದರೆ ಹಿಂದೆ ಯಾವಾಗಲೂ ಇಂತಹ ಕಷ್ಟ ಪಟ್ಟಿರುವುದನ್ನು ನಾನು ನೋಡಲಿಲ್ಲ. ಈ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಮುಂದಿನ ವರ್ಷದಲ್ಲಿ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನೊಂದು ಬರಗಾಲ ಅನ್ನತಕ್ಕಂಥಾದ್ದಕ್ಕೆ ಡೆಫನೇಷನ್ ಏನಿದೆ ಅದು ಸರಿಯಾಗಿಲ್ಲ. ಬರಗಾಲವೆಂದರೆ ಸಂಪೂರ್ಣವಾಗಿ ಗಿಡ ಒಣಗಿ ಹೋಗಬೇಕು ಹಸಿರು ಹುಲ್ಲು ಇರಬಾರದು, ಜನಗಳಿಗೆ ದನಗಳಿಗೆ ಕುಡಿಯುವುದಕ್ಕೆ ನೀರು ಇರಬಾರದು ಕೇಂದ್ರ ತಂಡ ಬಂದಾಗ ಅವರ ಮುಂದೆ ಏಮಕೆ ಇದ್ದಂತೆ ಜನರು ಇರಬೇಕು. ಉದಾಹರಣೆಗೆ ಹೇಳುವುದಾದರೆ ಒರಿಸ್ಸಾದ ಕಾಳಂಜಿ ಜಿಲ್ಲೆಯೊಳಗೆ ಜನರು ಸಾಯುತ್ತಿದ್ದಾರೆ ಅಂತಹ ಪರಿಸ್ಥಿತಿ ಇಲ್ಲಿ ಕಂಡು ಬಂದರೆ ಬರಗಾಲ ಪ್ರದೇಶವೆಂದು ಡಿಕ್ಲೇರ್ ಮಾಡತಕ್ಕಂತಹ ನೀತಿಯನ್ನು ಇಟ್ಟುಕೊಂಡು ಬರದೆ, ಎಲ್ಲೆಲ್ಲಿ ಜನರಿಗೆ ಕೂಲಿ ಸಿಗುತ್ತಿಲ್ಲ ಎಲ್ಲಿ ಭೂಮಿ ಒಣಗಿ ಹೋಗಿದೆ ಅಂತಹ ಕಡೆಗಳಲ್ಲಿ ಬರಗಾಲ ಪ್ರದೇಶವೆಂದು ಡಿಕ್ಲೇರ್ ಮಾಡಿ ಕೆಲಸ ಒದಗಿಸಿ, ಊಟ ಒದಗಿಸುವುದಕ್ಕೆ ಸರಿಯಾದ ನೀತಿ ನಿರೂಪಣೆಯನ್ನು ಮಾಡುವುದಕ್ಕೆ ರಾಜ್ಯ ಸರ್ಕಾರ ಕೇಂದ್ರ ಸರಕಾರಕ್ಕೆ ಮುಂದಿನ ವರ್ಷದಲ್ಲಿ ಸರಿಯಾದ ರೀತಿಯಲ್ಲಿ ಸಲಹೆಗಳನ್ನು ಕೊಡಬೇಕು ಮತ್ತು ರಾಜ್ಯ ಸರಕಾರಗಳ ಕಂದಾಯ ಮಂತ್ರಿಗಳ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡಬೇಕು. ಈ ಬರಗಾಲಕ್ಕೆ ಮುಖ್ಯವಾದ ಕಾರಣವೇನೆಂದರೆ ಅರಣ್ಯ ನಾಶ ಇವತ್ತು ಸತತವಾಗಿ ನಡೆಯುತ್ತಿದೆ. ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಕೊಡಗು ಜಿಲ್ಲೆಯಲ್ಲಿ ಇವತ್ತು ಮಳೆ ಕಡಿಮೆಯಾಗುತ್ತಿದೆ ಇಂತಹ ಪ್ರದೇಶಗಳಲ್ಲಿಯೇ ಮಳೆ ಕಡಿಮೆಯಾಗುತ್ತಿದೆ ಇದು ಬಹಳ ಗಂಭೀರವಾದಂತಹ ವಿಚಾರ. ಅರಣ್ಯ ಪ್ರದೇಶ ಇರತಕ್ಕಂತಹ ಜಿಲ್ಲೆಗಳಲ್ಲಿಯೇ ಮಳೆ ಕಡಿಮೆಯಾದರೆ ಇನ್ನು ಬಳ್ಳಾರಿ, ಗುಲ್ಬರ್ಗ, ರಾಯಚೂರು, ಬಿಜಾಪುರದಂತಹ ಒಣ ಹವೆ ಇರತಕ್ಕಂತಹ ಪ್ರದೇಶಗಳಲ್ಲಿ ಯಾವ ರೀತಿ ಮಳೆಯಾಗುತ್ತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ನನ್ನ ಕ್ಷೇತ್ರವಾದ ಸಂಡೂರಿನ ಒಂದು ಪಟ್ಟಣದ ಸುತ್ತ ಬೆಟ್ಟಗಳ ಸಾಲು ಇತ್ತು. ೧೫-೨೦ ಕಿಲೋ ಮೀಟರ್‌ನಷ್ಟು ಥಿಕ್ಕೆಸ್ಟ್ ಫಾರೆಸ್ಟ್ ಇತ್ತು ಬಹಳ ದೊಡ್ಡದಾದಂತಹ ಅರಣ್ಯ ಅಂತಹ ಅರಣ್ಯವನ್ನು ಇವತ್ತು ಗಣಿ ಮಾಲೀಕರು ಸಂಪೂರ್ಣವಾಗಿ ನಾಶ ಮಾಡುತ್ತಿದ್ದಾರೆ. ಕಲ್ಲು ತೆಗೆಯತಕ್ಕಂತಹ ಕೆಲಸ ಮಾಡಿ ಗಿಡಗಳನ್ನು ನಡಬೇಕೆಂಬ ನಿಯಮವಿದ್ದರೂ ಕೂಡ ಯಾರೂ ಕೂಡ ಅಲ್ಲಿ ಗಿಡಗಳನ್ನು ನೆಟ್ಟಿಲ್ಲ. ಸಂಡೂರು ಕ್ಷೇತ್ರದಲ್ಲಿ ಅರಣ್ಯ ನಾಶವಾಗುತ್ತಿದ್ದು ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಸರಿಯಾಗಿ ಬಿತ್ತನೆಯಾಗುತ್ತಿಲ್ಲ. ಇಂತಹ ಪರಿಸ್ಥಿತಿಯನ್ನು ನಾನು ಎಂದೂ ಕಂಡಿಲ್ಲ ಆದರೆ ಈ ವರ್ಷ ಕಾಣುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದೆ ಇದು ಸತತವಾಗಿ ನಡೆಯುತ್ತಿದೆ ಇದರ ಬಗ್ಗೆ ತನಿಖೆ ಮಾಡಿಸಿ ಅರಣ್ಯನಾಶ ಮಾಡುತ್ತಿದ್ದಾರೆ ನಿಯಮಗಳನ್ನು ಮೀರಿ ನಡೆಯುತ್ತಿದ್ದಾರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಬರೆದರೆ ಇವತ್ತಿನವರೆಗೂ ಅವರಿಂದ ಅದಕ್ಕೆ ಉತ್ತರ ಬರಲಿಲ್ಲ. ಇನ್ನು ಬರಗಾಲವನ್ನು ಪರ್ಮನೆಂಟ್ ಮಾಡತಕ್ಕಂತಹ ಅದಕ್ಕೆ ಕ್ರಾಪ್ ಕಟಿಂಗ್ ಎಕ್ಸ್‌ಪಿರಿಮೆಂಟ್ ಎಂಬ

ಕರೆಯುತ್ತಾರೆ. ಬಿತ್ತನೆ ಮಾಡಿ ಮೊಳಕೆಯಾಗುವಂತಹ ಹಂತದಲ್ಲಿರುವಾಗ ಒಂದು ಮೀಟರ್ ಉದ್ದ, ಒಂದು ಮೀಟರ್ ಅಗಲ ಇರತಕ್ಕಂತಹ ಪ್ರದೇಶದಲ್ಲಿ ಇಷ್ಟು ಜೋಳ ಕಡಿಮೆ ಬಂದರೆ ಬರಗಾಲ ಪರಿಸ್ಥಿತಿ ಇದೆಯೆಂದು ಡಿಕ್ಲೇರ್ ಮಾಡುತ್ತಾರೆ ಕ್ರಾಪ್ ಕಟಿಂಗ್ ಅನ್ನು ಈ ಹಂತದಲ್ಲಿರುವಾಗ ಯಾವ ರೀತಿ ಮಾಡುತ್ತೀರಿ ? ಅದೇ ರೀತಿ ಮಳೆ ಪ್ರಮಾಣವನ್ನು ಮೆಷರ್‌ಮೆಂಟ್ ಮಾಡತಕ್ಕಂತಹ ಒಂದು ಪದ್ಧತಿ ಇದೆ ಒಂದು ತಾಲ್ಲೂಕಿನಲ್ಲಿ ಮಳೆ ಮೆಷರ್‌ಮೆಂಟ್ ಮಾಡತಕ್ಕಂತಹ ಗೇಜ್ ಅನ್ನು ಇಟ್ಟಿರುತ್ತಾರೆ.

ಈ ಗೇಜ್ ಏನು ತೋರಿಸುತ್ತದೆ ? ಮಳೆ ವಿಧಾನಸೌಧದ ಹತ್ತಿರ ಬಂದರೆ ಶಾಸಕರ ಭವನದ ಹತ್ತಿರ ಬರುವುದಿಲ್ಲ. ಈ ರೀತಿಯಲ್ಲಿ ಇವತ್ತು ಮಳೆ ಬರುತ್ತಿರುವುದು. ಮಳೆ ಒಂದು ಜಿಲ್ಲೆಯಲ್ಲಿ ಆದರೆ ಇಡೀ ತಾಲ್ಲೂಕು ಮಳೆಯ ಪ್ರಮಾಣ ತೆಗೆದುಕೊಂಡು ಬರಗಾಲವನ್ನು ಡಿಕ್ಲೇರ್ ಮಾಡುತ್ತಾರೆ. ಮಳೆಯ ಪ್ರಮಾಣ ಕಡಿಮೆಯಾದರೆ ಅದನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಬರಗಾಲದ ಪರಿಸ್ಥಿತಿ ಇದೆ ಎಂದು ಹೇಳಿದರೂ ಕೂಡಾ ಒಪ್ಪುವುದಿಲ್ಲ, ಅಧಿಕಾರಿಗಳು ತಮಗೆ ಇರತಕ್ಕಂಥ ಆದೇಶ, ಸರ್ಕಾರಿ ಆಜ್ಞೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಾರೆ. ನಾವು ಏನು ಇಲ್ಲಿ ಪ್ರತಿನಿಧಿಗಳು ಬಂದು ಮಾನವೀಯತೆಯ ಆಧಾರದಮೇಲೆ ಕೆಲವು ವಿಚಾರ ಮಾಡುತ್ತೇವೆ. ಆ ವಿಚಾರವನ್ನು ಅವರು ಮಾಡುವುದಕ್ಕಾಗುವುದಿಲ್ಲ. ಆದಕಾರಣ ಈ ಪದ್ಧತಿ ಬದಲಾಗಬೇಕು. ಅಲ್ಲಿ ಏನಾದರೂ ಮಳೆ ಬಂದರೆ ಕ್ರಾಫ್ ಫೇಲ್ಯೂರ್ ಆದರೆ ತಾಲ್ಲೂಕನ್ನು ಕನ್‌ಸಿಡರ್ ಮಾಡಿ ಕ್ರಾಫ್ ಫೇಲೂರ್ ಎಂದು ತೋರಿಸುತ್ತಾರೆ. ಕ್ರಾಫ್ ಇನ್‌ಷೂರೆನ್ಸ್ ಎಂದು ಕೊಡುತ್ತಾರೆ, ಇಲ್ಲಿ ರೈತರಿಗೆ ನಿಜವಾಗಿಯೂ ಬಹಳ ಅನ್ಯಾಯವಾಗುತ್ತಿದೆ. ಕಳೆದ ವರ್ಷ ನಬಾರ್ಡ್‌ನ ಜನರಲ್ ಮ್ಯಾನೇಜರ್ ರವರು ಹೊಸಪೇಟೆ ಬ್ಯಾಂಕಿಗೆ ಬಂದಿದ್ದರು. ಆಗ ನಾನು ಚರ್ಚೆ ಮಾಡಿದೆ. ಗುಜರಾತಿಗೆ ಮಳೆ ವಿಮಾಯೋಜನೆ ಎಂದು ಮೂವತ್ತು ಕೋಟಿ ರೂಪಾಯಿಗಳನ್ನು ಧನಸಹಾಯ ಎಂದು ಕೊಟ್ಟರೆ ಕರ್ನಾಟಕ ರಾಜ್ಯಕ್ಕೆ ೫೬ ಲಕ್ಷ ರೂಪಾಯಿ ಕೊಟ್ಟಿದ್ದಾರೆ ಇದು ಏತಕ್ಕೆ ಈ ರೀತಿ ಆಗಿದೆ? ಕರ್ನಾಟಕ ರಾಜ್ಯದವರಿಗೆ ಬೆಳೆ ನಷ್ಟ ಆಗಲಿಲ್ಲವೇ? ಈ ಆಜ್ಞೆಯನ್ನು ನಾವು ಫೈಟ್ ಮಾಡಬೇಕು. ಇದು ಏನು ತೋರಿಸುತ್ತದೆ ಎಂದರೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕಾಗಿ ನಾವು ಫೈಟ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕು. ಮತ್ತೆ ಕೆಲವು ಏರಿಯಾಗಳಲ್ಲಿ ಏನಾಗುತ್ತಿದೆ ಎಂದರೆ ಕೆರೆಗಳಲ್ಲಿ ಪೂರಾ ಹೂಳು ತುಂಬಿಕೊಂಡಿದೆ. ಕೆರೆಗಳಲ್ಲಿ ಹೂಳು ತೆಗೆಸತಕ್ಕಂಥದ್ದಕ್ಕೆ ಕೆಲಸ ಮಾಡಲಿಕ್ಕೆ ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳುತ್ತಿದೆ. ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಹದಿನೈದು ಕೋಟಿ ರೂಪಾಯಿಗಳಲ್ಲಿ ಎಂಟು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ, ಎಂಟು ಕೋಟಿ ರೂಪಾಯಿಗಳಲ್ಲಿ ಎಷ್ಟು ಎಷ್ಟು ರಾಜ್ಯಕ್ಕೆ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಏನೇನು ಖರ್ಚು ಮಾಡಿದ್ದಾರೆ. ಯಾವುದಕ್ಕೂ ವಿವರ ಇಲ್ಲ. ದಯ ಮಾಡಿ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ವಿವರ ಬೇಕು? ಕುಡಿಯುವ ನೀರಿಗೆ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವುದು ಬೇಕು? ರೆಗ್ಯುಲರ್ ಆ್ಯಕ್ಷನ್ ಪ್ಲಾನ್‌ನಲ್ಲಿ ಎಷ್ಟು ಜನರಿಗೆ ಕೆಲಸವನ್ನು ಕೊಟ್ಟಿದ್ದೀರಿ ಮತ್ತು ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವ ವಿವರವನ್ನು ಕೊಟ್ಟರೆ ಗೊತ್ತಾಗುತ್ತದೆ. ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಮೇಲೆ ಈ ಎನ್. ಆರ್. ಇ. ಪಿ. ಡಿ.ಪಿ.ಎ.ಪಿ. ಆರ್. ಎಲ್. ಇ. ಜಿ ಪಿ. ಮತ್ತು ರೆಗ್ಯುಲರ್ ಆ್ಯಕ್ಷನ್ ಪ್ಲಾನ್‌ನಲ್ಲಿ ಒಂದು ಕೆಲಸ ಕೂಡಾ ಎಲ್ಲಿಯೂ ಪ್ರಾರಂಭವಾಗಿಲ್ಲ ಆ ರೀತಿ ಆಗಿದ್ದರೆ ದಯಮಾಡಿ ಹೇಳಿ, ನನ್ನ ಜಿಲ್ಲೆಯಲ್ಲಂತೂ ಎಲ್ಲಿಯೂ ಕೆಲಸ ಪ್ರಾರಂಭವಾಗಿಲ್ಲ ಇಷ್ಟರವರೆಗೂ ಕೂಡಾ ಎಲ್ಲಿಯೂ ರೆಗ್ಯುಲರ್ ಆ್ಯಕ್ಷನ್ ಪ್ಲಾನ್‌ನಲ್ಲಿ ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥದ್ದು. ಯಾವುದೂ ಕೂಡಾ ಆಗಿಲ್ಲ. ಆ ರೀತಿ ಆಗಿದ್ದರೆ ಎಷ್ಟು ದುಡ್ಡನ್ನು ಕೊಟ್ಟಿದ್ದೀರಿ ಎಂದು ಎಲ್ಲಾ ವಿವರಗಳನ್ನು ಕೊಟ್ಟರೆ ಗೊತ್ತಾಗುತ್ತದೆ. ದಯಮಾಡಿ ವಿವರವನ್ನು ಕೊಡಿ. ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಇದು ವಿಚಿತ್ರವಾದಂಥ ಪರಿಸ್ಥಿತಿ. ನನ್ನ ತಾಲ್ಲೂಕಿನಲ್ಲಿ ಎಂಟು ಸಾವಿರ ಎಕರೆ ಭೂಮಿಯನ್ನು ಈ ವಿಜಯನಗರ ಉಕ್ಕಿನ ಕಾರ್ಖಾನೆಗೆ ಸ್ವಾಧೀನ ಮಾಡಿಕೊಂಡಿದ್ದಾರೆ. ಆದರೆ ವಿಜಯನಗರ ಉಕ್ಕಿನ ಕಾರ್ಖಾನೆ ಇನ್ನೂ ಬಂದಿಲ್ಲ. ಅದರಲ್ಲಿ ಹತ್ತು ಹನ್ನೆರಡು ಹಳ್ಳಿಯ ರೈತರು ಬಿತ್ತನೆ ಮಾಡಿ ಬರತಕ್ಕಂಥದ್ದರಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇಲ್ಲದಿದ್ದರೆ ಅಲ್ಲಿ ಕಾಡು ಬೆಳೆಯುತ್ತಿತ್ತು, ಕಾಡು ಬೆಳೆದು ಮೃಗ ಪ್ರಾಣಿಗಳು

ಸೇರಿಕೊಳ್ಳುತ್ತಿದ್ದವು. ಆ ರೀತಿಯಾಗಿ ಆ ಕ್ಷೇತ್ರಗಳು ಇವತ್ತೂ ಕೂಡಾ ಅಲ್ಲಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಇಲ್ಲದಿದ್ದರೆ ಸರ್ಕಾರ ಕಾಡನ್ನು ಕಡಿಯಲಿಕ್ಕೆ ಮೂರು–ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತಿತ್ತು. ಆ ರೈತರು ಅಲ್ಲಿ ಜೋಳ ನವಣೆ ಬೆಳೆದುಕೊಂಡು ತಿನ್ನುತ್ತಿದ್ದಾರೆ. ಇದು ಬರಗಾಲ ಪರಿಸ್ಥಿತಿ ಇದ್ದರೂ ಕೂಡಾ ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ. ಕ್ರಾಪ್ ಕಟಿಂಗ್ ಎಕ್ಸಿಪೆರಿಮೆಂಟ್, ಮಳೆಯ ಪ್ರಯೋಗದಿಂದ ಎಂಟು ಸಾವಿರ ಎಕರೆ ಸರ್ಕಾರ ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದರಿಂದ ಹತ್ತು–ಹನ್ನೆರಡು ಹಳ್ಳಿಯ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇಂಥ ಸನ್ನಿವೇಶಗಳಲ್ಲಿ ವಿಶಿಷ್ಟವಾದಂಥ ಪ್ರಯೋಗದ ಪದ್ಧತಿಯನ್ನು ಉಪಯೋಗಿಸಿ ಅಲ್ಲಿ ಬರಗಾಲದ ಒಂದು ಪ್ರಮಾಣ ಏನು ಇದೆ, ಅದನ್ನು ಸರಿಯಾಗಿ ಲೆಕ್ಕಾಚಾರ ಮಾಡಬೇಕು. ಎನ್.ಆರ್.ಇ.ಪಿ. ಡಿ.ಪಿ.ಎ.ಪಿ. ಮತ್ತು ಆರ್.ಎಲ್.ಇ.ಜಿ.ಪಿ.ಗಳಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ಸಂಬಳದ ಬಗ್ಗೆ ಬಂದಾಗ ಸರ್ಕಾರದವರು ನಾವು ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಸಂಡೂರು ತಾಲ್ಲೂಕು, ಕೂಡ್ಲಿಗೆ ತಾಲ್ಲೂಕುಗಳಲ್ಲಿ ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ ಮತ್ತು ಡಿ.ಪಿ.ಎ.ಪಿ.ಗಳಲ್ಲಿ ಸಂಬಳವನ್ನು ಪಡೆಯತಕ್ಕಂಥ ದಿನಗೂಲಿಗಳು ಮೂರು ನಾಲ್ಕು ತಿಂಗಳುಗಳಿಂದ ಸಂಬಳವೇ ಬಂದಿಲ್ಲ ಎಂದು ಹೇಳುತ್ತಾರೆ. ವಿವರ ಬೇಕಾದರೆ ನಾನು ತರಿಸಿಕೊಡುತ್ತೇನೆ. ಅಲ್ಲಿಯ ನೌಕರರುಗಳೇ ಮೂರು ನಾಲ್ಕು ತಿಂಗಳಿಂದ ಸಂಬಳ ಬಂದಿಲ್ಲ ಎಂದು ಹೇಳುತ್ತಾರೆ. ನೀವು ನೋಡಿದರೆ ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಅವರು ಹಣವನ್ನು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇನ್ನು ತಾಲ್ಲೂಕು ಕಛೇರಿಗಳಲ್ಲಿ ಏನಾಗುತ್ತಿದೆ ಎಂದರೆ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಸ್ಕೀಮ್ ಬಂದಿರುವುದರಿಂದ, ಪ್ರತಿಯೊಬ್ಬರೂ ತಾಲ್ಲೂಕು ಕಛೇರಿಗೂ ಹೋದವರೆಲ್ಲರಿಗೂ ಕೇಳುತ್ತಾರೆ. ಒಂದು ಹುಡುಗ ಇನ್‌ಕಂ ಸರ್ಟಿಫಿಕೇಟ್ ಮಾಡಿಸಲಿಕ್ಕೆ ಹೋದರೂ ಕೂಡಾ ಯಾವುದಾದರೂ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಇದ್ದರೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇಂಥ ಒಂದು ಕೆಟ್ಟ ಪರಿಸ್ಥಿತಿಯನ್ನು ನಾವು ತಾಲ್ಲೂಕು ಕಛೇರಿಗಳಲ್ಲಿ ನೋಡುತ್ತಿದ್ದೇವೆ.

ಇನ್ನು ಮತ್ತೊಂದು ಕಡೆ ಇಂದಿರಾ ವಿಕಾಸ ಪತ್ರಗಳು. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಇಷ್ಟು ಕೆಟ್ಟದ್ದಾಗಿದೆ ಎಂದು ನಾನು ಭಾವಿಸಿರಲಿಲ್ಲ, ತಾಲ್ಲೂಕು ಮಟ್ಟಗಳಲ್ಲಿ ಎಲ್ಲಾ ಕಛೇರಿಗಳೂ ಸಂಪೂರ್ಣವಾಗಿ ಇಂದಿರಾ ವಿಕಾಸ ಪತ್ರಗಳನ್ನು ಮಾರತಕ್ಕ ಅಂಗಡಿಗಳಾಗಿವೆ. ಡಬ್ಬ ಇಟ್ಟುಕೊಂಡು ಇಂದಿರಾ ವಿಕಾಸ ಪತ್ರವನ್ನು ಮಾರುತ್ತಿದ್ದಾರೆ. ಇವರಿಗೆ ಬೇರೆ ಕೆಲಸ ಇರುವುದಿಲ್ಲ, ನಾವು ಯಾವುದೇ ಕಛೇರಿಗೆ ಹೋಗಿ ಏನಾದರೂ ಬರಗಾಲದ ಪರಿಸ್ಥಿತಿ ಇದೆ, ಆ ಕೆಲಸ ಮಾಡಿ, ಈ ಕೆಲಸ ಮಾಡಿ ಎಂದು ಹೇಳಿದರೆ ಸರ್ಕಾರದವರು ನಮಗೆ ೧೦ ಲಕ್ಷ ಇಂದಿರಾ ವಿಕಾಸ ಪತ್ರವನ್ನು ಮಾರಲು ಹೇಳಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ, ಮತ್ತು ನಾವು ಪಾರ್ಟಿಗಳನ್ನು ಹುಡುಕಬೇಕು. ನಿಮ್ಮ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ನೇರವಾಗಿ ಅಧಿಕಾರಿಗಳು ಹೇಳುತ್ತಾರೆ ಇಂದಿರಾ ವಿಕಾಸ ಪತ್ರವನ್ನು ಮಾರತಕ್ಕಂಥ ಕೆಲಸವೇ ಇವರಿಗೆ ? ಬೇರೆ ಯಾವ ಕೆಲಸವನ್ನೂ ಸರ್ಕಾರಿ ಅಧಿಕಾರಿಗಳು ಗಮನಿಸುವುದಿಲ್ಲ. ಈ ಪರಿಸ್ಥಿತಿಯನ್ನು ಹೋಗಲಾಡಿಸಿ ಈ ಬರಗಾಲದ ಕಡೆ ಗಮನ ಕೊಡಬೇಕು.

ಅರಣ್ಯ ನಾಶವನ್ನು ತಡೆಗಟ್ಟುವುದರ ಜೊತೆಗೆ ಬರಗಾಲವನ್ನು ಕಡಿಮೆ ಮಾಡಬಹುದು ಅರಣ್ಯ ನಾಶವನ್ನು ಮುಖ್ಯವಾಗಿ ತಡೆಗಟ್ಟಬೇಕು. ಡ್ಯಾಮ್‌ಗಳಲ್ಲಿ ಇವೊತ್ತಿನ ದಿವಸ ನೀರು ಕಡಿಮೆ ಆಗಿದೆ. ರಿಸರ್ವಾಯರ್‌ಗಳಲ್ಲಿ, ನಮ್ಮ ತುಂಗಭದ್ರಾ ಅಣೆಕಟ್ಟುಗಳಲ್ಲಿ ಕಳೆದ ವರ್ಷಕ್ಕಿಂತ ಸುಮಾರು ೧೦-೧೫ ಅಡಿ ಕಡಿಮೆ ನೀರು ಇದೆ. ಹೈ ಲೆವೆಲ್‌ಗಿಂತ ೫ ಅಡಿ ಕಡಿಮೆ ನೀರು ಇದೆ. ಈ ನೀರು ಆಂಧ್ರಕ್ಕೂ, ಕರ್ನಾಟಕಕ್ಕೂ ಉಪಯೋಗಿಸಲ್ಪಡುತ್ತದೆ. ಮೊನ್ನೆ ತಾನೇ ಕೇಂದ್ರ ಸರ್ಕಾರದ ಮಾನ್ಯ ನೀರಾವರಿ ಸಚಿವರಾದ ಶ್ರೀ ಶಂಕರಾನಂದರವರು ಒಂದು ಹೇಳಿಕೆ ಕೊಟ್ಟರು. ಅದನ್ನು ನಾನು ರೇಡಿಯೋದಲ್ಲಿ ಕೇಳಿದೆ. ಅವು ನಮ್ಮ ಭೂಮಿ ಒಳಗಡೆ ಇರತಕ್ಕ ನೀರಿನ ಪ್ರಮಾಣ ಕಳೆದ ವರ್ಷದ ಆಳಕ್ಕಿಂತ ಈ ವರ್ಷ ಕಡಿಮೆ ಆಗಿದೆ. ಅಂಡರ್‌ಗೌಂಡ್ ವಾಟರ್ ಸುಮಾರು ಎರಡರಿಂದ ಎಂಟು ಮೀಟರ್ ಕೆಳಕ್ಕೆ ಹೋಗಿದೆ ಎಂದು ಹೇಳಿದ್ದಾರೆ. ಕುಡಿಯುವ, ನೀರಿನ ಸಮಸ್ಯೆ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಕೂಡ ಹೇಳಿದ್ದಾರೆ. ಹಾಕಿರತಕ್ಕ ರಿಗ್ ಬೋರ್‌ಗಳೂ ಕೂಡ ಮೊದಲ ವರ್ಷ ಚೆನ್ನಾಗಿ ಕೆಲಸ ಮಾಡಿದವು, ಎರಡನೇ ವರ್ಷ ಸುಮಾರಾಗಿ ಕೆಲಸ ಮಾಡಿತು,

ಮೂರನೇ ವರ್ಷ ಎಲ್ಲಾ ಕಡೆ ಚೈನ್ ಕಟ್ಟಾಯಿತು. ಬೆಲ್ಟ ಕಟ್ಟಾಯಿತು. ಅಲ್ಲಿ ಸರಿಯಾದ ವಾಹನಗಳು ಇಲ್ಲ. ಸಾಫ್‌ಗಳಿಗೆ ಸರಿಯಾದ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಆದ ಕಾರಣ ಬೋರ್‌ವೆಲ್ ಹಾಕುವಾಗ ಹೊಸ ಟೆಕ್ನಾಲಜಿ ಕಂಡುಹಿಡಿದು ಪರ್ಮನೆಂಟ್ ಆಗಿ ಇರತಕ್ಕ ಹಾಗೂ ೫-೬ ವರ್ಷ ರಿಪೇರಿಗೆ ಬರದಿರತಕ್ಕ ಬೋರ್‌ವೆಲ್‌ಗಳನ್ನು ಹಾಕಬೇಕು. ಹೊಸ ಮಾದರಿ ಬೋರ್‌ವೆಲ್‌ಗಳನ್ನು ಇಂಟ್ರಡ್ಯೂಸ್ ಮಾಡಬೇಕು. ಈಗಿರತಕ್ಕ ಹಳೆಯ ಬೋರ್‌ವೆಲ್‌ಗಳು ಅನಾವಶ್ಯಕವಾಗಿ ವೇಸ್ಟ್ ಆಗುವುದು ತಪ್ಪುತ್ತದೆ. ಬೇರೆ ಕೆಲಸಗಳನ್ನು ಬೇಕಾದರೆ. ನಿಲ್ಲಿಸಿ, ಆದರೆ ಅವಶ್ಯ ಕಾಮಗಾರಿಗಳನ್ನು ಮಾಡಬೇಕು. ಹಸಿವೆಯಿಂದ ಯಾರು ಕೆಲಸವಿಲ್ಲದೆ ಇದ್ದಾರೆ ಅವರಿಗೆ ಹೆಚ್ಚಿನ ಮಟ್ಟದಲ್ಲಿ ಕೆಲಸ ಕೊಡಬೇಕು. ಒಂದು ಮಂಡಲ್‌ಗೆ ಒಂದು ಕೆಲಸಕ್ಕೆ ಬರೀ ಕಾಳು ಕೊಟ್ಟರೆ ಪ್ರಯೋಜನ ಇಲ್ಲ. ಇದರಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಬರೀ ಅಕ್ಕಿ ಗೋಧಿ ಕೊಡಬಹುದು. ಬರೀ ಮೆಟೀರಿಯಲ್ ಕೂಡ ಕೊಟ್ಟರೂ ಉಪಯೋಗವಿಲ್ಲ. ಮೆಟೀರಿಯಲ್ ಸಪ್ಲೈ ಮಾಡುವುದರ ಜೊತೆಗೆ ಕಾಂಪೊನೆಂಟ್ಸ್ ಕೊಡಬೇಕು. ಅದನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುದನ್ನು ತಿಳಿಸಬೇಕು. ಈ ಕಾಮಗಾರಿಗಳಿಗೆ ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಹಳೆಯ ಬಿಲ್‌ಗಳಿಗೆ, ಪೆಂಡಿಂಗ್ ಬಿಲ್‌ಗಳಿಗೆ ಅಡ್‌ಜಸ್ಟ್ ಮಾಡಬೇಡಿ. ನೀವು ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಜಿಲ್ಲಾವಾರು ಮಾಹಿತಿ ನಮಗೆ ಒದಗಿಸಿ ಕೊಡಿ ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ನಮಗೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರಕ್ಕೆ ತಾವು ಏನು ಮನವಿ ಸಲ್ಲಿಸಿದ್ದೀರಿ, ಆ ಮನವಿಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಮುಂದಿನ ದಿನಗಳಲ್ಲಿ ಸಾಲದ ರೂಪವಾಗಿ ಹಣ ಪಡೆಯುವ ಪದ್ಧತಿ ಹೋಗಿ ಮುಂದೆ ಇದು ಅನುದಾನವೇ ಎಂದು ಓಪನ್ ಫೈಟ್ ಮಾಡಬೇಕು. ಬರೀ ಪತ್ರವ್ಯವಹಾರಗಳನ್ನು ಮಾಡಿದರೆ ಏನೂ ಪ್ರಯೋಜನವಿಲ್ಲ. ಇಷ್ಟನ್ನು ಹೇಳಿ ಬರಗಾಲದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಮಲ್ಲಪ್ಪನವರು ಮಾತನಾಡಿ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನಾನು ನಮ್ಮ ರಾಜ್ಯಕ್ಕೆ ಬಂದಿರತಕ್ಕ ಬರಗಾಲ ಸುಧಾರಣೆ ಬಗ್ಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಮುಂಚೆ ನೋಟೀಸ್ ಕೊಟ್ಟಿದ್ದೇವೆ. ಅದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು.– ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಿಷಯವನ್ನು ಆಮೇಲೆ ಕಂಟಿನ್ಯೂ ಮಾಡಲಿ. ಈಗ ಎಂ. ಎ. ರಶೀದ್, ಅಡ್ವೋಕೇಟ್ ಕೊಲೆಯ ಬಗ್ಗೆ ಸಾವಿರಾರು ಅಡ್ವೋಕೇಟ್‌ಗಳು ಮುಖ್ಯಮಂತ್ರಿಗಳನ್ನು ಘೇರಾವ್ ಮಾಡಿದ್ದಾರೆ. ಅವರ ಲೈಫ್ ಕೂಡ ಇಂಪಾರ್ಟೆಂಟ್.

ಅಧ್ಯಕ್ಷರು.—ಅದನ್ನು ನಂತರ ನೋಡೋಣ

(ಗೊಂದಲ)

ಶ್ರೀಮತಿ ಮುಕ್ತರ್ ಉನ್ನಿಸಾ.—ಈ ವಿಷಯವನ್ನು ಚರ್ಚೆ ಮಾಡಲೇಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹೊರಗಡೆ ಹೋಗುವುದಕ್ಕಾಗುವುದಿಲ್ಲ. ಈ ವಿಷಯದ ಪ್ರಸ್ತಾಪ ಆಗಲಿ.

ಶ್ರೀಮತಿ ಮುಕ್ತರ್ ಉನ್ನಿಸಾ.—ಅವರುಗಳೆಲ್ಲಾ ಲಾಯರ್ಸ್ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಘೇರಾವ್ ಮಾಡಿದ್ದಾರೆ. ಎಲ್ಲಾ ಶೇಮ್ ಶೇಮ್ ಎಂದು ಕೂಗುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಚರ್ಚೆಯ ಮಧ್ಯದಲ್ಲಿ ಬೇರೆ ವಿಷಯವನ್ನು ಎತ್ತುವುದಕ್ಕೆ ಸಾಧ್ಯವಾಗುವುದಿಲ್ಲ. ನಾಳೆ ಅವರು ಹೇಳುತ್ತಿರುವ

ವಿಚಾರವನ್ನು ತೆಗೆದುಕೊಳ್ಳುವುದಾಗಿ ತಾವು ಹೇಳಿದ್ದೀರಿ. ಆದ್ದರಿಂದ ಈಗ ಅದನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಾವಿರಾರು ವಕೀಲರು ಹೊರಗಡೆ ನಿಂತು ಕೊಂಡು ಘೋಷಣೆಗಳನ್ನು ಕೂಗುತ್ತಿದ್ದಾರೆ. ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಅವರನ್ನು ಘೇರಾವೋ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮುಖ್ಯಮಂತ್ರಿಗಳು ಸಮರ್ಥರಿದ್ದಾರೆ. ಅವರು ಅಲ್ಲಿರುವ ವಕೀಲರಿಗೆ ಸಮಂಜಸವಾದಂಥ ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೂ ಸಹ ಶಾಸಕರ ಭವನಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅವರು ಯಾರನ್ನೂ ಹೊರಗಡೆ ಹೋಗಲು ಬಿಡುತ್ತಿಲ್ಲ.

(ಸಭೆಯಲ್ಲಿ ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರ ಬಗ್ಗೆ ಚರ್ಚೆಯಾಗಬೇಕೆಂದು ಇವೊತ್ತು ಬೆಳಿಗ್ಗೆಯೇ ಇಲ್ಲಿ ಪ್ರಸ್ತಾಪವಾಯಿತು.

ಅಧ್ಯಕ್ಷರು.—ಇದನ್ನು ನಾಳೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀಮತಿ ಮುಕ್ತರುನ್ನೀಸಾ.—ಅದು ಸಾಧ್ಯವಿಲ್ಲ. ಈಗಲೇ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಜಿ. ಎಂ. ಕಾನಡೆ.—ಹೊರಗಡೆ ಸಾವಿರಾರು ಜನ ವಕೀಲರು ಸೇರಿಕೊಂಡು ತಮಗೆ ನ್ಯಾಯ ಬೇಕೆಂದು ಘೋಷಣೆ ಕೂಗುತ್ತಿದ್ದಾರೆ. ಆದ್ದರಿಂದ ಸರ್ಕಾರದಿಂದ ನಮಗೆ ಹೇಳಿಕೆ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲಿ ಸೇರಿದ್ದ ವಕೀಲರಿಗೆ ಮುಖ್ಯಮಂತ್ರಿಗಳು ಸಮಾಧಾನ ಮಾಡಿ ಹೇಳಿದ ಮೇಲೆ ಅವರೆಲ್ಲರೂ ಅಲ್ಲಿಂದ ಚದುರಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವೂ ಸಹ ವಕೀಲರಾಗಿ ಕೆಲಸ ಮಾಡಿದ್ದೀರಿ. ಇವೊತ್ತಿನ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದವರು ಇವೊತ್ತೇ ಒಂದು ಹೇಳಿಕೆಯನ್ನು ಕೊಡುವಂತೆ ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೂ ಸಹ ಈ ಹಿಂದೆ ಕಪ್ಪುಕೋಟು ಹಾಕಿದ್ದವರು. ಆದ್ದರಿಂದ ವಿಷಯದ ಪ್ರಾಮುಖ್ಯತೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು ?

ಅಧ್ಯಕ್ಷರು.—ಈಗ ಬರಗಾಲದ ಬಗ್ಗೆ ಚರ್ಚೆ ನಡೆದಿದೆ. ಅದು ಮುಗಿಯಲಿ.

ಶ್ರೀ ಎಂ. ವೀರಪ್ಪ ಮೊಯಿಲಿ,—ಹಾಗಿದ್ದರೆ ಈ ದಿನ ಸಭೆ ಮುಗಿಯುವುದಕ್ಕೆ ಮೊದಲು ಸರ್ಕಾರ ಒಂದು ಹೇಳಿಕೆಯನ್ನು ಕೊಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವೀರಪ್ಪಮೊಯಿಲಿ ಅವರು ಮಾಡಿದಂಥ ಸಲಹೆಯನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಅವರು ಸಾಧ್ಯವಾದರೆ ಈ ದಿನ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಮೊದಲು ತಾವು ಇದನ್ನು ನಾಳೆ ತೆಗೆದುಕೊಳ್ಳೋಣ ಎಂದು ಹೇಳಿದ ಮೇಲೆ ನಾವು ಸಮ್ಮನಾದೆವು. ಆದರೆ ಈಗಿನ ಪರಿಸ್ಥಿತಿಯೇ ಬೇರೆ ಆಗಿದೆ. ಹೊರಗಡೆ ಸಾವಿರಾರು ವಕೀಲರು ಸೇರಿಕೊಂಡು ಘೋಷಣೆಗಳನ್ನು ಕೂಗುತ್ತಿದ್ದಾರೆ. ನಾವು ಯಾರೂ ಸಹ ಹೊರಗಡೆಗೆ ಹೋಗಲು ಅವರು ಬಿಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ಈ ರೀತಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಬಿಸ್‌ನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ,

ಮೂರು ಗಂಟೆಗೆ ಅದರ ಸಭೆಯು ಸೇರುತ್ತಿದೆ. ಅಲ್ಲಿಯವರೆಗೆ ಬರಗಾಲದ ಬಗ್ಗೆ ಚರ್ಚೆ ಮುಂದುವರೆಯಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಲಿ, ಚರ್ಚೆ ಬೇಕಾದರೆ ನಾಳೆ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪರ್ಮಿಷನ್ ಕೊಟ್ಟಿದ್ದಾರೆಯೋ. ಮಾನ್ಯ ಮೊಯಿಲಿಯವರು ಒಂದು ಸಲಹೆ ಮಾಡಿದ್ದಾರೆ. ಈ ಸಭೆ ಮುಗಿಯುವುದಕ್ಕಿಂತ ಮುಂಚಿತವಾಗಿ ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕು ಎಂದು ಹೇಳಿದ್ದಾರೆ. ಈ ವಿಷಯವನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿಕಳುಹಿಸಿದ್ದೇನೆ. ಈಗ ಬರಗಾಲದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಮನೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಎಷ್ಟೋ ಸಾರಿ ಮಧ್ಯೆ ಪರ್ಮಿಷನ್ ತೆಗೆದುಕೊಂಡು ಸ್ಟೇಟ್‌ಮೆಂಟ್ ಮಾಡುತ್ತೀರಿ. ಇಂತಹ ಚರ್ಚೆಗಳು ನಡೆದಾಗ ಮಧ್ಯೆ ಪರ್ಮಿಷನ್ ತೆಗೆದುಕೊಂಡು ಸ್ಟೇಟ್‌ಮೆಂಟ್ ಕೊಟ್ಟಂಥ ಅನೇಕ ಉದಾರಣೆಗಳಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸದನ ಏಳುವುದಕ್ಕೆ ಮೊದಲು ಈ ಬಗ್ಗೆ ಒಂದು ಹೇಳಿಕೆ ಕೊಡಬೇಕು. ಏಕೆಂದರೆ, ಈಗ ನಾನು ಹೈಕೋರ್ಟಿಗೆ ಒಂದು ಕೇಸ್ ಬಗ್ಗೆ ಹೋಗಿದ್ದೆ. ಹೈಕೋರ್ಟ್‌ನಲ್ಲಿ ಲಾಯರ್ಸ್ ಬಾಯ್ಕಾಟ್ ಮಾಡಿದ್ದಾರೆ. ಎಲ್ಲಾ ಕೋರ್ಟ್‌ಗಳಲ್ಲೂ ಬಾಯ್ಕಾಟ್ ಆಗಿದೆ ಎಲ್ಲಿ ಕಾನೂನು ಸಂರಕ್ಷಣೆ ಆಗಬೇಕೋ ಅಂತಹ ವಿಧಾನಸೌಧದಲ್ಲಿ ಕಾನೂನು ಸಂರಕ್ಷಣೆ ಆಗುತ್ತಾ ಇಲ್ಲ ಎಂದು ಅಡ್ವೋಕೇಟ್ಸ್ ಎಲ್ಲಾ ಪ್ರತಿಭಟನೆ ಮಾಡುತ್ತಾ ಇದ್ದಾರೆ. ಸಾರ್ವಜನಿಕರ ಕುತೂಹಲವನ್ನು ಕೆರಳಿಸತಕ್ಕಂಥ ಪ್ರಸಂಗ ಬಂದಿದೆ. ತಾವೂ ಕೂಡ ಕಪ್ಪು ಕೋಟು ಹಾಕಿದಂತಹವರು. ಇವೊತ್ತಿನ ದಿವಸ ಅದರ ಪಾವಿತ್ರ್ಯತೆ ಹೋಗಿದೆ. ಇದು ಇಡೀ ಸಮುದಾಯದ ಮೇಲೆ ಬಂದಿದೆ. ಈ ಸದನ ಏಳುವುದಕ್ಕಿಂತ ಮೊದಲು ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಲಿ. ಸರ್ಕಾರದ ಅಭಿಪ್ರಾಯ ಏನಿದೆ ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗಲಿ. ವಿಧಾನಸೌಧದ ಹೊರಗಡೆ ಘೇರಾವ್ ಆಗುತ್ತಿದೆ, ನಮಗೆ ಕೂಡ ಒಳಗೆ ಪ್ರವೇಶ ಮಾಡಲಿಕ್ಕೆ ಆಗಲಿಲ್ಲ. ವಿಧಾನಸೌಧದ ಒಳಗಡೆ ಸೆಕ್ಯೂರಿಟಿ ಇದೆ, ಶಾಂತವಾಗಿದೆ. ಆದರೆ ಹೊರಗಡೆ ಅಲ್ಲೋಲ ಕಲ್ಲೋಲವಾಗಿದೆ ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಸಭೆಯಲ್ಲಿ ಕಿವಿ, ಕಣ್ಣು ಎಲ್ಲಾ ಮುಚ್ಚಿಕೊಂಡು ವ್ಯವಹಾರ ಮಾಡಲಿಕ್ಕೆ ಹೇಗೆ ಆಗುತ್ತದೆ ? ಆದ್ದರಿಂದ ಈ ಪರಿಸ್ಥಿತಿಯನ್ನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದುದು.

ಶ್ರೀ ಆರ್. ವೆಂಕಟರಾಮಯ್ಯ.—ಇವತ್ತು ಪರಿಸ್ಥಿತಿ ಬಹಳ ಗಂಭೀರವಾಗಿದೆ. ಯಾವ ಟೈಮಿನಲ್ಲಿ ಏನಾಗುತ್ತದೆಯೋ ಗೊತ್ತಿಲ್ಲ. ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆದ್ದರಿಂದ ಈ ಬಗ್ಗೆ ಸ್ಟೇಟ್‌ಮೆಂಟ್ ಕೊಡಬೇಕು. ಎಲ್ಲಾ ಲಾಯರ್ಸ್ ಸ್ಟ್ರೈಕ್ ಮಾಡುತ್ತಾ ಇದ್ದಾರೆ. ಇದು ಆಲ್ ಇಂಡಿಯಾ ಫಿನಾಮಿನ ಆಗತಕ್ಕಂಥಾದ್ದು ಇದೆ.

ಶ್ರೀ ಜಿ. ಎಂ. ಕಾನಡೆ.—ಸರ್ಕಾರದಿಂದ ಈ ಬಗ್ಗೆ ಹೇಳಿಕೆ ಕೊಡಲಿ. ಇಷ್ಟೊಂದು ನಿಧಾನ ಮಾಡಿದ್ದೇ ತಪ್ಪು. ಇಷ್ಟರೊಳಗೆ ಹೇಳಿಕೆ ಕೊಡಬೇಕಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಕೀಲರಿಗೆ ನ್ಯಾಯ ಕೊಡಬೇಕು ಎಂದು ಹೇಳಿದ್ದಾರೆ. ವಕೀಲರಿಗೇ ಆಗಲಿ, ಯಾರಿಗೆ ಆಗಲಿ, ನಾಗರೀಕರಿಗೇ ಆಗಲಿ ನ್ಯಾಯ ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯ.

SRI M. VEERAPPA MOILY.—Government should discharge its duty.

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಸ್ಚಾರ್ಜ್ ಆಫ್ ಡ್ಯೂಟಿ ಇದೆ. ನ್ಯಾಯವಾದಿಗೆ ರಾಜ್ಯಾಂಗದಲ್ಲಿ ಒಂದು ಸ್ಥಾನ ಇದೆ. ಅದನ್ನು ರಕ್ಷಣೆ ಮಾಡುವುದರ ಬಗ್ಗೆ ಅಷ್ಟೇ ತೀಕ್ಷ್ಣವಾಗಿ ಆಲೋಚನೆ ಮಾಡುತ್ತಿದ್ದೇವೆ, ಅದರಲ್ಲಿ ನಾವು ಎಂದೂ ಹಿಂದೆ ಇಲ್ಲ. ಈಗಾಗಲೇ ಅವರು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿದ್ದಾರೆ, ಅವರು ಉತ್ತರ ಕೊಟ್ಟಿದ್ದಾರೆ, ಇಂದು ಸದನ ಏಳುವ ಮೊದಲು ಈ ಬಗ್ಗೆ ಹೇಳಿಕೆ ಕೊಡುವುದಕ್ಕೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿಕಳಿಸಿದ್ದೇನೆ.

† ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ರಾಜ್ಯದಲ್ಲಿ ಬಂದಿರತಕ್ಕಂಥ ಬರಗಾಲದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರುಗಳು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ೧೭೫ ತಾಲ್ಲೂಕುಗಳ ಪೈಕಿ ೧೪೨ ತಾಲ್ಲೂಕುಗಳು ಈಗಾಗಲೇ ಬರಗಾಲ ಪ್ರದೇಶಗಳಾಗಿವೆ. ಅಲ್ಲಿ ಜನರು ನೋವನ್ನು ಅನುಭವಿಸತಕ್ಕ ಪರಿಸ್ಥಿತಿಯನ್ನು ಸರ್ಕಾರ ಮನಗಂಡು ಈಗಾಗಲೇ ಕೇಂದ್ರಸರ್ಕಾರಕ್ಕೆ ೨೮೯ ಕೋಟಿ ರೂಪಾಯಿಗಳ ಅನುದಾನವನ್ನು ಪಡೆಯಲಿಕ್ಕೆ ಮನವಿ ಸಲ್ಲಿಸಿ ಸರ್ಕಾರ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದೆ. ಈ ರೀತಿ ಸರ್ಕಾರ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿರುವುದಕ್ಕಾಗಿ ನಾನು ರಾಜ್ಯದ ಜನತೆಯ ಪರವಾಗಿಸರ್ಕಾರಕ್ಕೆಅಭಿನಂದನೆಯನ್ನು ಸಲ್ಲಿಸುತ್ತಾ ಇದ್ದೇನೆ. ರಾಜ್ಯದಲ್ಲಿ ಬಹುಮುಖ್ಯವಾಗಿ ಬರಗಾಲ ಪ್ರದೇಶಗಳಲ್ಲಿ ಹಳ್ಳಿಯ ಜನತೆ ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಕೃಷಿ ಕಾರ್ಮಿಕರು ರೈತರು ಹೆಚ್ಚು ನೋವನ್ನು ಅನುಭವಿಸುತ್ತಾರೆ. ಕೃಷಿಕನಿಗೆ ಬಹುಮುಖ್ಯವಾಗಿ ಬೇಕಾಗಿರುವಂಥಾದ್ದು ಅವನ ದನಕರುಗಳಿಗೆ ಮೇವು ಮತ್ತು ನೀರು. ಒಕ್ಕಲುತನದ ಆಧಾರದಮೇಲೆ ಅವಲಂಭಿಸಿರತಕ್ಕ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚು ಕಷ್ಟವನ್ನು ಅನುಭವಿಸುತ್ತಾರೆ. ಹಿಂದೆ ಕೂಡ ನಾವು ಬರಗಾಲದ ಕಷ್ಟವನ್ನು ಅನುಭವಿಸಿದ್ದೇವು. ಮತ್ತೆ ಆ ಕಷ್ಟವನ್ನು ಈಗ ಕಾಣತಕ್ಕ ಸಂದರ್ಭ ಬಂದಿದೆ. ನೂರಾರು ಎಕರೆ ಜಮೀನು ಇಟ್ಟುಕೊಂಡಿರುವಂಥ ರೈತರು ಕೂಡ ಇವತ್ತು ಕೂಲಿ ಮಾಡತಕ್ಕ ಪರಿಸ್ಥಿತಿ ಬಂದಿದೆ. ಕಾಲಕ್ಕೆ ಸರಿಯಾಗಿ ಫಸಲು ಬಾರದೇ ಹೋದರೆ, ರೈತ ತೊಂದರೆಗೆ ಗುರಿಯಾಗುವುದಲ್ಲದೆ, ತನ್ನ ದನಕರುಗಳಿಗೆ ಮೇವು ಕೂಡ ಒದಗಿಸುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಬರುತ್ತದೆ. ಕೂಲಿ ಹುಡುಕಿಕೊಂಡು ಊರಿನಿಂದ ಊರಿಗೆ ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಸಹಕಾರಿ ಸಂಘಗಳ ಮೂಲಕ ಬ್ಯಾಂಕುಗಳ ಮೂಲಕ ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲಗಳನ್ನು ಮಾಡಿ, ಕೊಳವೆ ಬಾವಿಗಳನ್ನು ಮಾಡಿ, ಹಳ್ಳಗಳ ಮೂಲಕ ಏತ ನೀರಾವರಿ ಮಾಡುವಂಥ ರೈತರು, ವಿದ್ಯುತ್ ಕೊರತೆಯಿಂದ ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಅಣೆಕಟ್ಟುಗಳಲ್ಲಿ ನೀರಿಲ್ಲ, ಜಲಾಶಯಗಳಲ್ಲಿ ನೀರಿಲ್ಲದಿರುವಾಗ ಆಡಮಾನ ಬ್ಯಾಂಕುಗಳಲ್ಲಿ ಮಾಡಿರುವಂಥ ಸಾಲಕ್ಕೆ ಬಡ್ಡಿ ಕಟ್ಟುವುದಕ್ಕೂ ಶಕ್ತಿ ಇಲ್ಲದೇ ಇರುವಂಥ ಪರಿಸ್ಥಿತಿ ಇದೆ ಬರಗಾಲ ಕಾಮಗಾರಿಗಳಲ್ಲಿ ಬಹಳ ಮುಖ್ಯವಾಗಿ ಸ್ಥಿರವಾದ ಕೆಲಸಗಳನ್ನು ಮಾಡುವ ಕಡೆಗೆ ಸರ್ಕಾರದವರು ಹೆಚ್ಚು ಗಮನಕೊಡಬೇಕು. ಬರೀ ರಸ್ತೆಗೆ ಮಣ್ಣು ಹಾಕಿ, ಜನರ ಕಣ್ಣಿಗೂ ಮಣ್ಣು ಹಾಕುವಂಥ ಕೆಲಸಕ್ಕೆ ಬದಲಾಗಿ. ಕೆರೆಕಟ್ಟೆಗಳನ್ನು, ಶಾಲಾಕಟ್ಟಡಗಳನ್ನು, ಸೇತುವೆಗಳನ್ನು ಕಟ್ಟುವಂಥ ಕಡೆಗೆ ಗಮನಕೊಟ್ಟರೆ ಜನಗಳಿಗೂ ಉದ್ಯೋಗ ದೊರೆಯುತ್ತದೆ, ಶಾಶ್ವತವಾದ ಕೆಲಸಗಳೂ ಆಗುತ್ತವೆ. ಬರಗಾಲ ಬಂದರೆ ಅದನ್ನು ಸ್ವಾಗತಿಸತಕ್ಕ ಜನಗಳೂ ಕೂಡ ನಮ್ಮಲ್ಲಿದ್ದಾರೆ. ಸಮಾಜ ಮತ್ತು ಸರ್ಕಾರವನ್ನು ಶೋಷಣೆ ಮಾಡತಕ್ಕ ಜನ ಇದ್ದಾರೆ. ಇಂಥವರ ಬಗ್ಗೆ ಬಿಗಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಸರ್ಕಾರದ ಹಣ ಪೋಲಾಗದಂತೆ ನೋಡಿಕೊಳ್ಳಬೇಕು. ಬರಗಾಲ ಕಾಮಗಾರಿಗಳ ಮೂಲಕ ಕೂಲಿಗಾಗಿ ಕಾಳು ಯೋಜನೆ ಇದ್ದು, ಇದರಲ್ಲಿ ಬರೀ ಕಾಳನ್ನು ಕೊಟ್ಟರೆ ಮಾತ್ರ ಸಾಲದು. ವಸ್ತುಗಳನ್ನು ಕೊಳ್ಳುವುದಕ್ಕೆ ಹಣವನ್ನೂ ಕೊಡಬೇಕಾಗುತ್ತದೆ.

(ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ನಾನು ಈಗಾಗಲೇ ಹೇಳಿರುವಂತೆ ರೈತರು ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲಗಳನ್ನು ಸಹಕಾರ ಸಂಘಗಳ ಮೂಲಕ ಬ್ಯಾಂಕುಗಳ ಮೂಲಕ ತೆಗೆದುಕೊಂಡಿದ್ದಾರೆ ಮುಂಗಾರು ಪೀಕು ಹೋಯಿತು ಹಿಂಗಾರು ಮಳೆ ಸೂಚನೆ ಕೂಡ ಆಶಾದಾಯಕವಾಗಿಲ್ಲ. ಸರ್ಕಾರ ಕೊಟ್ಟಿರುವ ಸಾಲವನ್ನು ವಸೂಲು ಮಾಡುವ ಬದಲು ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳಾಗಿ ಪರಿವರ್ತಿಸಬೇಕು. ಸಾಲ ವಸೂಲು ಮಾಡುವ ಮೂಲಕ ರೈತರ ಆಸ್ತಿಪಾಸ್ತಿಗಳನ್ನು ಮತ್ತು ದನಕರುಗಳನ್ನು ಹರಾಜು ಮಾಡುವಂಥ ಪರಿಸ್ಥಿತಿ ಬರದಂತೆ ನೋಡಿಕೊಳ್ಳಬೇಕು.

೩-೦೦ ಪಿ.ಎಂ.

ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ಅವರಿಗೆ ದುಡಿಮೆ ಇದ್ದರೆ ಸಾಲವನ್ನು ಕೊಡಲಿಕ್ಕೆ ಸಾಧ್ಯ. ಅವರಿಗೆ ದುಡಿಮೆ ಇಲ್ಲದೇ ಇದ್ದಾಗ, ಅವರು ಕಷ್ಟ ಪರಿಸ್ಥಿತಿಯಲ್ಲಿರುವಾಗ, ಸರ್ಕಾರದ ಹಣ ಕಟ್ಟಲಿಕ್ಕೆ ಕಷ್ಟ ಇರುವುದರಿಂದ, ಸರ್ಕಾರ ಈ ವಸೂಲಿ ಕ್ರಮವನ್ನು ನಿಲ್ಲಿಸಬೇಕೆಂದು ತಮ್ಮ

ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಹಲವಾರು ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ನಮ್ಮ ರಾಜ್ಯದ ದೃಷ್ಟಿಯಿಂದ ಒಂದೇ ಅಲ್ಲ, ನಮ್ಮ ರಾಷ್ಟ್ರದ ವ್ಯಾಪ್ತಿಯಲ್ಲಿಯೂ ಸಹ ಭೀಕರವಾದ ಬರಗಾಲ ಬಂದಿರುವುದರಿಂದ ಜನರು ಕಳವಳಕಾರಿಯಾಗತಕ್ಕ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ಸರ್ಕಾರ ಮುಂಜಾಗ್ರತೆ ಕ್ರಮ ವಹಿಸಿರುವುದನ್ನು ಸ್ವಾಗತಿಸುತ್ತಾ, ಕೇಂದ್ರಸರ್ಕಾರವನ್ನು ಒತ್ತಾಯಿಸುವ ಮೂಲಕ ಆರ್ಥಿಕ ಅನುದಾನವನ್ನು ಪಡೆಯುವಲ್ಲಿ ಸರ್ಕಾರ ಯಶಸ್ವಿಯಾಗಬೇಕು ಬಡ್ಡಿ ರೂಪದಲ್ಲಿ ಕೊಡುವುದು ಅಲ್ಲ, ಸಾಲದ ರೂಪದಲ್ಲಿ ಕೊಡುವುದು ಅಲ್ಲ. ರಾಷ್ಟ್ರದ ಯಾವುದೇ ರಾಜ್ಯ ಇರಲಿ, ಅಲ್ಲಿ ಯಾವುದೇ ಸರ್ಕಾರ ಇರಲಿ ಆ ಸರ್ಕಾರಗಳಿಗೆ ಕೇಂದ್ರಸರ್ಕಾರದ ಸಹಾಯಧನದ ಮೂಲಕ ಬರಗಾಲ ಕಾಮಗಾರಿ ತೆಗೆದುಕೊಂಡು ಬರಗಾಲದ ಕಷ್ಟ ನಿವಾರಣೆ ಮಾಡಲಿಕ್ಕೆ ಒಂದು ವ್ಯವಸ್ಥೆಯನ್ನು ಕೇಂದ್ರಸರ್ಕಾರವೇ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಇನ್ನು ಮಾನ್ಯ ಸಚಿವರು ತಮ್ಮ ವರದಿಯಲ್ಲಿ ದನಕರುಗಳಿಗೆ ಗೋಶಾಲೆಯನ್ನು ಮಾಡಬೇಕಾಗಿದೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ನಮ್ಮ ರಾಷ್ಟ್ರದ ಸಂಪತ್ತು ಅಂದರೆ ಇವೊತ್ತು ನಮ್ಮ ದನಕರುಗಳೇ ನಮ್ಮ ಕೃಷಿಗೆ ದನಕರುಗಳೇ ಆಧಾರ, ರೈತರಿಗೆ ಅವುಗಳಿಂದ ನಷ್ಟವಾದರೆ ಅವನ ಕುಟುಂಬಕ್ಕೆ ನಷ್ಟ ಆಗುತ್ತದೆ. ಆದ್ದರಿಂದ, ದನಕರುಗಳನ್ನು ರಕ್ಷಣೆ ಮಾಡುವುದು ಅಷ್ಟೇ ಮುಖ್ಯವಾದುದು. ಜನತೆಗೆ ಉದ್ಯೋಗ ಕೊಟ್ಟು ಅವರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಡುವುದರ ಜೊತೆಗೆ ದನಕರುಗಳ ರಕ್ಷಣೆಯ ಬಗ್ಗೆ ಅಷ್ಟೇ ಅನುಕೂಲ ಮಾಡಿಕೊಡಬೇಕಾದುದು ಬಹಳ ಅಗತ್ಯವಿದೆ. ಗೋಶಾಲೆಗಳನ್ನು ಕೆಲವೊಂದು ಭಾಗಗಳಲ್ಲಿ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಸರ್ಕಾರ ಬರಗಾಲ ಪೀಡಿತ ಪ್ರದೇಶಗಳಿಗೆ ಆರ್ಥಿಕ ನೆರವನ್ನು ಕೊಡುವುದರ ಮೂಲಕ ಸ್ಥಿರವಾದ ಕೆಲಸವನ್ನು ತೆಗೆದುಕೊಳ್ಳಬೇಕು. ಕೃಷಿಕರಿಗೆ ಜೀವನ ನಡೆಸತಕ್ಕ ನೆಮ್ಮದಿ ಇಲ್ಲದೇ ಇದ್ದರೂ, ಅವನಿಗೆ ಗಂಜಿ ಕೊಡತಕ್ಕ ವ್ಯವಸ್ಥೆಯನ್ನಾದರೂ ಮಾಡಲು ಅವನಿಗೆ ಉದ್ಯೋಗ ಕೊಟ್ಟು. ದನಕರುಗಳ ರಕ್ಷಣೆ ಮಾಡುವುದರ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮುಂಜಾಗರೂಕತೆ ಕ್ರಮ ವಹಿಸಿ ಬರಗಾಲ ಪ್ರದೇಶದ ಜನತೆಗೆ ಸಹಾಯ ಮಾಡಬೇಕೆಂದು ಈ ಸರ್ಕಾರದಲ್ಲಿ ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಚಂದ್ರಶೇಖರಯ್ಯ (ತಿಪಟೂರು).—ಸನ್ಮಾನ್ಯ ಅಧ್ಯಕ್ಷಣಿಯವರೆ, ಈ ಬರಗಾಲ ಬಹಳ ಹೆಚ್ಚಿನ ರೀತಿಯಲ್ಲಿ ಎಂದೂ ಕೇಳಿದ ಬರಗಾಲ ನಮ್ಮ ರಾಜ್ಯದಲ್ಲಿ ಬಂದಿದೆ. ಇದು ನಮ್ಮ ರಾಜ್ಯದಲ್ಲಿಯೇ ಅಲ್ಲ, ಸುಮಾರು ನಾಲ್ಕೈದು ರಾಜ್ಯಗಳಲ್ಲಿ ಬರಗಾಲ ಬಂದಿದೆ, ಇದರ ಬಗ್ಗೆ ನಾವು ಮಾತ್ರ ಇಲ್ಲಿ ಮಾತನಾಡಿಕೊಂಡರೆ ಬಗೆಹರಿಯುವುದಿಲ್ಲ. ಇವೊತ್ತು ಸರ್ಕಾರ ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಅದಕ್ಕೆ ಶಾಸಕರು ಬೆಂಬಲ ಕೊಟ್ಟು, ಆ ಕ್ಷೇತ್ರದ ಜನರು ಅದರ ಬಗ್ಗೆ ಚಿಂತನೆ ಮಾಡಬೇಕು. ಅದು ಇಲ್ಲದೆ, ರೈತನ ಬಗ್ಗೆ ಎಷ್ಟೇ ಹೇಳಿದರೂ ಅದು ವ್ಯರ್ಥವಾಗುತ್ತದೆ. ಇದಕ್ಕೆ ಸರ್ಕಾರ ಒಂದೇ ಹೊಣೆಯಲ್ಲ, ಪ್ರತಿಯೊಬ್ಬ ಪ್ರಜೆಯೂ ಸಹ ಈ ದುರ್ಭಿಕ್ಷೆ ಕಾಲದಲ್ಲಿ ಸಮಾಧಾನವಾಗಿ, ನಿಷ್ಠೆಯಿಂದ, ಪ್ರಾಮಾಣಿಕವಾಗಿ ಸರ್ಕಾರದಿಂದ ಬರತಕ್ಕ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸಿಕೊಂಡು, ಕೃಷಿಕಾರ್ಮಿಕರಿಗೆ ಆಗತಕ್ಕ ತೊಂದರೆಗಳನ್ನು ಗಮನಿಸಿ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಂಡಲ್ ಪಂಚಾಯತ್ ಸೆಕ್ರೆಟರಿಗಳನ್ನು ಇನ್ನೂ ಕೆಲವು ಕಡೆಗಳಲ್ಲಿ ಪೋಸ್ಟ್ ಮಾಡಿಲ್ಲ ಎಂದು ಹೇಳಿದರು. ಅದನ್ನು ಸರ್ಕಾರ ಮಾಡಬೇಕಾಗುತ್ತದೆ. ಇನ್ನು ಉಪಾಧ್ಯಾಯರುಗಳ ಬಗ್ಗೆ ಸಂಬಳ ಆಗುತ್ತಿಲ್ಲ ಎಂದು ಹೇಳಿದರು ನನ್ನ ತಾಲ್ಲೂಕಿನಲ್ಲಿ ಇದುವರೆಗೂ ಆ ತರಹ ಆಗಿಲ್ಲ. ಒಂದೆರಡು ಇದ್ದರೆ ಜಿಲ್ಲಾ ಪರಿಷತ್ತಿನವರೇ ಹಣವನ್ನು ಪಾವತಿ ಮಾಡುವಾಗ ಹೆಚ್ಚು ಕಡಿಮೆ ಆಗಿದ್ದರೆ ಆಗಿರಬಹುದು. ಸರ್ಕಾರದ ವತಿಯಿಂದ ಮಾತ್ರ ಇಂಥಾದ್ದು ಆಗಿಲ್ಲ. ಇನ್ನು ಸಾಲ ವಸೂಲಾತಿಯ ಬಗ್ಗೆ ಹೇಳಿದರು. ಸರ್ಕಾರ ಅಷ್ಟು ತೀಕ್ಷ್ಣವಾಗಿ ವಸೂಲು ಮಾಡಿದಂಥ ಪರಿಸ್ಥಿತಿ ಎಲ್ಲಿಯೂ ಕಾಣುತ್ತಿಲ್ಲ. ನಾನೂ ಕೂಡ ನನ್ನ ತಾಲೂಕಿನಲ್ಲಿ ಬಹಳಷ್ಟು ಕಡೆ ನೋಡಿದ್ದೇನೆ. ಎಲ್ಲಿಯೂ ಕೂಡ ಒಂದು ದೂರೂ ಸಹ ಇಲ್ಲ. ಸರ್ಕಾರದವರು ಪೋಲಿಸ್ ಅಧಿಕಾರಿಗಳನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡುಹೋಗಿ ಸಾಲವನ್ನು ವಸೂಲ್ಮಾಡಿಲ್ಲ. ಒಂದು ವೇಳೆ ಸಾಲವನು ಕೊಟ್ಟಿರತಕ್ಕ ಬ್ಯಾಂಕ್‌ಗಳ

ವರು ತಮ್ಮ ತಮ್ಮ ಬ್ಯಾಂಕ್ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆ ಎಂಬ ಭಾವನೆ ಬರುವ ಸಲುವಾಗಿಯೋ ಅಥವಾ ತಮ್ಮ ಬ್ಯಾಂಕ್ ಉತ್ತಮ ಸ್ಥಿತಿಯಲ್ಲಿ ಇರಬೇಕೆಂಬ ಉದ್ದೇಶದಿಂದಲೋ ಸಾಲವನ್ನು ಆ ರೀತಿ ವಸೂಲಿ ಮಾಡಿರಬಹುದು. ಆದರೆ ನನಗೆ ತಿಳಿದಂತೆ ಯಾವ ಸರ್ಕಾರದ ಅಧಿಕಾರಿಗಳೂ ಕೂಡ ರೈತರಿಗೆ ಹಿಂಸೆಯನ್ನು ಕೊಟ್ಟು ವಸೂಲ್ಮಾಡಿಲ್ಲ. ಅಧಿಕಾರಿಗಳು ಆ ಮಟ್ಟಕ್ಕೆ ಹೋಗಿಲ್ಲ. ಇನ್ನು ಕೆಲವು ಕಡೆ ಕೆಲಸಕ್ಕೋಸ್ಕರ ೨೦ ಜನರನ್ನು ತೆಗೆದುಕೊಳ್ಳುವ ಕಡೆ ೨೦೦ ಜನರನ್ನು ತೆಗೆದುಕೊಂಡಿರುವುದು ಆಗಿರಬಹುದು. ಬರಗಾಲದಲ್ಲಿ ಕೂಲಿಗಾರರಿಗೆ ಕೆಲಸವನ್ನು ಕೊಡಬೇಕೆಂಬ ಸರ್ಕಾರದ ಉದ್ದೇಶ ಏನಿದೆ ಅದರ ಪ್ರಕಾರ ಅಧಿಕಾರಿಗಳು ನಡೆದುಕೊಳ್ಳಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಕೆಲವು ಕಡೆ ಹೆಚ್ಚು ಕೂಲಿಗಾರರನ್ನು ಕೆಲವು ಅಧಿಕಾರಿಗಳು ತೆಗೆದುಕೊಂಡಿರಬಹುದು. ಅಲ್ಲಿ ಸಣ್ಣಪುಟ್ಟ ತಪ್ಪುಗಳಾಗಿರಬಹುದು. ಈ ವಿಚಾರವನ್ನು ಮಾನ್ಯ ಶಾಸಕರು ಪ್ರತಿಯೊಬ್ಬರೂ ಆಲೋಚನೆ ಮಾಡಿದರೆ ಇಲ್ಲಿ ಪ್ರಶ್ನೆಯನ್ನು ಕೇಳತಕ್ಕ ಪ್ರಮೇಯ ಬರುವುದಿಲ್ಲ.

ಇನ್ನು ಬೀಜ ಗೊಬ್ಬರದ ವಿತರಣೆಯ ಬಗ್ಗೆ ಬಹಳ ಜನರು ಪ್ರಸ್ತಾಪ ಮಾಡಿದರು. ನನ್ನ ತಾಲೂಕಿನಲ್ಲಿ ಏನಾಗಿದೆ ಎಂಬುದು ನನಗೆ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ ಮಳೆ ತಡವಾಗಿ ಬಂದಿದೆ. ಈ ಸಂದರ್ಭದಲ್ಲಿ ಬೀಜ ಗೊಬ್ಬರ ಸರಿಯಾದ ರೀತಿಯಲ್ಲಿ ಸಕಾಲದಲ್ಲಿ ರೈತರಿಗೆ ವಿತರಣೆಯಾಗದಿದ್ದರೆ ಅದರ ಬಗ್ಗೆ ಅಧಿಕಾರಿಗಳು, ಅಥವಾ ಮಂತ್ರಿಗಳು ಗಮನಕೊಟ್ಟು ರೈತರಿಗೆ ಇವು ಬೇಗ ದೊರಕುವಂತೆ ಶೀಕ್ಷ್ಣ ಕ್ರಮ ತೆಗೆದುಕೊಳ್ಳಬೇಕು. ಬರಗಾಲ ಎಂದರೇನು ಎಂಬುದು ಕೆಲವು ಅಧಿಕಾರಿಗಳಿಗೆ ಗೊತ್ತಿರುವುದಿಲ್ಲ. ತೆಂಗಿನಮರ ಯಾವರೀತಿ ಇದೆಯೆಂದು ಕೆಲವರಿಗೆ ಗೊತ್ತಿರುವುದಿಲ್ಲ. ನಮ್ಮ ತಿಪಟೂರು ತಾಲೂಕಿನಲ್ಲಿ ಈಗ ಬರಗಾಲ ಬಂದಿದ್ದು ತೆಂಗಿನ ಮರಗಳೆಲ್ಲಾ ಒಣಗಿ ಹೋಗಿ ೬೦-೭೦ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ, ಅಲ್ಲಿ ನೀರಿಗೂ ಅಭಾವ ಬಂದಿದೆ. ಬರಗಾಲ ಇದೆಯೆಂಬುದು ಸರ್ಕಾರೀ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಬರಗಾಲ ನಮ್ಮ ತಿಪಟೂರು ತಾಲೂಕಿನಲ್ಲಿದೆಯೆಂದು ಹೇಳಬೇಕಾಗಿದೆ ಏಕೆಂದರೆ ಕಳೆದಸಾರಿ ಸ್ವಲ್ಪಮಟ್ಟಿಗಾದರೂ ಹುಲ್ಲು, ರಾಗಿ, ಭತ್ತ, ಆಗಿತ್ತು. ಆದರೆ ಈಸಾರಿ ಅಷ್ಟೂ ಕೂಡ ಆಗಿಲ್ಲ. ಮಳೆ ತಡವಾಗಿ ಬಂದಿದೆ. ಕೆಲವುಕಡೆ ಬಿತ್ತನೆ ಕೆಲಸ ಆದಮೇಲೆ ಸಣ್ಣಗೆ ಸೋನೆ ಮಳೆ ಬರುತ್ತಿದೆ. ಇದರಿಂದಾಗಿ ಬಿತ್ತಿದ ಬೀಜದ ಕಾಳುಗಳನ್ನೂ ಕೂಡ ಕ್ರಿಮಿ ಕೀಟಗಳು ತಿಂದು ಹೋಗುವ ಪರಿಸ್ಥಿತಿ ಬಂದಿದೆ......

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಚಂದ್ರಶೇಖರಯ್ಯನವರು ಮಾಡುತ್ತಿರುವ ಭಾಷಣವನ್ನು ಯಾರೂ ಕೂಡ ಮಂತ್ರಿಗಳು ಬರೆದುಕೊಳ್ಳುತ್ತಿಲ್ಲ. ಬೇರೆ ಯಾರು ಗುರುತು ಹಾಕಿಕೊಳ್ಳುತ್ತಿದ್ದಾರೋ ನನಗಂತೂ ಕಾಣುತ್ತಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರ್ಕಾರದ ಪರವಾಗಿ ಯಾರೂ ಗುರುತು ಹಾಕಿಕೊಳ್ಳದಿದ್ದರೆ ಅವರು ಭಾಷಣ ಮಾಡಿದ್ದಕ್ಕೆ, ಅವರ ಕಷ್ಟ ಸುಖ ಹೇಳಿಕೊಂಡಿದ್ದಕ್ಕೆ ಏನು ಪ್ರಯೋಜನ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಚಂದ್ರಶೇಖರಯ್ಯನವರು ಅವರ ಪಕ್ಷದವರೇ ಆಗಿರುವುದರಿಂದ ಅವರು ಏನು ಹೇಳುತ್ತಾರೆಂದು ಅವರಿಗೆ ಗೊತ್ತಿದೆ. ಅಷ್ಟೇ ಅಲ್ಲ ಅವರು ಏನು ಹೇಳುತ್ತಾರೆಂಬುದನ್ನು ಸಚಿವರು ಮೊದಲೇ ಬರೆದು ಇಟ್ಟುಕೊಂಡಿದ್ದಾರೆ

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.- ಬರಗಾಲ ಪರಿಸ್ಥಿತಿಯ ಬಗ್ಗೆ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡುತ್ತಿದೆ ಎಂಬುದನ್ನು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಸರ್ಕಾರದವರು ತಿಳಿಸಬೇಕು.

ಮಾನ್ಯ ಅಧ್ಯಕ್ಷಿಣಿಯವರೆ, ನಮ್ಮ ರಾಜ್ಯದಲ್ಲಿ ಮೊದಲು ಇದ್ದಂಥ ಅರಣ್ಯ ಪ್ರದೇಶವೆಲ್ಲಾ ನಾಶವಾಗುತ್ತಿದೆ. ಇದೇರೀತಿ ಅರಣ್ಯ ಪ್ರದೇಶವೆಲ್ಲಾ ನಾಶವಾಗುತ್ತಾ ಹೋದರೆ ಮುಂದೆ ಏನು ಪರಿಸ್ಥಿತಿ ಉಂಟಾಗಬಹುದೆಂಬ ಬಗ್ಗೆ ಯಾರೂ ಕೂಡ ಯೋಚನೆಯನ್ನೇ ಮಾಡಿಲ್ಲ.

ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ಅರಣ್ಯ ಕೇಂದ್ರವನ್ನು ಇಂಪ್ರೂವ್ ಮಾಡಬೇಕೇ. ಪ್ರತಿ ತಾಲ್ಲೂಕಿಗೆ ೨೦ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಎಂದು ಹೇಳಿದರೆ ಏನೂ ಪ್ರಯೋಜನ

ವಾಗುವುದಿಲ್ಲ. ಪ್ರತಿ ತಾಲ್ಲೂಕಿನಲ್ಲಿಯೂ ಗುಡ್ಡಗಾಡುಗಳು ಇರುತ್ತವೆ. ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ಬೆಳೆಸಿರತಕ್ಕಂಥ ಅರಣ್ಯಗಳನ್ನು ಇಂದಿಗೂ ನಾವು ನೋಡುತ್ತಿದ್ದೇವೆ. ಅಂಥ ಒಳ್ಳೆಯ ಅರಣ್ಯಗಳನ್ನು ಬೆಳೆಸಬೇಕು. ನೂರಾರು ವರ್ಷಗಳ ಕಾಲದ್ದು ಅರಣ್ಯವನ್ನು ಈವೊತ್ತು ನಾವು ನೋಡುತ್ತಿದ್ದೇವೆ. ಅಧಿಕಾರಿಗಳು ಬೆಳೆಸತಕ್ಕಂಥ ಅರಣ್ಯಗಳು ಬಹುಬೇಗ ಹುಟ್ಟಿ ಬೆಳೆದು ಸಾಯತಕ್ಕಂಥ ಗಿಡಗಳನ್ನು ಹಾಕಿ ಬೆಳೆಸುತ್ತಿದ್ದಾರೆ. ಸಾವಿರಾರು ಗಿಡಗಳನ್ನು ಹಾಕಿದ್ದೇವೆಂದು ತೋರಿಸುತ್ತಾರೆ. ಬಹುಶಃ ಅವರು ಹಾಕತಕ್ಕಂಥ ಗಿಡಗಳು ಶಾಶ್ವತವಾಗಿ ಇರತಕ್ಕಂಥ ಗಿಡಗಳಲ್ಲ. ಹಿಂದಿನ ಕಾಲದಲ್ಲಿ ಬೆಳೆಸಿದಂಥ ಮರಗಳನ್ನು ನಾಲ್ಕು ಸಾವಿರ ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳವರೆಗೆ ಮಾರಾಟ ಮಾಡಿರತಕ್ಕಂಥದ್ದು ಇರುತ್ತದೆ ಆದ್ದರಿಂದ ಈಗಲೂ ನೂರಾರು ವರ್ಷಗಳು ಶಾಶ್ವತವಾಗಿ ಬೆಳೆದು ಇರತಕ್ಕಂಥ ಗಿಡಗಳನ್ನು ಹಾಕಿ ಬೆಳೆಸತಕ್ಕಂಥ ಮೂಲ ಉದ್ದೇಶವನ್ನು ನಿರೂಪಣೆ ಮಾಡಬೇಕು. ಸ್ವಂತ ಬಿತ್ತನೆ ಬೀಜ ಮಾಡತಕ್ಕಂಥವರಿಗೆ ವಿಮೆ ಮಾಡಬಹುದು ಎನ್ನುವುದೇ ತಿಳಿದಿರುವುದಿಲ್ಲ. ಈ ದೃಷ್ಟಿಯಿಂದ ರೈತರು ಬುದ್ಧಿವಂತರಾಗಿಲ್ಲ. ಅವರನ್ನು ವಿಮೆ ಮಾಡಲು ಸರ್ಕಾರದವರು ಪ್ರೋತ್ಸಾಹಿಸಬೇಕು.

ಇನ್ನು ಬೋರ್ ವೆಲ್‌ಗಳನ್ನು ಹಿಂದೆ ೧೦೦, ೨೦೦ ಅಡಿ ತೆಗೆದಿರತಕ್ಕಂಥವುಗಳು ಸಮವಾಗಿ ನೀರನ್ನು ಹಂಚಿಕೊಳ್ಳುತ್ತಿದ್ದವು. ಈಗ ೮೦೦ ಅಡಿಗಳವರೆಗೂ ಬಾವಿಗಳನ್ನು ತೋಡಿರುವುದರಿಂದ ಇವುಗಳಲ್ಲಿ ನೀರಿಲ್ಲದಂತಾಗಿರುತ್ತದೆ. ೨೪ ಗಂಟೆಗಳು ಕೆಲಸ ಮಾಡುತ್ತಿದ್ದಂಥ ಬಾವಿಗಳಲ್ಲಿ ಈಗ ಒಂದರಲ್ಲೂ ನೀರಿಲ್ಲದಂಥ ಪರಿಸ್ಥಿತಿ ಉಂಟಾಗಿದೆ. ಸಾಲದಕ್ಕೆ ದೈವ ಕೃಪೆಯೂ ಕೂಡ ಇಲ್ಲ. ವರುಣ ದೇವನ ಆಶೀರ್ವಾದವಿಲ್ಲದೆ ನೀರು ಮತ್ತಷ್ಟು ಕೆಳಕ್ಕೆ ಹೋಗುತ್ತಿದೆ. ಸರ್ಕಾರದವರು ಇತ್ತ ನಿಗಾ ಕೊಡಬೇಕು. ದೇವಸ್ಥಾನಗಳು ಪೂರ ನಾಶವಾಗುತ್ತಿವೆ. ಇದರ ಬಗ್ಗೆ ಶಾಸಕರು ಯಾರೂ ಪ್ರಸ್ತಾಪ ಮಾಡುತ್ತಿಲ್ಲ. ಇರತಕ್ಕ ದೈವ ಇದೆ ಎಂದು ದೇವರನ್ನು ನಂಬಿ ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡತಕ್ಕ ಅರ್ಚಕರಿಗೆ ೮-೯ ರೂಪಾಯಿ ಸಂಬಳವನ್ನು ಕೊಡುತ್ತಿರುತ್ತಾರೆ. ಇದರ ಬಗ್ಗೆಯೂ ಸರ್ಕಾರದವರು ಯೋಚನೆ ಮಾಡಬೇಕು. ಭಾರತ ದೇಶ ಒಂದು ನಂಬಿಕೆಯನ್ನು ಹೊಂದಿರತಕ್ಕಂಥ ದೇಶ, ದೇವಸ್ಥಾನ, ದೇವರುಗಳಲ್ಲಿ ನಂಬಿಕೆ ಇಟ್ಟಿರತಕ್ಕಂಥ ದೇಶ. ಹಿಂದಿನ ಕಾಲದಲ್ಲಿ ಮೂರು ರೂಪಾಯಿಗಳಿಗೆ ಐದು ರೂಪಾಯಿಗಳಿಗೆ ಒಂದು ಚೀಲ ಬತ್ತ ಮಾರಾಟ ಮಾಡುತ್ತಿದ್ದ ದೇಶ. ಬಹುಶಃ ಅಂಥ ಕಾಲ ಬರುತ್ತದೆ ಎನ್ನುವ ಭರವಸೆ ನನಗಂತೂ ಇಲ್ಲ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ಬಡತನದ ರೇಖೆಯಲ್ಲಿರುವವರು ಇದರ ಬಗ್ಗೆ ಬಹಳ ಉದಾಸೀನ ಮಾಡುತ್ತಿದ್ದಾರೆ. ಈಗಲೂ ಮಾನ್ಯ ಆರೋಗ್ಯ ಮಂತ್ರಿಗಳು ಇತ್ತಕಡೆ ಹೆಚ್ಚಿನ ಗಮನವನ್ನು ಕೊಡಬೇಕು. ಬಡತನದ ರೇಖೆಯ ಕೆಳಗೆ ಇರತಕ್ಕಂಥವರ ಕುಟುಂಬದಲ್ಲಿ ಮಿತಿ ಇರಬೇಕು. ಬಡಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು, ಸಂತಾನ ಮಿತಿ ಎಲ್ಲರಲ್ಲಿಯೂ ತರಬೇಕು. ಶಾಸಕರು ಹೇಳುತ್ತಾರೆ, ಮಂತ್ರಿಗಳು ಹೇಳುತ್ತಾರೆ, ಅದನ್ನು ತಪ್ಪು ಎಂದು ಹೇಳತಕ್ಕಂಥದ್ದಲ್ಲ.

ಇನ್ನು ಕರ್ನಾಟಕದಲ್ಲಿ ಅದರಲ್ಲೂ ಬಡವರಾಗಿರತಕ್ಕಂಥವರೂ ಕೂಡ ಹಣವನ್ನು ಉಳಿತಾಯ ಮಾಡತಕ್ಕ ವಿಧಾನವನ್ನು ಕಲಿಸಿಕೊಟ್ಟಿದ್ದಾರೆ. ಮಾನ್ಯ ಸಚಿವರಾದ ವೀರಣ್ಣನವರು ಒಬ್ಬ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಮನೆಮನೆಗೂ ಹೋಗಿ, ಹಳ್ಳಿಹಳ್ಳಿಗೂ ಹೋಗಿ ಹಣವನ್ನು ತೊಡಗಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಸಹಾಯವಾಗುತ್ತದೆ, ನಿಮಗೂ ಆಪತ್ಕಾಲಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದಾರೆ. ಈಗ ಇಂದಿರಾವಿಕಾಸ್ ಪತ್ರವೆಂದು ಕೇಂದ್ರ ಸರ್ಕಾರದವರು ತಂದಿರುತ್ತಾರೆ. ಇದರಿಂದ ಕೇಂದ್ರ ಸರ್ಕಾರದವರಿಗೆ ದುಡ್ಡಾಗುತ್ತದೆ. ಇದಕ್ಕೆ ಯಾವ ಕಾನೂನಿನ ತೊಡಕೂ ಇಲ್ಲ. ಸಲೀಸಾಗಿ ಅವರೆಲ್ಲಾ ಇಂದಿರಾ ವಿಕಾಸ ಪತ್ರವನ್ನು ತೆಗೆದು ಇಟ್ಟುಕೊಳ್ಳುತ್ತಿದ್ದಾರೆ. ಇದರಿಂದ ಯಾವ ಜನರಿಗೂ ಮೋಸ ಆಗುತ್ತಿಲ್ಲವೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ೧೪೨ ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಸರ್ಕಾರದ ಲೆಕ್ಕದಲ್ಲಿದೆ. ಹಾಕಿದ ಬೋರ್‌ವೆಲ್‌ಗಳಲ್ಲಿ ಅನೇಕ ಬೋರ್‌ವೆಲ್‌ಗಳು ಕೆಟ್ಟುಹೋಗುತ್ತಿವೆ. ಅವುಗಳನ್ನು ಜಾಗ್ರತ ರಿಪೇರಿ ಮಾಡಿಸತಕ್ಕ ವ್ಯವಸ್ಥೆ ಆಗಬೇಕು. ಮೊದಲು ಅವುಗಳ ರಿಪೇರಿಯನ್ನು ಪಿಹೆಚ್‌ಇ.ಯವರು ಮಾಡುತ್ತಿದ್ದರು. ಅದನ್ನು ಮಂಡಲ ಪಂಚಾಯಿತಿಯವರೇ ಮಾಡಬೇಕೆಂದು ನಜೀರ್‌ಸಾಬ್ ಹೇಳಿದರು.

ರಾಮರಾಜ್ಯ ಬೇಗ ಆಗಬೇಕೆಂಬುದು ಅವರ ಮತ್ತು ಮುಖ್ಯ ಮಂತ್ರಿಗಳ ಆಸೆ ಇದೆ ಅವರುಗಳ ಆಸೆ ಏನಿದೆ ಅದು ಜಾಗ್ರುತೆ ಆಗತಕ್ಕ ಕಾಲ ಬರಲಿ ಎಂದು ದೇವರನ್ನು ಬೇಡಿಕೊಳ್ಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ರಾಮ ಮಾತಿನಂತೆ ನಡೆದುಕೊಂಡಿದ್ದ. ಆದರೆ ಈಗ ಇಲ್ಲಿ ಆ ರೀತಿ ಆಗುತ್ತಿಲ್ಲ.

ಶ್ರೀ ಡಿ.ಎ. ಚಿನ್ನಪ್ಪ.—ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರಂತೆ ನಡೆದುಕೊಳ್ಳಿ.

ಶ್ರೀ ಬಿ.ಎಸ್. ಚಂದ್ರಶೇಖರಯ್ಯ.—ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಹೇಳುತ್ತಿದ್ದೇನೆ, ರಾಜ್ಯದೊಳಗಿರತಕ್ಕ ಎಲ್ಲಾ ಕೆರೆಗಳು ಸಾಕಷ್ಟು ಒತ್ತುವರಿ ಆಗಿವೆ. ಅಷ್ಟೇ ಅಲ್ಲದೆ ರೈತ ಬೆಳೆದ ಜಾಗದಲ್ಲಿ ಕೂಡ ರೀ-ಜನರೇಷನ್ ಮಾಡುತ್ತಿರುವುದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ನನ್ನ ಒಂದು ಸಲಹೆ ಏನೆಂದರೆ. ಕೆರೆಗಳು ಮಾತ್ರ ಒತ್ತುವರಿ ಆಗಬಾರದು. ರೀ-ಜನರೇಷನ್ ಮಾಡುತ್ತೇವೆಂದು ೨-೩ ಸಾವಿರ ಗಿಡಗಳನ್ನು ಹಾಕಿದರೆ ಕೆರೆಯ ವ್ಯಾಪ್ತಿ ಕಡಿಮೆ ಆಗುತ್ತದೆ. ರೀಜನರೇಷನ್ ಮಾಡಿದ್ದು ಶಾಶ್ವತವಾಗಿ ಉಳಿಯುತ್ತದೆ. ಆದರೆ ಸಾಮಾನ್ಯ ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಈಚಲ ಮರಗಳನ್ನು ಹಾಕುವುದಕ್ಕೆ ರೈತ ಬೆಳೆದ ಜಾಗವನ್ನು ಆಕ್ರಮಿಸಿಕೊಳ್ಳದೆ ಕೆರೆಗಳ ದಡದಲ್ಲಿ ಮರಗಳನ್ನು ಹಾಕುವ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡಿದರೆ ಕೆರೆಗಳೂ ಉಳಿಯುತ್ತವೆ ಮತ್ತು ರೈತನ ಜಮೀನು ಉಳಿಯುತ್ತದೆ. ಕಳೆದ ೫-೬ ವರ್ಷಗಳಿಂದ ಮಳೆ ಹೋಗಿ ದನಗಳಿಗೆ ಕೂಡ ಕುಡಿಯುವುದಕ್ಕೆ ನೀರು ಇಲ್ಲ ವಾಗಿದೆ. ಈಗಲಾದರೂ ನಿಗಾ ಮಾಡದಿದ್ದರೆ ಒಂದು ಕೆರೆ ಕೂಡ ಉಳಿಯುವುದಿಲ್ಲವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಬರಗಾಲ ಪರಿಸ್ಥಿತಿಯ ಬಗ್ಗೆ ಹೇಳಿದ ಹಾಗೆ ಪ್ರತಿಯೊಬ್ಬ ಶಾಸಕರೂ ಕೂಡ ಪ್ರಾಮಾಣಿಕವಾಗಿ ಜನರಿಗೆ ಕೆಲಸ ಸಿಗುವಂತೆ, ಸರ್ಕಾರ ಕೊಟ್ಟ ಹಣ ಸಾಮಾನ್ಯ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಮಾನ್ಯ ನಜೀರ್ ಸಾಬ್ ಅವರು ಸಾಕಷ್ಟು ಆಹಾರ ಇದೆ ಎಂದು ಹೇಳಿದ್ದಾರೆ. ಅಂದಾಗ ಈ ವರ್ಷ ಬರಗಾಲಕ್ಕೆ ಸ್ಟಾಕ್ ಇದೆ ಎಂದು ಆಯಿತು. ಆದು ಬಡವರಿಗೆ ತಲುಪುವಂಥ ಕೆಲಸವನ್ನು ಕಾರ್ಯಕರ್ತರು, ಮಂಡಲದ ಪ್ರಧಾನರು ಮತ್ತು ಶಾಸಕರು ಮಾಡಿದ್ದರೆ ಆಹಾರದ ಬಗ್ಗೆ ಬರ ಉಳಿಯುವುದಿಲ್ಲ. ದನಗಳಿಗೆ ಇನ್ನು ಎರಡು ತಿಂಗಳು ಮಳೆ ಬಾರದಿದ್ದರೆ ಮೇವಿನ ಬರ ಉಂಟಾಗುತ್ತದೆ. ಒಂದು ತಿಂಗಳಲ್ಲಿ ಮಳೆ ಬಿದ್ದರೆ ಮೇವಿನ ಬರ ಅಷ್ಟಾಗಿ ಇರುವುದಿಲ್ಲ. ಹಳೇ ಮೈಸೂರಿನವರಿಗಿಂತ ಹೊಸ ಮೈಸೂರಿನವರು ನೆಮ್ಮದಿಯಾಗಿದ್ದಾರೆ. ಅವರು ಚೆನ್ನಾಗಿರಲಿ. ಹಳೇ ಮೈಸೂರಿನಲ್ಲಿ ಮಳೆ ಬಹಳ ಕಡಿಮೆ ಆಗಿ ಬರ ಉಂಟಾಗಿದೆಯೆಂದು ಹೇಳಬೇಕಾಗಿದೆ. ಇದು ಸರ್ಕಾರದ ವಿರುದ್ಧವಾಗಿ ಮಾತನಾಡುವುದು ಎಂದು ಅಲ್ಲ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಬರಗಾಲದ ಬಗ್ಗೆ, ಬಡಜನರ ಬಗ್ಗೆ ಚಿಂತನೆ ಮಾಡುವ ಮನಸ್ಸು ಎಲ್ಲರಿಗೂ ಬರಲಿ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ವಂದಿಸಿ ಮತ್ತು ಇದುವರೆಗೆ ಸಾವಧಾನದಿಂದ ಕೇಳಿದಂತಹ ಮಾನ್ಯ ಸದಸ್ಯರೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷಿಣಿಯವರೆ, ಬರಗಾಲ ಸಾಧಾರಣವಾಗಿ ಇಡೀ ದೇಶದ ಪ್ರಶ್ನೆಯಾಗಿದೆ. ದೇಶಾದ್ಯಂತ ಬರಗಾಲ ಎನ್ನುವುದು ವಾಡಿಕೆಯಾಗಿದೆ. ಕರ್ನಾಟಕದಲ್ಲಿ ಬರಗಾಲ ೪ ವರ್ಷಗಳಿಂದ ಬರುತ್ತಿದೆ. ಬರಗಾಲಕ್ಕೂ ಜನತಾ ಪಕ್ಷಕ್ಕೂ ಬಹಳಷ್ಟು ನೆಂಟಸ್ತಾನ ಇದೆ ಎಂದು ಕಾಣುತ್ತದೆ. ಅದೇ ರೀತಿ ೪ ವರ್ಷಗಳಿಂದ ಕರ್ನಾಟಕದಲ್ಲಿ ಮಳೆ ಬರುತ್ತಿಲ್ಲ. ಇದು ನಮ್ಮ ಕರ್ನಾಟಕ ಜನತೆಯ ದುರಾದೃಷ್ಟ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹೆಗಡೆಯವರು ೧೯೮೩ರಲ್ಲಿ ಅಧಿಕಾರ ವಹಿಸಿಕೊಂಡಾಗ ಆಗಲೇ ದೇವರು ವರ ಕೊಟ್ಟರು.

ಶ್ರೀ ಡಿ.ಎ. ಚಿನ್ನಪ್ಪ.—ಮಳೆ ಬರುವುದೇ ಬೇಡ ಎಂದೇ ? ಕರ್ನಾಟಕದಲ್ಲಿ......

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಬಂಗಾರಪ್ಪನವರು ಋಷಿಗಳನ್ನು ಕರೆದುಕೊಂಡು ಬಂದರೆ ಮಳೆ ಆಗುತ್ತದೆಂದು ಕಾಣುತ್ತದೆ.

ಮಳೆ ಬರಬೇಕು ಎಂದು ಯಾರೂ ಪೂಜೆ ಮಾಡುತ್ತಿಲ್ಲ. ಈ ವರ್ಷದ ಪರಿಸ್ಥಿತಿ ಏನೆಂದರೆ ಯಾವ ಜಿಲ್ಲೆಯಲ್ಲಿ ಬರಗಾಲ ಇರುತ್ತಿರಲಿಲ್ಲವೋ, ಅದರ ಚರಿತ್ರೆಯಲ್ಲೇ ಬರಗಾಲ ಬಂದಿರಲಿಲ್ಲವೋ ಆ ಜಿಲ್ಲೆ

ಗಳಲ್ಲಿ ಇವತ್ತು ಬರಗಾಲ ಬಂದಿದೆ. ಬೇರೆ ಕಡೆ ಬರಗಾಲ ಬರತಕ್ಕದ್ದು ಸಾಧಾರಣವಾದುದು. ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಮತ್ತು ಹಾಸನ ಜಿಲ್ಲೆಯಲ್ಲಿ ಬರಗಾಲ ಬಂದಿರತಕ್ಕದ್ದು ಮೊದಲ ಬಾರಿಗೆ ಎಂದು ಹೇಳಿದರೆ ತಪ್ಪಾಗಲಾರದು ಬೇರೆ ಕಡೆ ಬರಗಾಲದ ಅನುಭವ ಇದೆ. ಯಾವ ರೀತಿಯಲ್ಲಿ ಅದನ್ನು ಅನುಭವಿಸಿಕೊಂಡು ಹೋಗಬೇಕು ಎಂಬ ಅನುಭವ ಇದೆ. ಆದರೆ ಈ ಮೂರು ಜಿಲ್ಲೆಯಲ್ಲಿ ಇಷ್ಟರವರೆಗೆ ಬರಗಾಲ ಬರದೇ ಇರುವುದರಿಂದ ಅದರ ನೋವು ಬಹಳ ಜಾಸ್ತಿಯಾಗಿದೆ. ತಡೆದುಕೊಳ್ಳುವ ಶಕ್ತಿ ಕೂಡ ಅವರಿಗಿಲ್ಲ. ಈ ಪರಿಸ್ಥಿತಿಯಲ್ಲಿ ನಡೆಯುತ್ತಿದೆ. ಮಳೆ ಎಲ್ಲಿ ಬರಬೇಕಾಗಿತ್ತೋ ಅಲ್ಲಿ ಈ ವರ್ಷ ಮಳೆ ಬರಲಿಲ್ಲ. ಮಳೆ ಬರದೇ ಇದ್ದುದರಿಂದ ಆ ಪ್ರಾಂತ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ. ಬರಗಾಲ ಬರುತ್ತದೆ ಎಂದು ಗೊತ್ತಿದ್ದರೂ ಕೂಡ ಸರ್ಕಾರದವರು ಯಾವ ಮುಂದಾಲೋಚನೆ ಮಾಡದೆ ಕಾರ್ಯಕ್ರಮ ಕೂಡ ತೆಗೆದುಕೊಳ್ಳಲಿಲ್ಲ. ನಾಲ್ಕು ವರ್ಷಗಳಿಂದ ಬರಗಾಲ ಬಂದರೂ ಬರಗಾಲ ಬರದ ಹಾಗೆ ತಡೆಗಟ್ಟುವುದಕ್ಕೆ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಅದರ ಬಗ್ಗೆ ಯೋಚನೆ ಮಾಡಿಲ್ಲ. ಬರಗಾಲ ಬಂದಾಗ ಮಾತ್ರ ಹೀಗೆ ಮಾಡಬೇಕಾಗಿತ್ತು ಎಂಬ ಭಾವನೆಯನ್ನು ಸರ್ಕಾರ ಒಪ್ಪುತ್ತದೆ. ಇವತ್ತು ಊಟಕ್ಕೆ ಧಾನ್ಯಗಳಿಲ್ಲ. ಸರಿಯಾಗಿ ಅದನ್ನು ಒದಗಿಸುತ್ತಿಲ್ಲ. ಬಂದ ಧಾನ್ಯವನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಇದು ಇವತ್ತಿನ ಪರಿಸ್ಥಿತಿಯಾಗಿದೆ. ಕೊಡಗಿನಲ್ಲಿ ಹೇಳುವುದಾದರೆ ಅಲ್ಲಿ ಬೆಳೆಸತಕ್ಕ ಬೆಳೆ ಭತ್ತ, ಕಾಫಿ ಮತ್ತು ಏಲಕ್ಕಿ. ಈ ವರ್ಷ ೮೦ ಪರ್ಸೆಂಟ್ ಏಲಕ್ಕಿ ಬೆಳೆದಿದೆ ಕಾಫಿ ೪೦ ಪರ್ಸೆಂಟ್ ಬೆಳೆದಿದೆ ಭತ್ತ ೩೦–೩೫ ಪರ್ಸೆಂಟ್ ಬೆಳೆಯಾಗಬಹುದು. ಈ ಪರಿಸ್ಥಿತಿಯಲ್ಲಿದ್ದಾಗ ಬೀಜ ಕೊಡತಕ್ಕದ್ದಾಗಲೀ ಅಥವಾ ಅದಕ್ಕೆ ಪರಿಹಾರ ಕೊಡುವಲ್ಲಾಗಲೀ ಯಾವ ಕ್ರಮವನ್ನೂ ಸರ್ಕಾರ ಈವರೆಗೆ ಕೈಗೊಳ್ಳಲಿಲ್ಲ, ಜಿಲ್ಲಾ ಪರಿಷತ್ತಿನಲ್ಲಿ ಕೇಳಿದರೆ ಸರ್ಕಾರವನ್ನು ಕೇಳಬೇಕೆಂದು ಹೇಳುತ್ತಾರೆ. ಸರ್ಕಾರ ಕೇಳಿದರೆ ಜಿಲ್ಲಾ ಪರಿಷತ್‌ನವರು ಮಾಡಬೇಕೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ನಡೆದು ಯಾವ ಕಾರ್ಯಕ್ರಮಗಳೂ ಆಗುತ್ತಿಲ್ಲ. ಕೊಡಗಿನಲ್ಲಿ ಮಳೆ ಬಂದರೆ ಮಂಡ್ಯ ಜಿಲ್ಲೆ, ಬೆಂಗಳೂರು ಜಿಲ್ಲೆ ಮತ್ತು ಸೇಲಂ ಜಿಲ್ಲೆಗಳಲ್ಲಿ ಸಮೃದ್ಧಿಯಾಗಿ ಬೆಳೆ ಆಗುತ್ತದೆ. ಆದರೆ ಈ ವರ್ಷ ಅದು ಬರದೇ ಇದ್ದುದರಿಂದ ಅದರ ಬಿಸಿ ಈ ಜಿಲ್ಲೆಗಳಿಗೆ ತಟ್ಟಿದೆ. ಕೊಡಗಿನಲ್ಲಿ ಮಳೆ ಇಲ್ಲದಿದ್ದುದರಿಂದ ಕಾವೇರಿ ಮಾತೆಯನ್ನು ನಾವು ನೆನೆಸುತ್ತಾ ಇಲ್ಲ ಎಂಬ ಯೋಚನೆ ನನ್ನ ತಲೆಗೆ ಹೊಳೆದಿದೆ. ಸೇಲಂ ಜಿಲ್ಲೆಯಿಂದ ಜನ ಬಸ್ ಮಾಡಿಕೊಂಡು ಬಂದು ಪೂಜೆ ಮಾಡುತ್ತಿದ್ದಾರೆ. ಇದು ನಡೆಯತಕ್ಕ ಪರಿಸ್ಥಿತಿ. ಜಿಲ್ಲಾ ಪರಿಷತ್ತಿನವರು ಯಾವ ಕೆಲಸ ಮಾಡುವುದಕ್ಕೂ ನಮ್ಮಲ್ಲಿ ಹಣ ಇಲ್ಲ, ಸರ್ಕಾರದಿಂದ ಹಣವನ್ನು ಒದಗಿಸಿ ಕೊಡಿ ಎಂದು ಶಾಸಕರನ್ನು ಕೇಳುತ್ತಿದ್ದಾರೆ. ಹಣ ಇಲ್ಲದ್ದರಿಂದ ಏನೂ ಮಾಡುವುದಕ್ಕಾಗುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಇವತ್ತು ಪೈರು ಹಾಕಿದ್ದರೆ ಹಾಕಿದ ಪೈರೆಲ್ಲಾ ಒಣಗಿಹೋಗಿದೆ. ಮತ್ತೆ ಪೈರು ಹಾಕುವುದಕ್ಕೆ ಸರ್ಕಾರ ಬೀಜದ ವ್ಯವಸ್ಥೆ ಮಾಡುತ್ತಿಲ್ಲ. ಸರ್ಕಾರದವರನ್ನು ಸನ್‌ಫ್ಲವರ್ ಬೀಜ ಕೇಳಿದಾಗ ಮಹಾರಾಷ್ಟ್ರಕ್ಕೆ ಇಂಡೆಂಟ್ ಮಾಡಿದ್ದೇವೆ ಅದು ಬಂದ ಮೇಲೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ಇವತ್ತಿನ ಪರಿಸ್ಥಿತಿ. ಮುಂಚಿತವಾಗಿ ಇವರು ಯಾವುದನ್ನೂ ಸ್ಟಾಕ್ ಮಾಡುತ್ತಿಲ್ಲ. ಪೈರು ಹೋದನಂತರ ಬೇರೆ ಪೈರು ಹಾಕುವುದಕ್ಕೆ ಬೀಜ ಇಲ್ಲ. ಇದನ್ನು ಸರ್ಕಾರದವರು ಕೂಡಲೇ ಒದಗಿಸಿಕೊಡುವುದಕ್ಕೆ ಪ್ರಯತ್ನಪಟ್ಟರೆ ಒಳ್ಳೆಯದು. ನಮ್ಮಲ್ಲಿರುವ ಬೋರ್‌ವೆಲ್‌ಗಳು ಬತ್ತಿಹೋಗುತ್ತಿವೆ. ಹೊಸದಾಗಿ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಸರ್ಕಾರದಿಂದ ಹಣವೇ ಬರುತ್ತಿಲ್ಲ. ಕೊಡಗಿನಲ್ಲಿ ೭೭ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಮಾತ್ರ ಹಣವನ್ನು ಕಳುಹಿಸಿದ್ದಾರೆ. ಈ ೭೭ ಕೊಳವೆ ಬಾವಿಗಳನ್ನು ಯಾವ ಭಾಗದಲ್ಲಿ ತೆಗೆಯಬೇಕು ? ಕೊಳವೆ ಬಾವಿಗಳನ್ನು ತೆಗೆಯುವ ಸಂದರ್ಭದಲ್ಲಿ ದನಕರುಗಳಿಗೆ ಕುಡಿಯುವಂಥ ರೀತಿಯಲ್ಲಿ ನೀರಿನ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು. ಆ ದಿಸೆಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು, ಸರ್ಕಾರದಿಂದ ತೆಗೆದುಕೊಂಡಿರತಕ್ಕಂತಹ ಸಾಲದ ಬಗ್ಗೆ ಅಲ್ಲಿಯ ಜನ ಏನು ಹೇಳುತ್ತಿದ್ದಾರೆಂದರೆ ಸಾಲವನ್ನು ತೆಗೆದುಕೊಂಡಿದ್ದೇವೆ, ಬರಗಾಲ ಬಂದಿದೆ, ತೆಗೆದುಕೊಂಡಿರುವಂತಹ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳುತ್ತಿದ್ದಾರೆ, ಅದೇ ರೀತಿ ಕ್ಯಾಷ್ ಕ್ರಾಪ್ ಸಾಲವನ್ನು ತೆಗೆದುಕೊಂಡಿದ್ದು ಅದನ್ನೂ ಕೂಡ ಮನ್ನಾ ಮಾಡಬೇಕು, ಒಂದು ವೇಳೆ ಮನ್ನಾ ಮಾಡಲಿಕ್ಕೆ ಸಾಧ್ಯವಾಗದಿದ್ದರೆ ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಬೇಕೆಂದು ಕೇಳುತ್ತಿದ್ದಾರೆ. ನಂತರ ಕಂದಾಯವನ್ನು ಪರಿಪೂರ್ಣವಾಗಿ ಮನ್ನಾ ಮಾಡಬೇಕೆಂದು ಜನ ಕೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಹರಿಸಿ ಜನತೆಗೆ ಆ ಒಂದು ಅನುಕೂಲವನ್ನು ಒದಗಿಸಿಕೊಡ

ಬೇಕೆಂದು ಒತ್ತಾಯಿಸುತ್ತಿದ್ದೇನೆ. ಆಮೇಲೆ ಏತ ನೀರಾವರಿ ಕೂಡ ಕೆಲಸ ಮಾಡುತ್ತಿಲ್ಲ. ಅನೇಕ ಕಡೆ ಕೆರೆಗಳನ್ನೇನೊ ತೆಗೆದಿದ್ದಾರೆ ಆದರೆ ಇವರು ತೆಗೆದಿರುವಂತಹ ಕೆರೆಗಳೆಲ್ಲಾ ನೀರು ಇಲ್ಲದೆ ಬತ್ತಿ ಹೋಗಿವೆ. ಕೆರೆಗಳು ಬತ್ತಿ ಹೋಗಿದ್ದರೂ ಸಹ ಕೆರೆಯ ಹಿಂಭಾಗದಲ್ಲಿರುವಂತಹ ರೈತರಿಗೆ ನೀರನ್ನು ಬೇಸಾಯಕ್ಕೆ ಉಪಯೋಗಿಸುತ್ತಿದ್ದೀರೆಂದು ವಾಟರ್ ಟ್ಯಾಕ್ಸ್‌ನ್ನು ಹಾಕುತ್ತಿದ್ದಾರೆ. ವಾಟರ್ ಟ್ಯಾಕ್ಸನ್ನು ಕೊಡದಿದ್ದರೆ, ಮನೆಯನ್ನು ಜಫ್ತಿ ಮಾಡಲಾಗುವುದೆಂದೂ ಸಹ ಅಧಿಕಾರಿಗಳು ರೈತರಿಗೆ ಹೆದರಿಸುತ್ತಿದ್ದಾರೆ. ನೀರಿನ್ನು ಉಪಯೋಗಿಸದಿದ್ದರೂ ವಾಟರ್ ಟ್ಯಾಕ್ಸನ್ನು ಹಾಕಿರುವಂಥದು ನ್ಯಾಯವಾದುದಲ್ಲ. ಮತ್ತೆ ಮಂಡಲ್ ಪಂಚಾಯಿತಿಗಳ ಬಗ್ಗೆ ಹೇಳುವುದಾದರೆ ಚುನಾವಣೆಗೆ ಮುನ್ನ ಪ್ರತಿಯೊಂದು ಮಂಡಲ್ ಪಂಚಾಯಿತಿಗೂ ಕಾರ್ಯದರ್ಶಿಯವರನ್ನು ನೇಮಿಸಲಾಗುವುದೆಂದು ಹೇಳಿದಂತಹ ಸರ್ಕಾರ ಈಗ ಮೂರು ಮಂಡಲ್‌ಗಳಿಗೆ ಒಬ್ಬರಂತೆ ಕಾರ್ಯದರ್ಶಿಯವರನ್ನು ನೇಮಕ ಮಾಡಿದ್ದಾರೆ. ಅವರು ಮೂರು ಮಂಡಲ್ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ಎಲ್ಲಾ ಹಳ್ಳಿಗಳನ್ನೂ ಸುತ್ತಬೇಕು. ಇನ್ನುಳಿದ ಸಮಯದಲ್ಲಿ ಅವರು ಕಛೇರಿ ಕೆಲಸ ಮಾಡುವುದು ಹೇಗೆ? ಇದರಿಂದಾಗಿ ಅಲ್ಲಿ ಯಾವುದೇ ಕೆಲಸ ಕಾರ್ಯಗಳು ಆಗುತ್ತಿಲ್ಲ. ಆದ್ದರಿಂದ ಪ್ರತಿಯೊಂದು ಮಂಡಲ್ ಪಂಚಾಯಿತಿಗೂ ಕೂಡಲೇ ಕಾರ್ಯದರ್ಶಿಗಳನ್ನು ಕಡ್ಡಾಯವಾಗಿ ನೇಮಕ ಮಾಡಬೇಕು ಕಾರ್ಯದರ್ಶಿಯವರನ್ನು ನೇಮಕ ಮಾಡುವುದಕ್ಕೆ ಸರ್ಕಾರಕ್ಕೆ ಇರುವಂತಹ ಕಷ್ಟ ಏನು? ಕಳೆದ ಜನವರಿ ತಿಂಗಳಲ್ಲೇ ಮಂಡಲ್ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿದ್ದರೂ ಇದುವರೆವಿಗೂ ಅವರಿಗೆ ಕಾರ್ಯದರ್ಶಿಗಳನ್ನು ಕೊಡದಿದ್ದರೆ ಅವರು ಹೇಗೆ ತಾನೆ ಕೆಲಸ ಮಾಡಿಯಾರು? ಇನ್ನಾದರೂ ಸರ್ಕಾರ ಈ ಬಗ್ಗೆ ಆಸಕ್ತಿ ವಹಿಸಬೇಕು. ಹಿಂದೆ ಸರ್ಕಾರದವರೇ ನೇರವಾಗಿ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಆ ಕೆಲಸಗಳನ್ನು ಮಾಡಿದಂತಹ ಕಂಟ್ರಾಕ್ಟ್‌ದಾರರಿಗೆ ಹಣವನ್ನೇ ಕೊಟ್ಟಿಲ್ಲ. ಇದರಿಂದಾಗಿ ಕೆಲಸ ಮಾಡಿದಂತಹ ಕೂಲಿಗಾರರಿಗೂ ಕೂಲಿಯನ್ನು ಕೊಟ್ಟಿಲ್ಲ. ಈಗ ಸರ್ಕಾರದವರು ಈ ಎಲ್ಲಾ ಕೆಲಸ ಕಾರ್ಯಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದಾರೆ. ಈ ಕಂಟ್ರಾಕ್ಟ್‌ದಾರರು ಜಿಲ್ಲಾ ಪರಿಷತ್ತಿನ ಹತ್ತಿರ ಹೋಗಿ ನಾವು ಮಾಡಿರುವಂತಹ ಕಾಮಗಾರಿಗೆ ಹಣವನ್ನು ಕೊಡಿ ಎಂಬುದಾಗಿ ಕೇಳಿದಾಗ, ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ, ಇದೆಲ್ಲಾ ನಾವು ಬರುವುದಕ್ಕಿಂತ ಮುಂಚಿತವಾಗಿ ಮಾಡಿದುದ್ದು, ಸರ್ಕಾರದಿಂದಲೇ ಈ ಹಣವನ್ನು ಪಡೆದುಕೊಳ್ಳಿ ಎಂದು. ಮತ್ತೆ ಕೆಲವು ಅಧಿಕಾರಿಗಳನ್ನೂ ಕೂಡ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದಾರೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜಿಲ್ಲಾ ಪರಿಷತ್ತಿಗೆ ವರ್ಗಾವಣೆಯಾಗುವವರು ಇದ್ದರೂ, ಜಿಲ್ಲಾ ಪರಿಷತ್ತಿನವರು ಹೇಳುತ್ತಿದ್ದಾರೆ, ಈಗಾಗಲೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅವರನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂಬುದಾಗಿ. ಇದರಿಂದಾಗಿ ಅವರಿಗೆ ಸಂಬಳವೇ ಇಲ್ಲದಂತಾಗಿದೆ. ಈ ರೀತಿಯಾಗಿ ಜನ ದೊಡ್ಡ ಗೊಂದಲಕ್ಕೆ ಈಡಾಗಿದ್ದಾರೆ. ಆಮೇಲೆ ನಮಗೆ ಏನೊಂದು ವರದಿಯನ್ನು ಸರ್ಕಾರ ಕೊಟ್ಟಿದೆ, ಅದು ಸರಿಯಾದ ವರದಿಯಲ್ಲ ಎಂಬುದಾಗಿ ಈ ಸದನದಲ್ಲಿ ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಕೊಡಗಿನ ಬಗ್ಗೆ ಹೇಳುವುದಾದರೆ ಮಡಿಕೇರಿ ತಾಲ್ಲೂಕಿನಲ್ಲಿ ೪೮ ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿದ್ದಾರೆ. ಅದೇ ರೀತಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ೨೪೯ ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿದ್ದಾರೆ. ಆದರೆ ವಿರಾಜಪೇಟೆ ತಾಲ್ಲೂಕಿನಲ್ಲಿ ಕೇವಲ ೩೭ ಗ್ರಾಮಗಳು ಮಾತ್ರ ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿದ್ದಾರೆ. ವಿರಾಜಪೇಟೆ ತಾಲ್ಲೂಕಿನಲ್ಲಿ ನನ್ನ ಕ್ಷೇತ್ರದ ಸ್ವಲ್ಪ ಭಾಗ ಬರುತ್ತದೆ. ಆ ನನ್ನ ಕ್ಷೇತ್ರದಲ್ಲಿ ಬರುವಂತಹ ಪ್ರದೇಶದಲ್ಲಿಯೇ ಸಾಧಾರಣ ೩೦-೩೨ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಆದರೆ ಇಡೀ ವಿರಾಜಪೇಟೆ ತಾಲ್ಲೂಕಿನಲ್ಲಿ ಕೇವಲ ೩೭ ಗ್ರಾಮಗಳು ಬರಗಾಲಕ್ಕೆ ತುತ್ತಾಗಿವೆ ಎಂಬುದಾಗಿ ಹೇಳಿರುವಂತಹದ್ದು ಬಹಳ ಆಶ್ಚರ್ಯಕರವಾದ ಸಂಗತಿ. ಈ ತಾಲ್ಲೂಕಿನಲ್ಲೇ ೨೦೦ಕ್ಕಿಂತ ಹೆಚ್ಚು ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ. ಆದ್ದರಿಂದ ವಾಸ್ತವಾಂಶದ ಬಗ್ಗೆ ಸರಿಯಾದ ವರದಿಯನ್ನು ಕೊಟ್ಟಿಲ್ಲ ಎಂಬುದಾಗಿ ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ.

೩-೩೦ ಪಿ. ಎಂ.

ನಮ್ಮ ಕೊಡಗಿನಲ್ಲಿ ನಾರ್ಮಲ್ ಏರಿಯಾ ಇರತಕ್ಕದ್ದು ೪೪ ಸಾವಿರದ ೫೯೭ ಹೆಕ್ಟೇರ್, ಆಗಿರತಕ್ಕ ಬೆಳೆ ೨,೭೩೪ ಹೆಕ್ಟೇರಿನಲ್ಲಿ ಎಂಬುದಾಗಿ ಹೇಳಿದ್ದಾರೆ. ಆಮೇಲೆ ಮುಂದುವರಿದು ಅವರು ಅಫೆಕ್ಟೆಡ್ ಏರಿಯಾ ಜೀರೊ (ಶೂನ್ಯ) ಎಂದು ಹೇಳಿರುತ್ತಾರೆ. ಎಂದರೆ ಅಲ್ಲಿ ಅಫೆಕ್ಟೆಡ್ ಏರಿಯಾ ಇಲ್ಲವೆಂದು ಅರ್ಥವೇ?

ಅಂದಮೇಲೆ ಅವರು ಹೀಗೆ ಹೇಳಿದ ಮೇಲೆ ಬರಗಾಲ ಹೇಗೆ ಬಂತು? ಇದು ಅರ್ಥ ಆಗುತ್ತಾ ಇಲ್ಲ. ಆದುದರಿಂದ ಈ ರಿಪೋರ್ಟ್ ಸರಿಯಿಲ್ಲ. ನಾನು, ಜಿಲ್ಲಾಧಿಕಾರಿಗಳು ಮತ್ತು ನಮ್ಮ ಜಿಲ್ಲಾಮಂತ್ರಿಗಳು ಸೇರಿ ಒಂದು ರಿಪೋರ್ಟ್ ತಯಾರಿಸಿದ್ದೇವೆ. ಇದು ಸರಿಯಾದ ವರದಿ ಎಂದು ನಾನು ಹೇಳುತ್ತೇನೆ. ಆದ್ದರಿಂದ ಸರ್ಕಾರದವರ ವರದಿಯನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಕಳೆದ ವರ್ಷ ಕೊಡಗಿನ ೩೨ ಹಳ್ಳಿಗಳಿಗೆ ಬರ ತಲೆದೋರಿದ್ದು ಆ ಬಗ್ಗೆ ಕಳೆದ ವರ್ಷ ೧೦ ಸಾವಿರ ರೂಪಾಯಿಗಳನ್ನು ಕೊಡಲಾಗಿತ್ತು, ಈ ವರ್ಷ ಎಷ್ಟು ಕೊಡುತ್ತೀರೋ ನೋಡಬೇಕು, ಕೊಡಗಿನ ಜನರ ಪರಿಸ್ಥಿತಿ ನೋಡುವುದಾದರೆ ೬ ದಿವಸ ಕೆಲಸ ಕೊಡತಕ್ಕ ಕಡೆ ಬರೀ ೩ ದಿವಸ ಕೊಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವ ಜನರಿಗೆ ಕೆಲಸ ಸಿಗುತ್ತಾ ಇಲ್ಲ. ಈ ರೀತಿ ಬರಗಾಲ ಕಾಮಗಾರಿ ನಡೆಯುತ್ತಿದೆ. ಆದುದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳುವುದು ಏನೆಂದರೆ ಬರಗಾಲ ಬರತಕ್ಕದ್ದನ್ನು ನಿರೀಕ್ಷೆ ಮಾಡಿ ಪರಿಹಾರ ಕೊಡುವ ಪ್ರಯತ್ನವನ್ನು ನಾವು ಮೊದಲೇ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ, ಬರಗಾಲವನ್ನು ತಡೆಯತಕ್ಕ ಒಂದು ಪ್ಲಾನನ್ನು ಮಾಡುವುದಾದರೆ ಮಾತ್ರ ಇದನ್ನು ಮಾಡಲು ಸಾಧ್ಯ. ಆದರೆ ಬರಗಾಲ ಬಂದ ಮೇಲೆ ಅದು ಮಾಡುತ್ತೇವೆ, ಇದು ಮಾಡುತ್ತೇವೆ, ಬರಗಾಲ ಬಂದಿದೆ, ಕೇಂದ್ರ ಸರ್ಕಾರವನ್ನು ಬೇಡುತ್ತೇವೆ ಎನ್ನುವುದನ್ನು ಬಿಡಬೇಕು. ನಮ್ಮ ಕಾಲ ಮೇಲೆ ನಾವು ನಿಲ್ಲತಕ್ಕ ಶಕ್ತಿಯನ್ನು ಪಡೆಯಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೇಂದ್ರವಾಗಲೀ ರಾಜ್ಯವಾಗಲೀ, ಏನು ಹಣವನ್ನು ಬಿಡುಗಡೆ ಮಾಡುತ್ತವೆ ಆ ಹಣ ನೇರವಾಗಿ ಬರಗಾಲದ ಬವಣೆಯಲ್ಲಿರತಕ್ಕ ಜನರಿಗೆ ಮುಟ್ಟಬೇಕು. ಇಲ್ಲದಿದ್ದರೆ ಜನರಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಇದು ದುರುಪಯೋಗ ಆಗದೇ ನೇರವಾಗಿ ಉಪಯೋಗ ಆಗುವಂತೆ ಅಧಿಕಾರಿಗಳು, ಮಂತ್ರಿವರ್ಗದವರು, ಶಾಸಕರು, ನೋಡಿಕೊಳ್ಳಬೇಕೆಂದು ಒತ್ತಾಯ ಮಾಡಿ ನಾಲ್ಕು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಜಿ. ಕೊಟ್ರಪ್ಪ.—(ಹರಿಹರ) ಸನ್ಮಾನ್ಯ ಅಧ್ಯಕ್ಷಣಿಯವರೇ, ಇವತ್ತಿನ ದಿವಸ ಕರ್ನಾಟಕದಲ್ಲಿರುವ ಬರಗಾಲವನ್ನು ಮನಗಂಡು ಸರ್ಕಾರ ಕೇಂದ್ರ ಸರ್ಕಾರವನ್ನು ಒಂದು ಮೆಮೊರ್ಯಾಂಡಂ ಕೊಟ್ಟಿರತಕ್ಕ ಮುನ್ನೂಚನೆಯಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವ ದೃಷ್ಟಿಯಲ್ಲಿ ಸರ್ಕಾರ ಮುಂಜಾಗ್ರತೆ ವಹಿಸಿರುವುದಕ್ಕೆ ನಾನು ಸರ್ಕಾರಕ್ಕೆ ಅಭಿನಂದಿಸಬೇಕಾಗಿದೆ. ಎರಡನೆಯದಾಗಿ, ಹಿಂದಿನ ಕಾಲದಿಂದಲೂ ರಾಜ್ಯದಲ್ಲಿ ಸತತವಾಗಿ ಬರಗಾಲ ಇದೆ. ೧೯೫೦ ಕ್ಕಿಂತಲೂ ಮುಂಚಿನಿಂದ ರಾಜ್ಯದಲ್ಲಿ ಬರಗಾಲ ಇದೆ. ಬಹುಶಃ ಕರ್ನಾಟಕದಲ್ಲಿ ಈ ಬರಗಾಲ ಪರಿಸ್ಥಿತಿ ಹಿಂದಿನಿಂದಲೂ ಇದೆ, ಮುಂದೂ ಕೂಡಾ ಬರುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ, ಇದು ಶಾಶ್ವತವಾಗಿ ಕರ್ನಾಟಕಕ್ಕೆ ಅಂಟಿ ಕೊಂಡ ರೋಗ, ಇದನ್ನು ಸಂಪೂರ್ಣವಾಗಿ ಪರಿಹಾರ ಮಾಡುವುದರ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಸರಿಯಾದ ಮಾರ್ಗ ಹುಡುಕತಕ್ಕ ಯೋಜನೆಯನ್ನು ಮಾಡಬೇಕಾದ ಕರ್ತವ್ಯ ಇದೆ. ಯಾವುದೇ ಸರ್ಕಾರ ಬರಲಿ, ಮುನ್ನೂಚನೆಯನ್ನು ಮನಗಂಡು ಯಾವ ಯಾವ ವರ್ಗದ ಜನ ತೊಂದರೆಗೊಳಗಾಗಿದ್ದಾರೆಂಬುದನ್ನು ಮನಗಂಡು ಶಾಶ್ವತವಾದ ಪರಿಹಾರ ಕಾಣತಕ್ಕ ಒಂದು ಯೋಜನೆ ಹಾಕಬೇಕಾದುದು ಸರ್ಕಾರದ ಕರ್ತವ್ಯ. ಕಾಂಗ್ರೆಸ್ ಸರ್ಕಾರ ಸುಮಾರು ೪೦ ವರ್ಷ ರಾಜ್ಯವಾಳಿದರೂ ಈ ಬಗ್ಗೆ ಗಮನಹರಿಸಿಲ್ಲ. ೧೯೪೭ಕ್ಕೂ ಹಿಂದೆಯೂ ಅಂದಿನ ಸರ್ಕಾರ ಇದನ್ನು ಮನಗಂಡು ಸರಿಯಾದ ಶಾಶ್ವತವಾದ ಕ್ರಮಗಳನ್ನು ತೆಗೆದುಕೊಂಡಿದ್ದರೆ ಜನತೆಗೆ ಒಂದು ನೆಮ್ಮದಿಯ ಜೀವನ ಮಾಡುವುದಕ್ಕೆ ಒಂದು ಮಾರ್ಗ ಸಿಕ್ಕುತ್ತಾ ಇತ್ತು. ಇವತ್ತು ಏನಾಗಿದೆ ? ಕೂಲಿಕಾರರು ಅವರ ತೊಂದರೆಗಳನ್ನು ಹೇಳಿಕೊಳ್ಳುವುದಕ್ಕೆ ಮಾರ್ಗ ಇದೆ. ರೈತ ಕೂಲಿಕಾರರಿಗೆ ಅನೇಕ ಸೌಕರ್ಯಗಳನ್ನು ಕೊಟ್ಟು, ಅವರು ಸರಿಯಾಗಿ ಕೆಲಸ ಮಾಡಿ ತಮ್ಮ ಜೀವನ ನಡೆಸತಕ್ಕ ಪ್ರಸಂಗ ಇದೆ. ನೌಕರರ ಬಗ್ಗೆಯಂತು ನಾವು ಹೇಳಲೇಬೇಕಾಗಿಲ್ಲ. ಅವರಿಗೆ ಸಂಬಳ ಬರುತ್ತದೆ. ಬರ ಬಂದರೆ ಏನು, ಬರದಿದ್ದರೆ ಏನು ಬರತಕ್ಕ ಸಂಬಳದಲ್ಲಿ ಆತ ತನ್ನ ಜೀವನವನ್ನು ಸಾಗಿಸುತ್ತಾನೆ. ಈ ಮಧ್ಯಮ ವರ್ಗದ ರೈತರಿಗೆ ಆಗತಕ್ಕ ತೊಂದರೆ ಬಹಳ ಕ್ಲಿಷ್ಟವಾದ ತೊಂದರೆಯಾಗಿದೆ. ಆತ ಸಾಲ ಸೋಲ ಮಾಡಿ ಜೀವನ ಮಾಡತಕ್ಕ ಬಗ್ಗೆ, ಜಮೀನನ್ನು ಅಭಿವೃದ್ಧಿ ಮಾಡತಕ್ಕ ಬಗ್ಗೆ ಪ್ರಯತ್ನ ಮಾಡುತ್ತಾನೆ. ಬರಗಾಲ, ಬಂದಾಗ ಸಾಲ ವಸೂಲಾತಿ ಒಂದು ಕಡೆ, ಊಟಕ್ಕೆ ಹುಡುಕುವುದು ಒಂದು ಕಡೆ, ಗೌರವವನ್ನು ಉಳಿಸಿಕೊಳ್ಳುವುದಕ್ಕೆ ಒಂದು ವರ್ಗ ಕಷ್ಟಪಡುತ್ತಿದೆ, ಶೇಕಡ

೪೫ರಷ್ಟು ಇರುವ ಮಧ್ಯಮ ವರ್ಗದ ರೈತರು ವಿಚಿತ್ರವಾದ ಕಷ್ಟವನ್ನು ಪಡುತ್ತಿದ್ದಾರೆ. ಅವರ ಗೋಳನ್ನು ಹೇಳತೀರದು. ಒಂದು ಪ್ರಸಂಗವನ್ನು ಹೇಳಬೇಕಾದರೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಮಧ್ಯಮ ವರ್ಗದ ರೈತಾಪಿ ಜನ ೪೦-೫೦ ಎಕರೆ ಖುಷ್ಕಿ ಭೂಮಿಯನ್ನು ಹೊಂದಿರತಕ್ಕವರು ರಾತ್ರಿ ಹೊತ್ತು ಕೂಲಿಯನ್ನು ಮಾಡತಕ್ಕ ಸಂದರ್ಭ ಬಂದಿದೆ. ರಾತ್ರಿ ಹೊತ್ತು ಕೂಲಿ ಮಾಡಿಕೊಂಡು ಜೀವನ ಮಾಡತಕ್ಕ ಕಷ್ಟ ಬಂದಿದೆ. ಕೂಲಿ ಮಾಡುತ್ತಾರೆಂದು ಗೊತ್ತಾದರೆ ಸಮಾಜದಲ್ಲಿ ಗೌರವ ಹೋಗುತ್ತದೆಂದು ರಾತ್ರಿ ಹೊತ್ತು ಕೂಲಿ ಮಾಡಿ ಹೊತ್ತು ಹುಟ್ಟುವುದರೊಳಗೆ ಮುಖ ಮುಚ್ಚಿಕೊಂಡು ಮನೆಗೆ ಸೇರಿಕೊಳ್ಳುತ್ತಿದ್ದಾರೆ. ಚಳ್ಳಕೆರೆ ಮತ್ತು ಅನೇಕ ಕಡೆಗಳಲ್ಲಿ ಇದು ನಡೆಯುತ್ತಿದೆ. ೫೦-೬೦ ಎಕರೆ ಭೂಮಿಯನ್ನು ಇಟ್ಟುಕೊಂಡಿರುವವರು ಸಹ ಇವತ್ತು ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಕೂಲಿ ಮಾಡುವಂತಹ ಪ್ರಸಂಗ ಬಂದಿದೆ. ಯಾವ ದೃಷ್ಟಿಯಲ್ಲಿ ನೋಡಿದರೂ ಮಧ್ಯಮ ವರ್ಗದ ರೈತರಿಗೆ ತೊಂದರೆಯಿದೆ. ಸರ್ಕಾರ ಈ ಬಗ್ಗೆ ಯೋಚನೆ ಮಾಡಬೇಕು. ಪ್ಲಾಂಟರ್‌ಗಳಿಗೆ ಬೇಕಾದಷ್ಟು ಸಾಲ ಎಂದರೆ ಕೋಟಿಗಟ್ಟಲೆ ಸಾಲ ಸಿಗುತ್ತದೆ, ಕೂಲಿಕಾರರಲ್ಲಿ ಮಾನ್ಯ ಪಂಪಾಪತಿಯವರು ಮತ್ತು ಕೃಷ್ಣನ್‌ರವರು ಹೇಳುವ ಹಾಗೆ ಒಗ್ಗಟ್ಟಿಲ್ಲ. ಗಲಾಟೆ ಮಾಡತಕ್ಕ ಗಂಟಲು ಇಲ್ಲ, ಅದು ಶೋಷಿತ ವರ್ಗವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸರ್ಕಾರ ರೈತರಿಂದ ಬಲಾತ್ಕಾರವಾಗಿ ಸಾಲವನ್ನು ವಸೂಲಿ ಮಾಡಬಾರದು. ಇವತ್ತು ಭೂಮಿಯನ್ನು ಮಾರಿದರೂ ಸಹ ಸಾಲ ತೀರುವುದಿಲ್ಲ. ಮಧ್ಯಮ ವರ್ಗದ ರೈತರಿಗೆ ಸರಿಯಾದ ಸವಲತ್ತುಗಳನ್ನು ಕೊಟ್ಟರೆ ಅವರು ಜನರಿಗೆ ಬೇಕಾದ ದವಸಧಾನ್ಯಗಳನ್ನು ಬೆಳೆಯುತ್ತಾರೆ. ಇದನ್ನು ಸರ್ಕಾರ ಮನಗಂಡು ಈ ದಿಶೆಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಪತ್ರಿಕೆಯವರು ಸಹ ಇದರ ಬಗ್ಗೆ ಕಾಳಜಿಯನ್ನು ವಹಿಸಬೇಕು. ಪತ್ರಿಕೆಯವರು ಈಗ ಏನು ಮಾಡುತ್ತಾರೆಂದರೆ ಮಂತ್ರಿಗಳು ಏನು ಮಾಡುತ್ತಾರೆ, ಸದಸ್ಯರುಗಳು ಏನು ಮಾಡುತ್ತಾರೆ ಅದನ್ನು ಬರೆಯುತ್ತಿದ್ದಾರೆ. ನಾನು ಸಹ ಪತ್ರಿಕೆಯನ್ನು ನಡೆಸುತ್ತಿದ್ದವನು. ಬರಗಾಲದಲ್ಲಿ ಜನರು ಯಾವ ರೀತಿ ಕಷ್ಟ ಪಡುತ್ತಿದ್ದಾರೆ ಅದಕ್ಕೆ ಸರ್ಕಾರ ಏನು ಮಾಡಬೇಕು ಅದರ ಬಗ್ಗೆ ಕಾಳಜಿಯನ್ನು ವಹಿಸಿ ಪ್ರಕಟಣೆ ಮಾಡಿದರೆ ಜನರಿಗೆ ಅನುಕೂಲವಾದರೂ ಆದೀತು. ಈಗ ಪತ್ರಿಕೆಗಳವರು ಏನು ಮಾಡುತ್ತಿದ್ದಾರೆಂದರೆ ಬರಗಾಲ ಬಂದಾಗ, ಒಣಗಿರುವ ಕೆರೆಗಳ ಚಿತ್ರವನ್ನು ಹಾಕುತ್ತಾರೆ. ಪತ್ರಿಕೆಯವರು ಬರಗಾಲ ಬಂದಾಗ ರೈತರಿಗೆ ಮತ್ತು ಸರ್ಕಾರಕ್ಕೆ ಏನು ಸಲಹೆಗಳನ್ನು ಕೊಡುತ್ತಾರೆ ? ಸಣ್ಣ ರೈತರಿಗೆ, ಮಧ್ಯಮ ವರ್ಗದ ರೈತರಿಗೆ

ಯಾವರೀತಿಯ ಸಹಾಯ ಸೌಲಭ್ಯಗಳನ್ನು ಒದಗಿಸಬೇಕೆಂಬುದರ ಬಗ್ಗೆ ಸಲಹೆ ಮಾರ್ಗೋಪಾಯಗಳನ್ನು ಹೇಳಬೇಕು. ಆ ರೀತಿ ಮಾಡುವುದರಿಂದ ಬರಗಾಲವನ್ನು ಪರಿಹಾರ ಮಾಡಲಿಕ್ಕೆ ಸಹಾಯವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಮಂಗಳೂರು ಕಾರವಾರ ಮತ್ತು ಮಡಿಕೇರಿಗಳಲ್ಲೂ ಸಹ ಮಳೆಯಿಲ್ಲದೆ ಬೆಳೆ ಇಲ್ಲ ಮಳೆ ಬಂದಾಗ ಬೆಳೆಯತಕ್ಕ ಜನರಿಗೆ ನಷ್ಟವಾಗಿದೆ. ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳಲ್ಲಿ ೪೦೦ ಹಳ್ಳಿಗಳು ಇವೆ. ದಾವಣಗೆರೆಯ ೬೦ ಹಳ್ಳಿಗಳಿಗೆ ನೀರು ಬಂದರೆ ಎಲ್ಲಾ ಹಳ್ಳಿಗಳಿಗೂ ನೀರು ಬಂದಿದೆಯೆಂದು ಹೇಳುವ ಪರಿಸ್ಥಿತಿ ಬಂದಿದೆ. ನಮ್ಮ ತಾಲ್ಲೂಕಿನಲ್ಲಿಯೂ ಸಹ ಮಳೆಯಿಲ್ಲದೆ ಬೆಳೆ ಇಲ್ಲದಂತಾಗಿದೆ. ಅನೇಕ ಭಾಗಗಳಲ್ಲಿ ಬಿತ್ತನೆ ಸಹ ಆಗಿಲ್ಲ. ಪಶ್ಚಿಮಘಟ್ಟದ ಭಾಗಗಳಲ್ಲಿಯೂ ಸಹ ಮಳೆಯಿಲ್ಲದೆ ಬೆಳೆ ಇಲ್ಲವಾಗಿದೆ. ಪೂರ್ವಭಾವಿಯಾಗಿ ಮುಂದೆ ಬರತಕ್ಕ ವೇಳೆಗಳಿಗೆ ತಕ್ಕ ಬೀಜಗಳನ್ನು ರೈತರಿಗೆ ಒದಗಿಸುವ ಕೆಲಸವನ್ನು ಮಾಡಬೇಕು. ಮುಂಜಾಗ್ರತೆ ಕ್ರಮವಾಗಿ ಯಾವ ಬೀಜಗಳನ್ನು ಕೊಟ್ಟರೆ ಅನುಕೂಲವಾಗುತ್ತದೆಂಬುದನ್ನು ಮನಗಂಡು ಈ ದಿಶೆಯಲ್ಲಿ ಸರ್ಕಾರ ಕೆಲಸಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ರೈತರ ಕಷ್ಟವನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ರಾಜ್ಯದ ಅನೇಕ ಕಡೆಗಳಲ್ಲಿ ನೀರಿನ ಅನುಕೂಲವಿದೆ. ಅಂತಹ ಕಡೆಗಳಲ್ಲಿ ಏತನೀರಾವರಿ ಯೋಜನೆಗಳನ್ನು ಮಾಡಬೇಕು. ಏತನೀರಾವರಿ ಮತ್ತು ನೀರಾವರಿ ಬಾವಿಗಳನ್ನು ಮಾಡುವುದಕ್ಕೆ ರೈತರಿಗೆ ಸಾಲ ಕೊಡುತ್ತೇವೆಂದು ಹೇಳುತ್ತಾರೆ, ನನ್ನ ಸಲಹೆ ಏನೆಂದರೆ ಬೋರ್‌ವೆಲ್ ಬಾವಿಗಳನ್ನು ಮಾಡತಕ್ಕ ಕೆಲಸವನ್ನು ಸರ್ಕಾರವೇ ಮಾಡಿದರೆ ರೈತರಿಗೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ. ೨೦ ವರ್ಷಗಳಿಂದ ಆಚೆಗೆ ಒಡ್ಡು ಹಾಕಲಿಕ್ಕೆ ಕೊಟ್ಟಂತಹ ಸಾಲವನ್ನು ವಸೂಲಿ ಮಾಡುತ್ತಿದ್ದಾರೆ. ಸಾಲವನ್ನು ವಸೂಲಿ ಮಾಡುವ ಕಾನೂನು ಮಾಡಿದರು, ೧೯೮೫ರ ಮೇ ತಿಂಗಳಿನೊಳಗೆ ಸಾಲ ವಾಪಸ್ಸು ಮಾಡಿದರೆ ೫೦ ಭಾಗ ಮಾಡುತ್ತೇವೆಂದು

ಹೇಳಿದರು. ಮಳೆ ಇಲ್ಲದೆ ಬೆಳೆ ಇಲ್ಲದೆ ರೈತ ಸಾಲವನ್ನು ಯಾವರೀತಿ ವಾಪಸ್ಸು ಕೊಡುತ್ತಾನೆ ? ಆದ್ದರಿಂದ ಸೊಸೈಟಿ ಮತ್ತು ಸರ್ಕಾರ ಕೊಟ್ಟಿರತಕ್ಕ ಸಾಲಗಳನ್ನು ವಸೂಲಿ ಮಾಡತಕ್ಕದ್ದನ್ನು ಮುಂದೆ ಹಾಕಬೇಕು. ೧೫ ದಿವಸಗಳ ಹಿಂದೆ ಮಳೆ ಬಂದಿದೆ. ಆತ ತಾನು ಹಾಕಿರತಕ್ಕ ಬೀಜ ಮೊಳೆತು ಅದರಿಂದ ಫಸಲು ಬರಬೇಕಾದರೆ ಕನಿಷ್ಟ ಎರಡು-ಮೂರು ಮಳೆಗಳಾದರೂ ಬರಬೇಕು. ಇಂತಹ ಸಂದರ್ಭಗಳಲ್ಲಿ ರೈತರಿಂದ ಸಾಲವನ್ನು ವಸೂಲಿ ಮಾಡತಕ್ಕದ್ದು ಸರಿಯಲ್ಲ, ಈಗ ಸಾಲ ವಸೂಲಿ ಮಾಡಲಿಕ್ಕೆ ಹೋದರೆ ರೈತರ ಪರಿಸ್ಥಿತಿ ಏನಾಗುತ್ತದೆಂಬುದನ್ನು ಸರ್ಕಾರ ಮನಗಂಡು ಸಾಲ ವಸೂಲಿ ಮಾಡುವುದನ್ನು ಸ್ಥಗಿತಗೊಳಿಸಬೇಕು. ಆ ರೀತಿ ಮಾಡಿದರೆ ರೈತರ ಬವಣೆ ಕಡಿಮೆಯಾಗುತ್ತದೆ, ಅವರಿಗೆ ಸವಲತ್ತುಗಳನ್ನು ಕೊಟ್ಟಹಾಗೆ ಆಗುತ್ತದೆಂದು ನನ್ನ ಸಲಹೆ. ಈ ಒಂದು ರೀತಿಯಲ್ಲಿ ಈ ಸವಲತ್ತುಗಳನ್ನು ರೈತರಿಗೆ ಸಿಗುವಂತೆ ಮಾಡಿ ಅವರಿಗೆ ಆಗತಕ್ಕಂಥ ತೊಂದರೆಗಳನ್ನು ಬಗೆಹರಿಸತಕ್ಕ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ತಮ್ಮ ವಿರೋಧಪಕ್ಷದವರನ್ನು ಕೇಂದ್ರದಲ್ಲಿ ಅವರ ಸರ್ಕಾರ ಇದೆ. ಬಹಳ ಮಟ್ಟಿಗೆ ಹೆಚ್ಚಿನವರು ರೈತಮಕ್ಕಳೇ ನಾವೆಲ್ಲರೂ ಒಕ್ಕೊರಲಿನಿಂದ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಮಾಡಬೇಡಿ, ನಮಗೆ ಸಲ್ಲಬೇಕಾದ ಸವಲತ್ತು ಕೊಡಬೇಕು ಎಂದು ಹೇಳಬೇಕು. ಕೇಂದ್ರ ಸರ್ಕಾರದಿಂದ ಬರುವಂತಹ ಪರಿಹಾರ ಪಡೆದು ಈಗಿರತಕ್ಕಂಥ ಕಷ್ಟ ಪರಿಸ್ಥಿತಿಯನ್ನು ಬಗೆಹರಿಸಲಿಕ್ಕೆ ಪ್ರಯತ್ನಮಾಡಬೇಕೆಂದು ಅವರಲ್ಲಿ ನಾನು ಕಳಕಳಿಯಿಂದ ಕೇಳಿಕೊಂಡು, ಯಾವುದೇ ಪಕ್ಷ ಇರಲಿ, ಕರ್ನಾಟಕದ ಜನತೆ ಒಂದು, ಅವರ ತೊಂದರೆ, ಕರ್ನಾಟಕ ಎಂಬ ಭಾವನೆಯೂ ಒಂದೇ. ಆದ್ದರಿಂದ ಈ ತೊಂದರೆಯನ್ನು ಬಗೆಹರಿಸಲಿಕ್ಕೆ ನಾವೆಲ್ಲರೂ ಕೇಂದ್ರಸರ್ಕಾರದಿಂದ ಸಹಾಯ ಪಡೆಯಲಿಕ್ಕೆ ಒಗ್ಗಟ್ಟಿನಿಂದ ಹೋರಾಡೋಣ, ಅವರ ಸಹಾಯ ಪಡೆಯೋಣ. ಇದಕ್ಕೆ ಎಲ್ಲರ ಬೆಂಬಲ ಇದೆಯೆಂದು ಭಾವಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ಬರಗಾಲ ೧೯೮೧ ರಿಂದ ಸತತವಾಗಿ ಕಾಡುತ್ತಿದ್ದು, ರೈತ ಜನಾಂಗ ಬಹಳ ಕಂಗೆಟ್ಟಿದೆ. ದುರದೃಷ್ಟವಶಾತ್ ಯಾವ ಒಂದು ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಸರ್ಕಾರ ತೇಪೆ ಕೆಲಸ ಮಾಡಿ ಅವರನ್ನು ಮತ್ತಷ್ಟು ತೊಂದರೆಗೆ ಸಿಲುಕುವಂತೆ ಆಗಿದೆ. ರೈತರು ಕೂಡ ದುರಾದೃಷ್ಟವಶಾತ್ ಅಸಂಘಟಿತರಾಗಿದ್ದಾರೆ. ಇದನ್ನು ದುರುಪಯೋಗಪಡಿಸಿಕೊಂಡು ಅವರಿಗೆ ನಾವು ಇಲ್ಲಸಲ್ಲದ ತೊಂದರೆ ಕೊಡುತ್ತಿದ್ದೇವೆ. ಬರ ಕೂಡ ರೈತರ ಜೀವನವನ್ನು ಬುಡಮೇಲು ಮಾಡುತ್ತಿದೆ. ಸಣ್ಣರೈತರು ತಮ್ಮ ಜಮೀನನ್ನು ಮಾರಿ ಪುನಃ ಕೂಲಿಕಾರನಾಗುವ ಪ್ರಸಂಗ ಬರಬಹುದು. ಕೃಷಿ ಕಾರ್ಮಿಕರು ಇಂದು ವಲಸೆ ಹೋಗುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಈಗ ನಾಲ್ಕು ವರ್ಷಗಳಿಂದ ಈ ರೀತಿಯಾಗಿ ಸತತವಾಗಿ ಬರದಿಂದ ತೊಂದರೆಗೀಡಾಗುತ್ತಿದ್ದರೂ ಕೂಡ ಯಾವುದೇ ಒಂದು ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ. ಇದನ್ನು ಸರಿಪಡಿಸಬೇಕು ಎಂದರೆ, ನಮ್ಮ ಕೋಲಾರ ಮತ್ತು ತುಮಕೂರು ಜಿಲ್ಲೆಗಳು, ಅದರಲ್ಲೂ ತುಮಕೂರು ಜಿಲ್ಲೆ ಬಗ್ಗೆ ಮೊದಲಿನಿಂದಲೂ ಸರ್ಕಾರವನ್ನು ಕೇಳುತ್ತಿದ್ದೇವೆ. ಅಪ್ಪರ್‌ಭದ್ರಾದಿಂದ ಕಾಲುವೆ ಕೋಲಾರಕ್ಕೆ ಬರಬೇಕು. ಇದರಿಂದ ನಾಲ್ಕು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ತುಮಕೂರಿಗೂ ಅನುಕೂಲವಾಗುತ್ತದೆ, ವೆಸ್ಟ್ ಫ್ಲೋಯಿಂಗ್ ರಿವರ್ಸ್ ಏನಿವೆ ಅವುಗಳ ವಿಪರೀತ ನೀರು ಸಮುದ್ರಕ್ಕೆ ಬಂದುಬಿಡುತ್ತದೆ. ಒಂದು ಕೋಟಿ ಖರ್ಚಾದರೂ ಸರಿ, ಈ ವೆಸ್ಟ್ ಫ್ಲೋಯಿಂಗ್ ರಿವರ್ಸ್‌ನ ರಿಸೋರ್ಸನ್ನು ಟ್ಯಾಪ್ ಮಾಡಿ ಬೇರೆ ಬರಗಾಲ ಪ್ರದೇಶಕ್ಕೆ ಬಿಡಬೇಕೆಂದು ಸರ್ಕಾರವನ್ನು ಕೇಳಿಕೊಂಡಿದ್ದೆವು. ಸರ್ಕಾರ ಈ ಬಗ್ಗೆ ಯಾವ ಯೋಜನೆಯನ್ನೂ ಹಾಕಿಕೊಂಡಿಲ್ಲ. ಹಾಕಿಕೊಳ್ಳುವುದೂ ಕೂಡ ಕಾಣುತ್ತಿಲ್ಲ. ಈಗಲಾದರೂ ಕೂಡ ಬರಗಾಲವೆಂದು ಹೇಳಿಕೊಂಡು ಬರುವುದನ್ನು ಬಿಟ್ಟು ಶಾಶ್ವತ ಪರಿಹಾರ ಕ್ರಮಕ್ಕೆ ಆದ್ಯತೆ ಕೊಡಬೇಕು ಎಂಬುದು ನನ್ನ ಸೂಚನೆ. ಇಂದು ಬರಗಾಲ ಮಾನವಸೃಷ್ಟಿ, ದೇವರಸೃಷ್ಟಿ, ಎಂದು ಹೇಳುತ್ತೇವೆ. ಮೊದಲೇ ಚೆನ್ನಾಗಿ ಕೆಲಸ ಮಾಡಿದ್ದರೆ ಈ ಭೀಕರತೆಯಿಂದ ತಪ್ಪಿಸಿಕೊಳ್ಳಬಹುದಿತ್ತು. ಮುಖ್ಯವಾಗಿ ಹಳ್ಳಿಗಳಲ್ಲಿ ಹರಿಜನ ತಾಂಡಾಗಳಲ್ಲಿ ಗಂಗಾಕಲ್ಯಾಣ ಯೋಜನೆಯನ್ವಯ ಕಮ್ಯುನಿಟಿ ಇರಿಗೇಷನ್ ವೆಲ್ಸ್ ಕೊಟ್ಟಿದ್ದರೆ ಕಮ್ಯುನಿಟಿ ಬೋರ್‌ವೆಲ್ಸ್ ಕೊಟ್ಟಿದ್ದರೆ ಇದನ್ನು ತಪ್ಪಿಸಬಹುದಿತ್ತು. ಒಂದೊಂದು ಹಳ್ಳಿಗೆ ಹತ್ತು ಬೋರ್‌ವೆಲ್‌ಗಳನ್ನು ಕೊಟ್ಟಿದ್ದರೆ ಪರಿಸ್ಥಿತಿ ಬೇರೆಯೇ ಇರುತ್ತಿತ್ತು. ಬರಗಾಲದ ಪಿಡುಗು ಇಷ್ಟೊಂದು ಪ್ರಮಾಣದಲ್ಲಿ ಜನರನ್ನು ಕಾಡುತ್ತಿರಲಿಲ್ಲ.

ಆದರೆ ದುರಾದೃಷ್ಟವಶಾತ್ ಇಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈಗಲಾದರೂ ಮಾನ್ಯ ಬೊಮ್ಮಾಯಿಯವರು ಗಮನಿಸಬೇಕು. ಆಂಧ್ರಪ್ರದೇಶದಲ್ಲಿ ಒಂದು ಪದ್ಧತಿಯನ್ನು ನಡೆಸುತ್ತಿದ್ದಾರೆ. ಅಲ್ಲಿ ರೈತರು ಸಾವಿರ ರುಪಾಯಿಗಳನ್ನು ಕೊಟ್ಟರೆ ಒಂದು ಬೋರ್‌ವೆಲ್ ಅನ್ನು ಸರ್ಕಾರದಿಂದ ಹಾಕಿಸಿಕೊಡುತ್ತಾರೆ. ಬೋರ್‌ವೆಲ್ ಸಕ್ಸಸ್ ಆದರೆ ರೈತರು ಅದರ ಖರ್ಚನ್ನು ಕೊಡಬೇಕಾಗುತ್ತದೆ. ಬೋರ್‌ವೆಲ್ ಸಕ್ಸಸ್ ಆದರೆ ದುಡ್ಡು ವಾಪಸ್ಸು ಕೊಡುವುದಕ್ಕೆ ರೈತ ಹಿಂಜರಿಯುವುದಿಲ್ಲ. ದಯವಿಟ್ಟು ಈಗಲಾದರೂ ನಮ್ಮ ಸ್ನೇಹಿತರು ಯೋಚನೆ ಮಾಡಿ ಒಂದೊಂದು ಹಳ್ಳಿಗೆ ಹತ್ತು ಬೋರ್‌ವೆಲ್ ಹಾಕಿಸಿದರೆ ನಿಜವಾಗಿಯೂ ಬರಗಾಲದ ಭೀಕರತೆ ಕಾಡುವುದಿಲ್ಲ. ಒಬ್ಬ ಮಾನ್ಯ ಸದಸ್ಯರು ನಮ್ಮ ಅಂಡರ್‌ಗ್ರೌಂಡ್ ವಾಟರ್ ಲೆವಲ್ ಏನಿದೆ ಅದು ದಿನೇದಿನೇ ಬಹಳ ಕೆಳಗೆ ಹೋಗುತ್ತಿದೆಯೆಂದು ಹೇಳಿದರು.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು.)

ನನ್ನ ಅನುಭವದಲ್ಲಿ ಹೇಳುವುದಾದರೆ, ಕೋಲಾರ ಜಿಲ್ಲೆಯನ್ನು ತೆಗೆದುಕೊಂಡರೂ ಕೂಡ ಅನೇಕ ತಾಲ್ಲೂಕುಗಳಲ್ಲಿ ಬೋರ್‌ವೆಲ್‌ಗಳು ಸಕ್ಸಸ್ ಆಗುತ್ತಿವೆ.

ಆದರೆ ದುರಾದೃಷ್ಟವಶಾತ್ ಯಾರೂ ಕೂಡ ರೈತರಿಗೆ ಅನುಕೂಲ ಮಾಡುವುದಕ್ಕೆ ಹೋಗುತ್ತಿಲ್ಲ. ಈಗಲಾದರೂ ಕೂಡ ತಾವು ಒಂದು ಪ್ಲಾನ್ ಹಾಕಬೇಕು. ಒಂದು ಹಳ್ಳಿಯಲ್ಲಿ ೧೦ ಬೋರ್ ಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಹಳ್ಳಿಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ಈಗಲೂ ಬರಗಾಲ ಇರುವುದಿಲ್ಲ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಇನ್ನು ಗಂಗಾಕಲ್ಯಾಣ ಯೋಜನೆಯನ್ನ ಒಂದು ತಾಲ್ಲೂಕಿಗೆ ೪ ಹಳ್ಳಿಗಳಿಗೂ ಕೊಟ್ಟಿಲ್ಲ. ಹಳ್ಳಿಯ ರೈತ ಅರ್ಜಿ ಹಾಕಿ ತಾಲ್ಲೂಕು ಆಫೀಸಿಗೂ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ಆಫೀಸಿಗೂ, ಓಡಾಡಬೇಕಾಗಿದೆ. ಇದರ ಬಗ್ಗೆ ಹೆಚ್ಚಿಗೆ ಗಮನಕೊಟ್ಟು ತಾವು ಪರ್ಮನೆಂಟ್ ಸ್ಕೀಮ್ ಬಗ್ಗೆ ಗಮನ ಹರಿಸಬೇಕು. ಬರೀ ಹೂಳೆತ್ತುವುದು, ಮಣ್ಣು ತೆಗೆಸುವುದು ಈ ಕೆಲಸದ ಜೊತೆಗೆ ಖಾಯಂ ಕೆಲಸಗಳ ಬಗ್ಗೆ ಹೆಚ್ಚು ಆದ್ಯತೆ ಕೊಡಬೇಕು. ನೀವು ಕೊಡತಕ್ಕ ಬರ ಪರಿಹಾರದ ಹಣದಲ್ಲಿ ಸುಮಾರು ಅರ್ಧದಷ್ಟಾದರೂ ಬಿ.ಡಿ.ಓ. ಆಫೀಸಿನ ಜೂನಿಯರ್ ಇಂಜಿನಿಯರುಗಳಿಗೆ, ಪಿ ಡಬ್ಲ್ಯೂ.ಡಿ. ಆಫೀಸಿನ ಜೂನಿಯರ್ ಇಂಜಿನಿಯರುಗಳಿಗೆ ಪೋಲಾಗುತ್ತಿದೆ. ನಾವು ಈಗ ಕರ್ನಾಟಕದ ೧೮ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಜೊತೆಗೆ ಸರ್ಕಾರದವರು ಒಂದು ಯೋಜನೆ ಮಾಡಬೇಕು. ಈ ರೀತಿ ಬರ ಬಂತು ಎಂದರೆ, ಆಹಾರಧಾನ್ಯಗಳ ವಿತರಣೆ ಜಾಸ್ತಿ ಮಾಡಬೇಕು. ಕೇರಳದಲ್ಲಿ ಒಂದು ಸಿಸ್ಟಂ ಇದೆ. ಅಲ್ಲಿ ೧೮ ಐಟಂನಲ್ಲಿ ಆಹಾರ ವಸ್ತುಗಳ ವಿತರಣಾ ವ್ಯವಸ್ಥೆ ಇದೆ. ಸಲೀಸಾಗಿ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ ನಮ್ಮಲ್ಲಿ ಹಸಿರು ಕಾರ್ಡು ಕೊಟ್ಟಿದ್ದಾರೆ. ೫೦–೬೦ ಪರ್ಸೆಂಟ್ ಕೊಟ್ಟಿದ್ದಾರೆ. ಇನ್ನೂ ೫೦ ಪರ್ಸೆಂಟ್ ಕೊಡಬೇಕಾಗಿದೆ. ಇದರ ಬಗ್ಗೆ ಹಾಡಿ:ಇರತಕ್ಕ ಕಾನೂನನ್ನು ಸ್ವಲ್ಪ ಸಡಿಲ ಮಾಡಿ, ತಹಶೀಲ್ದಾರರಿಗೆ ಮತ್ತು ಬಿ.ಡಿ.ಓ. ಅವರುಗಳಿಗೆ ಅಧಿಕಾರ ಕೊಡಬೇಕು. ಅವರೇ ಸ್ವಂತವಾಗಿ ನೋಡಬೇಕು. ಅವರ ಶಿಫಾರಸ್ಸಿನ ನಂತರ ಸೆಕ್ರೆಟರಿಯವರಿಗೆ ಬರಬೇಕು...

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಮಂಡಲ್ ಪಂಚಾಯಿತಿಗಳಿಗೆ ಹೋಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಂಡಲ್ ಪಂಚಾಯಿತಿಗಳಿಗೂ ಇಲ್ಲ, ಜಿಲ್ಲಾಪರಿಷತ್ತು ಪ್ರೆಸಿಡೆಂಟ್‌ಗಳಿಗೂ ಇಲ್ಲ. ಪರ್ಸನಲ್ ಆಗಿ ಬಿ.ಡಿ.ಓ. ಮತ್ತು ತಹಶೀಲ್ದಾರ್ ಅವರುಗಳು ಹೋಗಿ ನೋಡಿಕೊಂಡು ಬಂದು ಶಿಫಾರಸ್ ಮಾಡಬೇಕು. Secretary to the Government is the only person who can approve the Greencards. ಈ ಕೆಲಸವನ್ನು ಜಿಲ್ಲಾಪರಿಷತ್ತಿಗೂ ಕೊಡಬೇಡಿ. ದಯಮಾಡಿ ಈಗಲಾದರೂ ತಾವು ಬಿ. ಡಿ. ಓ. ಗಳಿಗೆ ಕೊಡಿ, ತಹಶೀಲ್ದಾರ್ ಅವರುಗಳಿಗೆ ಕೊಡಿ. ಇಲ್ಲದೇಹೋದರೆ ಫುಡ್ ಡಿಸ್ಟ್ರಿಬ್ಯೂಷನ್‌ನಲ್ಲಿ ಅನ್ಯಾಯವಾಗುತ್ತದೆ. ಎಷ್ಟೋ ರೈತರುಗಳು ಇದಕ್ಕಾಗಿ ಅರ್ಜಿಗಳನ್ನೇ ಕೊಟ್ಟಿರುವುದಿಲ್ಲ. ಕೃಷಿ ಕಾರ್ಮಿಕರುಗಳಿಗೂ ಇನ್ನೂ ಸಿಕ್ಕಿಲ್ಲ. ಆದುದರಿಂದ ಇವರುಗಳಿಗೂ ಸಿಗುವಂತೆ ಮಾಡಿ, ಇವರ ಬಗ್ಗೆ ಹೆಚ್ಚು ಕಾಳಜಿ ವಹಿಸಿ, ಗ್ರೀನ್ ಕಾರ್ಡುಗಳು ಇನ್ನೂ ಯಾರು ಯಾರಿಗೆ ಕೊಟ್ಟಿಲ್ಲ ಅವರಿಗೆ ಕೊಡುವ ವ್ಯವಸ್ಥೆ

ಮಾಡಬೇಕು. ಈಗ ಹಾಲಿ ಇರತಕ್ಕ ಸರ್ಕಾರದ ಆರ್ಡರ್ ಏನಿದೆ ಇದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ. ಈಗಲೂ ಕೂಡ ಸರ್ಕಾರದವರು ಹಳ್ಳಿಗಳಿಗೆ ಹೋಗಿ ಹಾಕುವ ಪದ್ಧತಿ ಬಿಟ್ಟಿಲ್ಲ. ೮ ದಿವಸದ ಹಿಂದೆ ಒಂದು ಹಳ್ಳಿಗೆ ಹೋಗಿ ಅಲ್ಲಿರತಕ್ಕ ಸಾಮಾನುಗಳನ್ನು ಅಂದರೆ ತಟ್ಟೆ, ಲೋಟ, ಚೆಂಬು ಎಲ್ಲವನ್ನೂ ತೆಗೆಸಿ, ಒಂದು ಕಾರಿನಲ್ಲಿ ತುಂಬಿಕೊಂಡಿದ್ದಾರೆ. ಆದರೆ ಆ ಊರಿನಲ್ಲಿ ಎಲ್ಲರೂ ಒಗ್ಗಟ್ಟಾಗಿ, ಅಲ್ಲಿಂದ ಅವರನ್ನು ಓಡಿಸಿದ್ದಾರೆ. ಸರ್ಕಾರದವರು ಲೋನ್ ಕೊಟ್ಟಿದ್ದರೆ ಸುಮ್ಮನೆ ಕೊಟ್ಟಿಡವುದಿಲ್ಲ. ಜಮೀನುಗಳನ್ನು ಅಡವಿಟ್ಟುಕೊಂಡು ಕೊಟ್ಟಿದ್ದಾರೆ. ಇಲಾಖೆ ಅಧಿಕಾರಿಗಳು ಹೋದರೆ, ತಿನ್ನುವ ತಟ್ಟೆ ಕೂಡ ಬಿಡುವುದಿಲ್ಲ. ಆದುದರಿಂದ ಸರ್ಕಾರದವರು ಕೂಡಲೇ ಒಂದು ಸುತ್ತೋಲೆ ಕೊಟ್ಟು, ರೈತನಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸುವ ವ್ಯವಸ್ಥೆ ಮಾಡಿ, ಅವನು ಬದುಕುವುದಕ್ಕೆ ಇವತ್ತು ಆಗುತ್ತಿಲ್ಲ. ಈಗಲೂ ಕೂಡ ಲ್ಯಾಂಡ್ ರೆವಿನ್ಯೂವನ್ನು ಬಲತ್ಕಾರ ಮಾಡಿ ವಸೂಲ್ಮಾಡುತ್ತಿದ್ದಾರೆ. ಯಾವುದಕ್ಕಾದರೂ ಕೂಡ ಇಂದಿರಾ ವಿಕಾಸ ಪತ್ರ, ಎನ್.ಎಸ್.ಸಿ. ತೆಗೆದು ಕೊಳ್ಳಬೇಕು ಎಂದು ಹೇಳುತ್ತಿದ್ದಾರೆ.

ನಮ್ಮ ಸ್ನೇಹಿತರಾದ ವೀರಣ್ಣನವರು ಈ ಇಂದಿರಾ ವಿಕಾಸ ಪತ್ರವನ್ನು ಇಂಟ್ರಡ್ಯೂಸ್ ಮಾಡಿದರು. ಈ ಇಂದಿರಾ ವಿಕಾಸ ಪತ್ರದಲ್ಲಿ ನಮಗೆ ೬೫ ಪರ್ಸೆಂಟ್ ಲೋನ್ ಬರುತ್ತದೆ ಎಂದು ಕಾಣುತ್ತದೆ. ಪುನಃ ೫ ವರ್ಷ ಆದಮೇಲೆ ನಾವು ಅವರಿಗೆ ವಾಪಸ್ ಕೊಡಬೇಕು, ಡಬ್ಬಲ್ ಕೊಡಬೇಕು ಎಂದು ಕಾಣುತ್ತದೆ. ಅದರ ಹಾವಳಿ ಎಷ್ಟಾಗಿದೆ ಎಂದರೆ ನಂಬುವುದಕೆ ಕೂಡಾ ಆಗುವುದಿಲ್ಲ. ಒಂದು ಪಹಣಿ ಬೇಕೆಂದು ಹೋದರೆ ೨೫ ರೂಪಾಯಿನ ಎನ್.ಎಸ್.ಸಿ, ತೆಗೆದುಕೊಳ ಬೇಕು. ಒಂದು ಹತ್ತು ಚೀಲ ಸಿಮೆಂಟ್ ಬೇಕು ಎಂದರೆ ೨೦೦ ರೂಪಾಯಿನ ಇಂದಿರಾ ವಿಕಾಸ ಪತ್ರ ತಗೋ ಎಂದು ಹೇಳುತ್ತಾರೆ. ಯಾವುದಕ್ಕೂ ಇವುಗಳು ಇಲ್ಲದೇ ಇಲ್ಲವೇ ಇಲ್ಲ. ಲಂಚ ಕೊಡುವುದು ಇದ್ದೇ ಇರುತ್ತದೆ, ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಲಂಚ ಅಲ್ಲದೆ ಇದನ್ನು ಬೇರೆ ಹಾಕಿದ್ದಾರೆ. ಇದನ್ನು ಒಂದು ಸಿಸ್ಟಮ್ ಮಾಡಿದ್ದಾರೆ. ಇದರ ಹಾವಳಿ ವಿಪರೀತವಾಗಿದೆ. ತಹಸೀಲ್ದಾರರು, ವಿಲೇಜ್ ಅಕೌಂಟೆಂಟ್‌ಗಳು, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳೂ ಇವರೆಲ್ಲರೂ ಇದಕ್ಕಾಗಿ ಸುತ್ತಾಡುವುದೇ ಆಗಿದೆ. ಪ್ರತಿಯೊಬ್ಬ ಆಫೀಸರ್ ಸಹ ಊರೂರು ಸುತ್ತುತ್ತಿರುತ್ತಾರೆ. ಇವನು ಹೋಗಿ ಎಲ್ಲರ ಹತ್ತಿರ ಇದಕ್ಕಾಗಿ ಹಲ್ಲು ಗಿಂಜುಕೊಂಡು ನಿಂತುಕೊಳ್ಳುವುದು, ಇದರಿಂದ ಅವನಿಗಿರುವ ಅಧಿಕಾರ ದರ್ಪ ಕೂಡ ಹೋಗುವುದಕ್ಕೆ ಕಾರಣವಾಗುತ್ತದೆ, ಅವನು ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಕಡೆ ಇವರು ಹೋರ್ಡರ್ಸ್ ಮೇಲೆ ರೈಡ್ ಮಾಡುತ್ತಿದ್ದಾರೆ. ಈ ರೀತಿ ರೈಡ್ ಮಾಡುವುದು, ರೈಡ್ ಮಾಡಿದಮೇಲೆ ಹತ್ತು ಸಾವಿರ ರೂಪಾಯಿನ ಇಂದಿರಾ ವಿಕಾಸ ಪತ್ರ ತೆಗೆದುಕೋ ನಿನ್ನನ್ನು ಬಿಟ್ಟು ಬಿಡುತ್ತೇವೆ, ಎಲ್ಲಾ ರಿಲೀಸ್ ಮಾಡುತ್ತೇವೆ, ಕೇಸ್ ಕೂಡಾ ಹಾಕುವುದಿಲ್ಲ ಎಂದು ಹೇಳುವ ಮಟ್ಟಕ್ಕೆ ಇದು ಹೋಗಿದೆ ಇದು ಒಂದು ರೀತಿ ಕೊಹೆರ್ಷನ್ ಟೈಪ್ ಆಗಿದೆ. ಇಂತಹ ಕಾಲದಲ್ಲಿ ಇಂದಿರಾ ವಿಕಾಸ ಪತ್ರದ ಹಾವಳಿಯನ್ನು ತಪ್ಪಿಸಬೇಕು. ಜೊತೆಗೆ ಇಂತಹ ಬರ ಬಂದಿರುವ ಕಾಲದಲ್ಲಿ, ದುರಾದೃಷ್ಟವಶಾತ್ ನಮ್ಮಲ್ಲಿ ಒಂದು ಫ್ಯಾಮೈನ್ ಕೋಡ್ ಎನ್ನುವುದು ಇಲ್ಲ. ಇನ್ನೂ ಕೂಡಾ ಇದನ್ನು ಮಾಡಿಲ್ಲ ಎಂದು ಕಾಣುತ್ತದೆ. ಇದರ ಬಗ್ಗೆ ಮಾನ್ಯ ಬೊಮ್ಮಾಯಿಯವರು ಹೇಳಬೇಕು. ಹೋದಸಾರಿ ಕೂಡಾ ಇದರ ಬಗ್ಗೆ ಡಿಸ್ಕಷನ್ ಆಯಿತು. ಸಾಧಾರಣವಾಗಿ ನಲವತ್ತು ವರ್ಷಗಳ ಹಿಂದೆ ಬ್ರಿಟಿಷರು ಒಂದು ಫ್ಯಾಮೈನ್ ಕೋಡ್ ಎಂದು ಮಾಡಿದ್ದರು ಎಂದು ಕಾಣುತ್ತದೆ. ಇಂದಿಗೂ ಅದನ್ನು ರಿವೈಸ್ ಮಾಡಿಲ್ಲ. ಫ್ಯಾಮೈನ್ ಕೋಡ್ ಜಾರಿಗೆ ಬಂದರೆ, ರೈತರಿಗೆ ನ್ಯಾಯ ಸಿಗುತ್ತದೆ. ಫ್ಯಾಮೈನ್ ಎಂಬ ವರ್ಡನ್ನೇ ಇವರು ಉಪಯೋಗಿಸುವುದಿಲ್ಲ. ಆ ವರ್ಡ್ ಉಪಯೋಗಿಸಿದರೆ ರೈತರಿಗೆ ಮ್ಯಾಂಡೇಟರಿಯಾಗಿ ಕೆಲವು ಅನುಕೂಲಗಳನ್ನು ಕೊಡಲೇ ಬೇಕಾಗುತ್ತದೆ. ಇವರು ಫ್ಯಾಮೈನ್ ಅಫೆಕ್ಟೆಡ್ ಏರಿಯಾ, ಡ್ರಾಟ್ ಅಫೆಕ್ಟೆಡ್ ಏರಿಯಾ ಎಂದು ಉಪಾಯವಾಗಿ ರೈತರಿಗೆ ಮೋಸ ಮಾಡುತ್ತಿದ್ದಾರೆ. ಇದು ತಪ್ಪಬೇಕು, ಈಗಲೂ ಕೂಡಾ ಈ ಒಂದು ಫ್ಯಾಮೈನ್ ಕೋಡ್ ಏತಕ್ಕೆ ಮಾಡಲಿಲ್ಲ ಎಂದು ಕೇಳುತ್ತಿದ್ದೇನೆ ಮಾನ್ಯ ಸಚಿವರೇ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂದು ಒಪ್ಪಿಕೊಳ್ಳುತ್ತಿದ್ದಾರೆ. ಬಹಳ ಗಂಭೀರ ಪರಿಸ್ಥಿತಿ ಇದೆ, ರೈತರಿಗೆ ಸ್ವಲ್ಪವಾದರೂ ಸಹಾಯ ಮಾಡುವುದು ನಮ್ಮ ಕರ್ತವ್ಯ ಇದೆ ಎಂದು ಒಪ್ಪಿಕೊಳ್ಳುತ್ತಾರೆ, ಆದರೆ ಅದಕ್ಕೆ ಕೈ ಹಾಕುವುದಿಲ್ಲ.

ಇನ್ನು ಫುಡ್ ಫಾರ್ ವರ್ಕ್ ಎಂದು ಕೊಡುತ್ತಿದ್ದಾರೆ. ಇದನ್ನು ನಿಜವಾಗಿಯೂ ಇನ್ನೂ ಜಾಸ್ತಿ ಮಾಡಬೇಕು. ಮಾನ್ಯ ಸಚಿವರಾದ ಬೊಮ್ಮಾಯಿಯವರು ಇದರ ಬಗ್ಗೆ ಸ್ವಲ್ಪ ಗಮನಿಸಬೇಕು. ಮಾನ್ಯ ದೇವೇಗೌಡರು ಸಹ ಗಮನಿಸಬೇಕು. ಫುಡ್ ಫಾರ್ ವರ್ಕ್‌ಗೆ ಎಂದು ನಾಲ್ಕೈದು ಲಾರಿ ಲೋಡ್ ತರುತ್ತಾರೆ, ಆದರೆ ಅದನ್ನು ಅಲ್ಲೇ ಗೋಡೌನ್‌ನಲ್ಲೇ ಮಾರುತ್ತಾರೆ. ಇಲ್ಲಿ ಬಂದು ಕೂಲಿಗಾರರಿಗೆ ಅಷ್ಟೋ ಇಷ್ಟೋ ಹಣ ಕೊಟ್ಟುಬಿಡುತ್ತಾರೆ. ೧೨ ರೂಪಾಯಿಗಳ ದಿನಗೂಲಿ ಮಾಡಿದ್ದೇವೆ ಎಂದು ಕಾಂಟ್ರಾಕ್ಟರ್‌ಗಳು ಹೇಳಿದ್ದಾರೆ, ಆದರೆ ಇನ್ನೂ ೫ ರೂ. ೨೫ ಪೈಸೆ ಕೊಡುತ್ತಿದ್ದಾರೆ. ಇವರು ಆಹಾರಧಾನ್ಯವನ್ನು ಅಲ್ಲೇ ಮಾರಿಬಿಡುತ್ತಾರೆ, ಬರೀ ದುಡ್ಡನ್ನು ಡಿಸ್ಟ್ರಿಬ್ಯೂಟ್ ಮಾಡಿಬಿಡುತ್ತಾರೆ. ವಿಲೇಜ್ ಅಕೌಂಟೆಂಟ್‌ಗಳು, ರೂರಲ್ ಡೆವಲಪ್‌ಮೆಂಟ್ ಅಸಿಸ್ಟೆಂಟ್ಸ್ ಇದನ್ನು ಮಾಡುತ್ತಾರೆ. ನಾನು ರಿಲೀಫ್ ಕಮಿಟಿ ಮೀಟಿಂಗ್‌ನಲ್ಲಿ ಇದರ ಬಗ್ಗೆ ಒಂದು ರೆಸಲ್ಯೂಷನ್ ಮಾಡಿಸಿದ್ದೇನೆ. ಅದು ಏನೆಂದರೆ, ಫುಡ್ ಫಾರ್ ವರ್ಕ್ ಪ್ರೋಗ್ರಾಂನಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಮುಂಚೆ, ಫುಡ್ ಗ್ರೈನ್ ಎಲ್ಲಾ ಆ ಊರಿಗೆ ಹೋಗಬೇಕು. ಆ ಊರಿನವರಿಗೆಲ್ಲಾ ಅದು ತಿಳಿಯಬೇಕು, ಇಂತಹ ಕೆಲಸಕ್ಕೆ ೧೦೦ ಬ್ಯಾಗ್ಸ್ ಆಹಾರಧಾನ್ಯ ಬಂದಿದೆ, ಇದನ್ನು ಇಂತಹ ಕೆಲಸಕ್ಕಾಗಿ ಡಿಸ್ಟ್ರಿಬ್ಯೂಟ್ ಮಾಡುತ್ತಾರೆ ಎಂದು ಪಬ್ಲಿಕ್‌ಗೆ ಗೊತ್ತಾಗಬೇಕು. ಆದರೆ ಪಬ್ಲಿಕ್‌ಗೆ ಹೇಳುವುದಿಲ್ಲ. ಇವರಿಗೆ ಎಂಟೂಕಾಲು ರೂಪಾಯಿಗಳ ಆಹಾರಧಾನ್ಯಕ್ಕೆ ಬದಲಾಗಿ ಐದು ರೂಪಾಯಿ ಕೊಟ್ಟು, ಫುಡ್‌ಗ್ರೈನ್ಸ್ ಎಲ್ಲಾ ಅಲ್ಲೇ ಮಾರಿಬಿಡುತ್ತಾರೆ. ಇದು ಇನ್ನೂ ನಡೆಯುತ್ತಿದೆ, ಇದರ ಬಗ್ಗೆ ಸ್ಟ್ರಿಕ್ಟ್ ಆಗಿ ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಫುಡ್ ಫಾರ್ ವರ್ಕ್ ಪ್ರೋಗ್ರಾಂ ತೆಗೆದುಕೊಂಡಾಗ, ಫುಡ್ ಆ ಜಾಗದಲ್ಲಿ ಇರಬೇಕು ಎಂದು, ಅದು ಅಲ್ಲಿನ ಜನಗಳಿಗೆಲ್ಲಾ ತಿಳಿಯಬೇಕು ಎಂದು, ಇನ್‌ಸ್ಟ್ರಕ್ಷನ್ಸ್ ಕೊಡಬೇಕು. ಇನ್ನು ರಿಲೀಫ್ ಕೆಲಸಗಳಲ್ಲಿ ಇನ್ನೊಂದು ಅನ್ಯಾಯ ಏನು ಎಂದರೆ, ಇದರಲ್ಲಿ ಲೋಕಲ್ ಪಬ್ಲಿಕ್ ಇನ್‌ವಾಲ್ವ್‌ಮೆಂಟೇ ಇಲ್ಲ. ರಿಲೀಫ್ ಕೆಲಸ ಶುರು ಮಾಡಿದ ದಿವಸ ಎಲ್ಲಿಂದಲೋ ಒಂದು ಗ್ಯಾಂಗ್ ಕರೆದುಕೊಂಡು ಬರುತ್ತಾರೆ, ಪೂರ್ತಿ ಕಂಟ್ರಾಕ್ಟ್ ಕೊಟ್ಟುಬಿಡುತ್ತಾರೆ, ಇದರಲ್ಲಿ ೫೦ ಪರ್ಸೆಂಟ್ ಮೋಸ ಇರುವುದಲ್ಲದೆ, ಲೋಕಲ್ ಪಬ್ಲಿಕ್‌ಗೆ ಕೆಲಸವೇ ಇಲ್ಲ. ಇದನ್ನು ತಪ್ಪಿಸಬೇಕು. ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಬೇಕು ಎನ್ನುವ ವಿಚಾರ ಕೂಡಾ ಇಲ್ಲದಂತಾಗಿದೆ. ರಿಲೀಫ್ ವರ್ಕ್‌ಗೆ ಎಷ್ಟು ಹಣ ಬೇಕಾದರೂ ಕೊಡುತ್ತೇವೆ ಎಂದು ಜನರಿಗೆ ಹೇಳುತ್ತಾರೆ. ಇಲ್ಲಿ ನಮ್ಮ ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಸಹ ಇದ್ದಾರೆ ಎಂದು ಕಾಣುತ್ತಿದೆ. ಒಂದೊಂದು ಮಂಡಲ್ ಪಂಚಾಯತಿಗೆ ಒಂದೊಂದು ಲಕ್ಷ ರೂಪಾಯಿಗಳಂತೆ ಇದಕ್ಕಾಗಿ ಕೊಟ್ಟಿದ್ದರು. ಆದರೆ ಈಗ ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಒಂದು ಲಕ್ಷ ರೂಪಾಯಿಗಳನ್ನು ೫೦ ಸಾವಿರ ರೂಪಾಯಿಗಳಿಗೆ ಇಳಿಸಿ, ರಿವೈಸ್ಡ್ ಎಸ್ಟಿಮೇಟ್ ಕಳುಹಿಸಿ ಎಂದು ತಿಳಿಸಿದ್ದಾರೆ. ಈ ಅನ್ಯಾಯ ಏತಕ್ಕೆ ? ಕೊಟ್ಟಿರುವುದೇ ಒಂದು ಮಂಡಲಕ್ಕೆ ಒಂದು ಲಕ್ಷ ರೂಪಾಯಿ, ಅದನ್ನು ೫೦ ಸಾವಿರಕ್ಕೆ ಇಳಿಸಿ ಎಂದು ಸರಕಾರದಿಂದ ಒಂದು ಸರ್ಕ್ಯುಲರ್ ಬಂದಿದೆ.

೫೦ ಸಾವಿರ ರೂಪಾಯಿಗಳು ಎಂದರೆ ಬಹಳ ಕಡಿಮೆಯಾಗುತ್ತದೆ. ಒಂದೊಂದು ಕೆಲಸ ಮಾಡಬೇಕಾದರೆ ೧೦ ಸಾವಿರ ರೂಪಾಯಿಗಳು ಬೇಕಾಗುತ್ತವೆ. ಒಂದು ಮಂಡಲಕ್ಕೆ ಸುಮಾರು ೩೦ ಹಳ್ಳಿಗಳು ಒಳಪಡುತ್ತವೆ. ೩೦ ಹಳ್ಳಿಗಳ ಪೈಕಿ ೫ ಹಳ್ಳಿಗಳಿಗೆ ತಲಾ ೧೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ೫೦ ಸಾವಿರ ರೂಪಾಯಿಗಳು ಆಗಿ ಹೋಗುತ್ತದೆ. ಈ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಯವರು ಗಮನಿಸಿ ಈಗಲಾದರೂ ಅದನ್ನು ಜಾಸ್ತಿ ಮಾಡಬೇಕು. ಮಾನ್ಯ ಬೊಮ್ಮಾಯಿಯವರಿಗೂ ಈ ವಿಷಯ ಗೊತ್ತಿದೆಯೋ ಇಲ್ಲವೋ ? ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ೫೦ ಸಾವಿರ ರೂಪಾಯಿಗಳಿಗೆ ಏತಕ್ಕೆ ಇಳಿಸಬೇಕಾಗಿತ್ತು. ಒಂದೊಂದು ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಕಳುಹಿಸಿ ಎಂದು ಮಂಡಲ ಪಂಚಾಯಿತಿಗಳಿಗೆ ಸೂಚನೆ ಕಳುಹಿಸಿಕೊಟ್ಟಮೇಲೆ ಅವರು ಎಸ್ಟಿಮೇಟ್ ಮಾಡಿ ಕಳುಹಿಸಿದ್ದಾರೆ. ರೈತರುಗಳ ಬಗ್ಗೆ ಏಕಿಷ್ಟು ಅನ್ಯಾಯ ಮಾಡುತ್ತಿದ್ದೀರೆಂದು ನಾನು ಕೇಳಬೇಕಾಗುತ್ತದೆ. ಒಂದು ಲಕ್ಷದ ಬದಲು ಅವರು ಎರಡು ಲಕ್ಷ ಕೊಡಬೇಕೆಂದು ಕೇಳಿದ್ದಿದ್ದರೆ ಅದರ ಬಗ್ಗೆ ರಿವ್ಯೂ ಮಾಡಬಹುದಾಗಿತ್ತು. ಆಮೇಲೆ ರಿಲೀಫ್ ಕೆಲಸಗಳನ್ನು ಮಾಡಿಸುವಾಗ ಸಂಬಂಧಪಟ್ಟ ಅಧಿಕಾರಿಗಳು ಆಯಾ ಹಳ್ಳಿಗಳಿಗೆ ಹೋಗಿ, ನಿಮ್ಮ ಊರಿಗೆ ೧೦ ಸಾವಿರ ರೂಪಾಯಿಗಳ ಕೆಲಸವನ್ನು ಮಂಡಿಸುತ್ತಿದ್ದೇವೆ, ನೀವೆಲ್ಲರೂ ಸೇರಿ ಎಕ್ಸಿಕ್ಯೂಟ್ ಮಾಡಿ ಎಂದು ಹೇಳಿದರೆ ಪ್ರಯೋಜನವಾಗುತ್ತದೆ. ಆಮೇಲೆ, ಕೇಂದ್ರ ಸರ್ಕಾರದವರು ರಾಷ್ಟ್ರದ ಇತರೆ ಕೆಲವು ರಾಜ್ಯಗಳಿಗೆ ಒಟ್ಟು ೫ಳ

ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟಿದೆ. ನಾನ್ ಕಾಂಗ್ರೆಸ್ ಗೌರ್ನಮೆಂಟ್ ಇರುವ ಕರ್ನಾಟಕ, ಆಂಧ್ರ ರಾಜ್ಯಗಳಿಗೆ ಯಾವುದೇ ರೀತಿಯ ಸಹಾಯವನ್ನು ಮಾಡಿಲ್ಲ. ಇದನ್ನು ನೋಡಿದರೆ ಕೇಂದ್ರ ಸರ್ಕಾರದವರೂ ಸಹ ಮಲತಾಯಿ ಧೋರಣೆಯನ್ನು ಮಾಡುತ್ತಿದ್ದಾರೆಂದು ಕಾಣುತ್ತದೆ. ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ರಿಪೋರ್ಟ್‌ನಲ್ಲಿ ಇನ್ನು ಒಂದು ತಿಂಗಳು ಮಳೆ ಬಾರದೇ ಇದ್ದರೆ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗುತ್ತದೆಂದು ತಿಳಿಸಿದ್ದಾರೆ. ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಒಂದು ಪೈಸೆಯಷ್ಟು ಹಣವನ್ನೂ ಕೊಟ್ಟಿಲ್ಲ. ಬೇರೆ ರಾಜ್ಯಗಳಿಗೆ ಸಹಾಯ ಧನ ನೀಡಿ ಕರ್ನಾಟಕಕ್ಕೆ ಸಹಾಯ ಧನವನ್ನು ನೀಡದೇ ಇರುವುದು ಅನ್ಯಾಯವೆಂದು ಪ್ರೊಟೆಸ್ಟ್ ಮಾಡಬೇಕು. ಕರ್ನಾಟಕಕ್ಕೆ ಎಷ್ಟು ಷೇರ್ ಬರಬೇಕೋ ಅಷ್ಟನ್ನು ಬರುವ ಹಾಗೆ ಮಾಡಬೇಕು. ಸೆಂಟ್ರಲ್ ಗೌರ್ನಮೆಂಟ್‌ನವರು ಕರ್ನಾಟಕ ರಾಜ್ಯಕ್ಕೆ ಬಂದು ಬರಗಾಲದ ಬಗ್ಗೆ ಸಮೀಕ್ಷೆ ಮಾಡಿಕೊಂಡು ಹೋಗಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಸೆಂಟ್ರಲ್ ಗೌರ್ನಮೆಂಟ್ ಟೀಮ್‌ನವರು ಬಂದು ಎಲ್ಲಾ ನೋಡಿಕೊಂಡು ಹೋಗಿ ಅವರು ಹಣ ಬಿಡುಗಡೆ ಮಾಡುವ ಹೊತ್ತಿಗೆ ಮೂರು ತಿಂಗಳು ಆಗಿ ಹೋಗುತ್ತದೆ. ಮೂರು ತಿಂಗಳಾದ ಮೇಲೆ ಕೇಂದ್ರ ಸರ್ಕಾರದವರು ಹಣ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಕಷ್ಟ ಕಾಲದಲ್ಲಿ ಹಣ ಬಂದರೆ ಪ್ರಯೋಜನವಾಗುತ್ತದೆ. ನಮ್ಮ ಮಾನ್ಯ ಬೊಮ್ಮಾಯಿಯವರು ಯಾವ ಮಾತಿಗೂ ಸಿಕ್ಕಿಕೊಳ್ಳುವುದಿಲ್ಲ, ಎಲ್ಲದರಿಂದಲೂ ನುಣುಚಿಕೊಳ್ಳುವಂಥ ಸ್ವಭಾವ ಅವರದು. ಕೇಂದ್ರ ಸರ್ಕಾರದವರು ಹಣ ಕೊಟ್ಟಿಲ್ಲ, ಕೇಂದ್ರ ಸರ್ಕಾರದವರು ಹಣ ಕೊಟ್ಟಿಲ್ಲವೆಂದು ಬರಗಾಲದ ಸಮಯದಲ್ಲಿ ಹೇಳುತ್ತಿರುತ್ತಾರೆ. ಕೇಂದ್ರ ಸರ್ಕಾರದವರು ಎಲ್ಲಾ ನೋಡಿಕೊಂಡು ಹೋಗುವ ಹೊತ್ತಿಗೆ ಮಳೆಗಾಲ ಪ್ರಾರಂಭವಾಗುತ್ತದೆ. ಇನ್ನು ಮಳೆ ಬಿದ್ದಿರುವುದರಿಂದ ಪರವಾಗಿಲ್ಲವೆಂದು ಸುಮ್ಮನೆ ಆಗುತ್ತಾರೆ. ಬರಗಾಲದಿಂದ ನಮ್ಮ ರಾಜ್ಯದ ಜನ ಜೀವನ ಬಹಳ ಅವ್ಯವಸ್ಥೆಗೆ ಗುರಿಯಾಗಿದೆ. ಜನಗಳು ಎಷ್ಟೇ ಕಷ್ಟ ಬಂದರೂ ನಮ್ಮ ಮೇಲೆ ಬೀಳುವುದಿಲ್ಲವೆಂದು ತಿಳಿದುಕೊಂಡು ಅವರ ಒಳ್ಳೆಯ ತನವನ್ನು ದುರುಪಯೋಗಪಡಿಸಿಕೊಂಡು ಶೋಷಣೆ ಮಾಡುವುದು ಬೇಡ. ಬರದ ಬಗ್ಗೆ ಸೀರಿಯಸ್ ಆಗಿ ವಿಚಾರ ಮಾಡಿ ಒಂದೊಂದು ಮಂಡಲಕ್ಕೂ ಮತ್ತು ಒಂದೊಂದು ಹಳ್ಳಿಗೂ ಸರ್ಕಾರ ಕೊಡುವ ಪರಿಹಾರ ಸಿಗುವಂತೆ ಮಾಡಬೇಕು. ಒಂದೊಂದು ಮಂಡಲಕ್ಕೆ ಮೂರು ನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಪರಿಹಾರವನ್ನು ಎಲ್ಲರಿಗೂ ತಲುಪಿಸಬಹುದು. ನೀವು ೫೦ ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದು ಅನ್ಯಾಯವೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಭೀಕರ ಬರಗಾಲದ ಬಗ್ಗೆ ಮಾನ್ಯ ಕಂದಾಯ ಸಚಿವರು ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಕಳೆದ ೪ ವರ್ಷಗಳಿಂದ ಭೀಕರ ಬರಗಾಲವು ಈ ರಾಜ್ಯದಲ್ಲಿ ಕಾಡುತ್ತಿದೆ. ಈ ವರ್ಷವಂತೂ ಹಿಂದೆಂದೂ ಕಾಣದಂಥ ಭೀಕರ ಬರಗಾಲವನ್ನು ನಾವು ಕಾಣುತ್ತಿದ್ದೇವೆ, ಇದರ ಪರಿಣಾಮ ಸರ್ಕಾರದ ಬೊಕ್ಕಸದ ಮೇಲೂ ಆಗಿದೆ ಎನ್ನುವ ಮಾತನ್ನು ಪದೇ ಪದೇ ಸನ್ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಿರುತ್ತಾರೆ. ಈ ವರದಿಯಲ್ಲಿ ಸರಿಯಾದ ರೀತಿಯಲ್ಲಿಯೇ ಅಂಕಿ ಅಂಶಗಳು ಇವೆ. ಕೇಂದ್ರ ಸರ್ಕಾರಕ್ಕೆ ತಾವು ವರದಿ ಏನು ಕೊಟ್ಟಿದ್ದೀರೋ ಅದನ್ನು ಇನ್ನೂ ಮುಂಚೆಯೇ ನಮಗೆಲ್ಲಾ ತಿಳಿಸಿದ್ದಿದ್ದರೆ ನಮ್ಮ ಕೆಲವು ಅನುಭವಗಳನ್ನು ಮತ್ತು ಸಲಹೆಗಳನ್ನು ಕೊಡಬಹುದಾಗಿತ್ತು, ಇವತ್ತು ಕೊಟ್ಟಿದ್ದೀರಿ.

೪-೦೦ ಪಿ.ಎಂ.

ಶಾಸಕರಾಗಿ ನಮ್ಮ ಅನುಭವಗಳನ್ನು, ಸಲಹೆಗಳನ್ನು ನಾವು ಕೊಡಬಹುದಾಗಿತ್ತು. ಇವೊತ್ತು ತಾವುಗಳು ವರದಿಯನ್ನು ನಮಗೆ ಕೊಟ್ಟಿದ್ದೀರಿ. ಇವೊತ್ತೇ ಚರ್ಚೆ ಪ್ರಾರಂಭವಾಗಿದೆ. ಬಹುಶಃ ಇಂತಹ ವಿಷಯಗಳ ಬಗ್ಗೆ ಕೊಡುವಂತಹ ವರದಿಯನ್ನು ನಮಗೆ ಮೊದಲೇ ಕೊಟ್ಟಲ್ಲಿ ವಿಷಯಗಳ ಮೇಲೆ ಇನ್ನೂ ಹೆಚ್ಚು ಮಹತ್ವಪೂರ್ಣವಾದಂತಹ ಚರ್ಚೆ ನಡೆಸಲು ಅನುಕೂಲವಾಗುತ್ತದೆ. ಆ ಕಾರಣಕ್ಕಾಗಿ ತಾವುಗಳು ಹಾಗೆ ಇನ್ನು ಮುಂದಾದರೂ ಅವಕಾಶವನ್ನು ಮಾಡಿಕೊಡುತ್ತೀರಿ ಎಂದು ನಾನು ನಂಬಿದ್ದೇನೆ.

ಅಧ್ಯಕ್ಷರೇ, ಈ ವರದಿಯಲ್ಲಿ 'ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬಂದ ಸತತವಾದ ಬರಗಾಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಬೇಕಾದ ಕ್ರಮಗಳ ಸಮೀಕ್ಷೆ ಮಾಡಿ, ತತ್ಸಂಬಂಧವಾಗಿ ತೆಗೆದುಕೊಳ್ಳ ಬೇಕಾದ ಕ್ರಮಗಳ ಬಗ್ಗೆ ವಿಮರ್ಶಿಸಿ, ನಿರ್ದೇಶನ ನೀಡಲು, ಒಂದು ಸಚಿವ ಸಂಪುಟದ ಉಪ ಸಮಿತಿಯನ್ನು ನೇಮಿಸಲಾಗಿದ್ದು ಅದು ಕಳೆದ ನಾಲ್ಕು ವರ್ಷಗಳಿಂದ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದ್ದು, ಅಭಾವ ಪರಿಹಾರ ಕ್ರಮಗಳ ಉಸ್ತುವಾರಿಕೆಯನ್ನು ನೋಡಿಕೊಳ್ಳುವ ಬಗ್ಗೆ ಒಳ್ಳೆಯ ಅನುಭವ ಹೊಂದಿರುವ ಸಚಿವರನ್ನು ಹೊಂದಿದೆ. ಈ ಸಮಿತಿಯು ಕಂದಾಯ ಹಾಗೂ ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಆರೋಗ್ಯ ಸಚಿವರು, ಕೃಷಿ ಸಚಿವರು, ಹಾಗೂ ಸಹಕಾರಿ ಸಚಿವರನ್ನು ಸದಸ್ಯರನ್ನಾಗಿ ಹೊಂದಿದೆ.'' ಎಂದು ಮುಂತಾಗಿ ತಿಳಿಸಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕೇಳುವುದೇನೆಂದರೆ, ಈ ಸಮಿತಿಯವರು ಬರಗಾಲದ ಬಗ್ಗೆ ವರದಿಯನ್ನು ಕೊಡುತ್ತಾರೆ. ಮಾನ್ಯ ಕಂದಾಯ ಸಚಿವರು ಒಂದು ಹೇಳಿಕೆಯನ್ನು ಈ ಬಗ್ಗೆ ಹುಬ್ಬಳ್ಳಿಯಲ್ಲಿ ಕೊಟ್ಟಿದ್ದಾರೆ. ಆ ಹೇಳಿಕೆಯಲ್ಲಿ ಇನ್ನೊಂದು ವಾರದಲ್ಲಿ ರಾಜ್ಯದಲ್ಲಿ ಮಳೆ ಆಗದಿದ್ದರೆ ಭೀಕರ ಬರಗಾಲವನ್ನು ರಾಜ್ಯ ಎದುರಿಸಬೇಕಾಗುತ್ತದೆ, ಆ ದಿಸೆಯಲ್ಲಿ ಅದಕ್ಕೆ ಬೇಕಾದ ಕಾರ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಮಳೆ ಆಗಿಲ್ಲ. ಅಲ್ಪಸ್ವಲ್ಪ ಮಳೆ, ಅಲ್ಲಲ್ಲಿ ಆಗಿರಬಹುದು. ಈ ಸಚಿವ ಸಮಿತಿಯನ್ನು ತಾವು ಏನು ಮಾಡಿದ್ದೀರಿ ಅದು ಇವೊತ್ತಿನವರೆಗೂ ಈ ಬರಗಾಲ ಪರಿಸ್ಥಿತಿಯನ್ನು ವೀಕ್ಷಿಸಿ, ತನ್ನ ವರದಿಯನ್ನು ಕೊಟ್ಟಿರಬಹುದು. ಆದರೆ ಇಂತಹ ಸಮೀಕ್ಷೆಗಾಗಿ ಸಮಿತಿಗಳನ್ನು ರಚನೆ ಮಾಡಿದ ತತ್‌ಕ್ಷಣ ರಾಜ್ಯಕ್ಕೆ ಬಂದ ಬರಗಾಲದ ಸಮಸ್ಯೆ ಪರಿಹಾರವಾಗುವುದಿಲ್ಲ. ಇಲ್ಲಿರುವಂತಹ ಮಂತ್ರಿಮಂಡಳದ ಮಾನ್ಯ ಮಿತ್ರರು ಬೆಂಗಳೂರಿನಲ್ಲಿ ಕುಳಿತುಕೊಳ್ಳದೇ ರಾಜ್ಯದಲ್ಲೆಲ್ಲಾ ಪ್ರವಾಸ ಮಾಡಿ, ಜನರ ಸಂಕಷ್ಟಗಳನ್ನು, ಅವರಿಗೆ ಇರುವ ತೊಂದರೆಗಳನ್ನು ನೋಡಿ ತಿಳಿದುಕೊಳ್ಳಬೇಕಾಗುತ್ತದೆ. ಮತ್ತು ಜನರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯಬೇಕಾಗುತ್ತದೆ, ಕೇವಲ ಸಮಿತಿಯನ್ನು ರಚಿಸುವುದರಿಂದ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡಂತಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಿತಿಯಲ್ಲಿದ್ದಂತಹ ನಾಲ್ಕು ಜನ ಸದಸ್ಯರು ರಾಜ್ಯದ ಎಲ್ಲಾ ಕಡೆಗಳಲ್ಲಿ ಪ್ರವಾಸವನ್ನು ಮಾಡಿದ್ದಾರೆ. ಅವರುಗಳು ಮಾಡಿದ ಪ್ರವಾಸದ ವಿವರಗಳನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಕೃಷಿ ಸಚಿವರು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ನಾನು, ಮತ್ತು ಸಹಕಾರಿ ಸಚಿವರು ಎಲ್ಲರೂ ಪ್ರವಾಸ ಮಾಡಿ ವಿಚಾರಗಳನ್ನು ಕಂಡು ಬಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವುಗಳು ನಾವು ನೋಡಿದ ಪ್ರಕಾರ ಹುಬ್ಬಳ್ಳಿ ಮತ್ತು ಧಾರವಾಡ ನಗರಗಳನ್ನು ಬಿಟ್ಟರೆ, ಬೇರೆ ಕಡೆಗಳಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದನ್ನು ನೋಡಿಲ್ಲ. ಬಹುಶಃ ಬೆಂಗಳೂರು ಕ್ಯಾಪಿಟಲ್ ಆದ ಮೇಲೆ ಹುಬ್ಬಳ್ಳಿಯನ್ನು ಎರಡನೇ ಮುಖ್ಯ ಸ್ಥಳ ಎಂದು ಬೊಮ್ಮಾಯಿಯವರು ಭಾವಿಸಿಕೊಂಡಿರಬೇಕು. ತಾವುಗಳು ಮಹಾರಾಷ್ಟ್ರದಲ್ಲಿ ವಿಧಾನ ಸಭೆಯ ಅಧಿವೇಶನವನ್ನು ನಾಗಪುರದಲ್ಲಿ ಮಾಡುತ್ತಿರುವಂತೆ, ನಮ್ಮ ರಾಜ್ಯದಲ್ಲಿ ಹುಬ್ಬಳ್ಳಿಯಲ್ಲಿಯೂ ಮಾಡಲು ಯೋಚಿಸುತ್ತಿದ್ದೀರಾ ? ಸ್ಟೇಟ್‌ಮೆಂಟ್‌ಗಳನ್ನು ಎಲ್ಲಾ ಕಡೆಗಳಿಂದಲೂ ತಾವುಗಳು ಏಕೆ ಕೊಡುತ್ತಿಲ್ಲ?

ಅಧ್ಯಕ್ಷರು.—ತಮ್ಮ ಗುಲ್ಬರ್ಗಕ್ಕೂ ಬರುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಎಲ್ಲಾ ವಿಭಾಗಗಳಲ್ಲಿಯೂ ಮೀಟಿಂಗ್ ಮಾಡಿದ್ದೇವೆ. ಹುಬ್ಬಳ್ಳಿ, ಧಾರವಾಡದಲ್ಲಿ ಮಾತ್ರವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೇರವಾಗಿ ಈ ಮಾತನ್ನು ನಾನು ಹೇಳುವ ಉದ್ದೇಶ ಏನೆಂದರೆ, ಬರಗಾಲವನ್ನು ಎದುರಿಸುವಂತಹ ಯಾವುದೇ ಒಂದು ಕಳಕಳಿ ಈ ಸರಕಾರಕ್ಕೆ ಇಲ್ಲ. ಇವರು ಪರಸ್ಪರರ ಬಡಿದಾಟದಲ್ಲಿ ತಮ್ಮ ಕಾಲವನ್ನು ಕಳೆಯುತ್ತಾ ಇದ್ದಾರೆ. ಯಾರು ಪ್ರಾಮಾಣಿಕವಾದಂತಹ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಸಚಿವರು ಇದ್ದಾರೆ, ಅವರ ಕಾಲು ಎಳೆಯುವಂತಹ ಪ್ರಯತ್ನ ನಡೆಯುತ್ತಾ ಇದೆ. ಅದಕ್ಕೆ ಉದಾಹರಣೆಗಳನ್ನು ನಾನು ಬೇರೆ ಸಂದರ್ಭದಲ್ಲಿ ಕೊಡುತ್ತೇನೆ.

ತಾವುಗಳು ಹೇಳುವ ಪ್ರಕಾರದಲ್ಲಿ ರಾಜ್ಯದಲ್ಲಿನ ೧೭೫ ತಾಲ್ಲೂಕುಗಳಲ್ಲಿ ಬರಗಾಲ ಇದೆ. ೧೮ ಜಿಲ್ಲೆಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇದೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಎಂದೂ ಕಾಣದಂತಹ ಭೀಕರ ಬರಗಾಲ ಬಂದಿದೆ. ಅದನ್ನು ಪ್ರತ್ಯಕ್ಷವಾಗಿ ನಾನು ನೋಡಿದ್ದೇನೆ. ನಾನು ಶಿಕಾರಿಪುರ ತಾಲ್ಲೂಕಿನ ೬೦ ಗ್ರಾಮಗಳಿಗೆ ಪ್ರವಾಸ ಮಾಡಿ ನೋಡಿದ್ದೇನೆ. ಅಲ್ಲಿನ ಜಿಲ್ಲಾ ಪರಿಷತ್ ಮತ್ತು ಮಂಡಳ ಪಂಚಾಯತ್‌ನ ಸದಸ್ಯರನ್ನು ಜೊತೆಗೂಡಿ ಆ ಗ್ರಾಮಗಳನ್ನು ಕಂಡುಕೊಂಡು ಬಂದಿದ್ದೇನೆ. ಶಿಕಾರಿಪುರ ತಾಲ್ಲೂಕಿನಲ್ಲಿ ಸುಮಾರು ೪-೫ ಸಾವಿರ ಜನರು ಹೊಟ್ಟೆಪಾಡಿಗಾಗಿ ತಮ್ಮ ಊರುಗಳನ್ನು ಬಿಟ್ಟು, ಮಂಗಳೂರು ಮೂಡಬಿದರೆ, ಮುಂತಾದ ಕಡೆಗಳಿಗೆ ಹೊರಟುಹೋಗಿದ್ದಾರೆ. ಅವರಿಗೆ ತಮ್ಮ ಊರಿನಲ್ಲಿ ಕೂಲಿ ಕೂಡ ಸಿಗದೆ ತಮ್ಮ ಊರನ್ನು ಬಿಡಬೇಕಾದ ಪರಿಸ್ಥಿತಿಯು ಒದಗಿ ಬಂದಿದೆ. ಕೂಲಿ ಇಲ್ಲದೇ ಅದನ್ನು ಅವಲಂಬಿಸಿರತಕ್ಕಂಥ ಜನ ಕಂಗಾಲಾಗಿದ್ದಾರೆ. ಯಾವ ಒಬ್ಬ ರೈತ ತಾನು ತನ್ನ ದುಡಿಮೆಯೊಂದಿಗೆ ಇನ್ನೂ ಹತ್ತಾರು ಜನರಿಗೆ ಕೆಲಸ ಒದಗಿಸುತ್ತಿದ್ದನೋ, ಅಂತಹವನು ಕೂಡ ಊರು ಬಿಟ್ಟು ಹೋಗುವ ಹಂತದಲ್ಲಿದ್ದಾನೆ. ಬೆಳೆ ಸುಟ್ಟು ಹೋಗಿದೆ. ಅಂತೆಯೇ ಎಲ್ಲೆಲ್ಲಿ ಅಲ್ಪಸ್ವಲ್ಪ ಮಳೆ ಆಗಿದೆ, ಅಲ್ಲಿ ಬೀಜ ಹಾಕಲು ಕೂಡ ಬೀಜ ಇಲ್ಲದ ಪರಿಸ್ಥಿತಿ ಇದೆ.

ಪುಕ್ಕಟೆಯಾಗಿ ಕೈಲಾಗದ ರೈತನಿಗೆ ಒಂದೈದು ಕೆಜಿ ಅಕ್ಕಿ, ಒಂದೈದು ಕೆಜಿ ಬೀಜವನ್ನೋ ಕೊಟ್ಟಿರುವ ಉದಾಹರಣೆ ಕೊಡುತ್ತೀರಾ ಸ್ವಾಮಿ ರಾಜ್ಯ ಸರ್ಕಾರ ಎಂದರೆ ಕೇಂದ್ರಕ್ಕೆ ಅಪ್ಲಿಕೇಷನ್ ಹಾಕಿಕೊಂಡು, ಇಲ್ಲಿ ದುಡ್ಡು ಬರಲಿಲ್ಲವೆಂದು ಮಾತಾಡುತ್ತಾ ತಿರುಗುವುದೋ ಅಥವಾ ಹಣಕಾಸನ್ನು ಹೊಂಚಿಕೊಂಡು ಕಷ್ಟದಲ್ಲಿರುವವರಿಗೆ ಬಿಡುಗಡೆ ಮಾಡುವುದೋ ? ತಾವು ೨೪ನೇ ಆಗಸ್ಟ್ ೮೭ರ ಸೋಮವಾರ ಹುಬ್ಬಳಿಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟು ಮತ್ತೆ ೮ ಕೋಟಿಯನ್ನು ಬರ ಪರಿಹಾರಕ್ಕಾಗಿ ಬಿಡುಗಡೆ ಮಾಡಲಾಗಿದೆ ಎಂದಿದ್ದೀರಿ. ಆ ದುಡ್ಡು ಹಿಂದಿನ ೭ ಕೋಟಿಗೆ ಸೇರಿದರೆ ೧೫ ಕೋಟಿ ಆಗುತ್ತದೆ. ಇಷ್ಟು ದುಡ್ಡನ್ನು ಯಾರ್ಯಾರಿಗೆ ಯಾವ್ಯಾವ ಯೋಜನೆಗೆ ಕೊಟ್ಟಿದ್ದೀರಿ, ಲೆಕ್ಕ ಇದೆಯೇ ? ಇಲ್ಲ. ನಾನು ೬೦ ಹಳ್ಳಿಗಳಿಗೆ ಪ್ರವಾಸ ಮಾಡಿದ ಸಂದರ್ಭದಲ್ಲಿ ೨೬-೮-೧೯೮೭ ರಂದು ಕೊಳಲಿ ಎಂಬ ಶಿಕಾರಿಪುರ ತಾಲ್ಲೂಕಿನ ಒಂದು ಹಳ್ಳಿಗೆ ಹೋಗಿದ್ದೆ. ಅಲ್ಲಿ ದಿನನಿತ್ಯ ೨೦೦ ಜನ ಕೆಲಸ ಮಾಡುತ್ತಿದ್ದಾರೆ. ಅಲ್ಲಿಗೆ ಸಣ್ಣ ಕೆಲಸ ಅಂತ ನಿಮ್ಮ ಸರ್ಕಾರ ಏಳೆಂಟು ಸಾವಿರ ಮಾತ್ರ ಬಿಡುಗಡೆ ಮಾಡಿದೆ. ಗೌರಿ ಹಬ್ಬದ ಹಿಂದಿನ ದಿವಸ ಅಲ್ಲಿಗೆ ಹೋಗಿದ್ದೆ. ಅಲ್ಲಿದ್ದ ನಿಮ್ಮ ಜಿಲ್ಲಾ ಪರಿಷತ್ ಮುಖ್ಯಸ್ಥರು, ಎಕ್ಸಿಕ್ಯುಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಬಂದು ನಾಳೆಯಿಂದ ಕೆಲಸ ನಿಲ್ಲಿಸುತ್ತೇವೆ. ಕಾರಣವೆಂದರೆ ದುಡ್ಡು ಕೊಟ್ಟಿದ್ದುದು ಮುಗಿದು ಹೋಯ್ತು ಎಂದರು. ನಾವು ವಿಧಾನಸೌಧದಲ್ಲಿ ಕುಳಿತುಕೊಂಡು ಅಧಿಕಾರಿಗಳ ಮೇಲೆ ಆರೋಪ ಮಾಡುವಂಥ ವಿಚಿತ್ರ ಸನ್ನಿವೇಶ ಇವತ್ತು ನಿರ್ಮಾಣವಾಗಿದೆ. ನೀವು ಕೊಟ್ಟ ಹಣ ಪ್ರಾಮಾಣಿಕವಾಗಿ ಅಧಿಕಾರಿಗಳು ಖರ್ಚು ಮಾಡುತ್ತಿದ್ದಾರೆಯೇ ? ಅಥವಾ ಪ್ರಾಮಾಣಿಕ ಅಧಿಕಾರಿಗಳನ್ನು ಇದಕ್ಕೆ ಜವಾಬ್ದಾರಿಯುತರನ್ನಾಗಿ ಮಾಡಿದ್ದೀರಾ ? ಯಾವುದೂ ನಿಮಗೆ ಗೊತ್ತಿಲ್ಲ. ಮೊನ್ನೆ ೧೬ನೇ ತಾರೀಖು ಜಿಲ್ಲಾ ಪರಿಷತ್ ಸಭೆ ನಡೆದಾಗ ಜಿಲ್ಲಾ ಜವಾಬ್ದಾರಿ ಮಂತ್ರಿ ಜೆ. ಹೆಚ್. ಪಟೇಲರು ನಾನೂ ಹಾಜರಿದ್ದೆವು ಬರಗಾಲದ ಬಗ್ಗೆ ಚರ್ಚೆ ಮಾಡೋಣ ಎಂದಾಗ ನಾನು ಚರ್ಚೆ ಏಕೆ ಬೇಕು ಸ್ವಾಮಿ, ಬರಗಾಲ ಇದೆ ಎನ್ನುವುದು ಎಲ್ಲರಿಗೂ ಗೊತ್ತಿರುವಾಗ, ಆದ್ದರಿಂದ ಈಗ ಯಾವ್ಯಾವ ಪ್ರದೇಶಗಳ ಗರೀಬರಿಗೆ ಏನೇನು ಪರಿಹಾರ ಕೊಡುತ್ತೀರಿ ಅದನ್ನು ಹೇಳಿ ಎಂದರೆ ಅವರು ಸಧ್ಯಕ್ಕೆ ಒಂದೈದು ಟನ್ ಅಕ್ಕಿ ಮಾತ್ರ ನನ್ನ ಅಂಕೆಯಲ್ಲಿದೆ, ಅಷ್ಟನ್ನೇ ಮಾಡಬೇಕು ಎಂದರು. ಏನು ಸ್ವಾಮಿ ? ಬರಗಾಲ ತೀವ್ರವಾಗಿರುವಕಡೆ ಒಂದೈವತ್ತು ಟನ್ ಅಕ್ಕಿ ಕೊಡುವ ಶಕ್ತಿ ನಿಮ್ಮ ಸರ್ಕಾರಕ್ಕಿಲ್ಲವೇ ? ನೀವು ಕೊಡುವುದೂ ಸಹ ಗೌರಿ ಹಬ್ಬದ ಹೊತ್ತಿಗೆ, ಗರೀಬರಿಗೆ ತಲುಪಿಲ್ಲ. ಬರಗಾಲ ಕಾಮಗಾರಿಗಳಿಂದು ಏನು ನಡೆಯುತ್ತಿದೆ ಈ ಸರ್ಕಾರದಲ್ಲಿ ? ತಾವು ಮಂತ್ರಿ ಎಂಬುದನ್ನು ಮರೆತು ಪ್ರಾಮಾಣಿಕವಾಗಿ ಹೇಳಿ ? ಕಳೆದ ನಾಲ್ಕು ವರ್ಷದ ಭೀಕರ ಬರಗಾಲದಿಂದ ರಾಜ್ಯದ ಬೊಕ್ಕಸವೆಲ್ಲ ಖಾಲಿ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವ ರೈತ ಒಳ್ಳೆಯ ಬೆಳೆ ನಿರೀಕ್ಷೆ ಮಾಡಿದ್ದನೋ, ಮಕ್ಕಳು ಮರಿಗಳನ್ನು ಸಾಕುವ ಸಲುವಾಗಿ ಸಾಲ ಸೋಲ ಮಾಡಿ ಬಡ್ಡಿ ಮೇಲೆ ಹಣ ತಂದು ಬೀಜ ಬಿತ್ತು ಇವತ್ತು ಭೀಕರ ಬರಗಾಲಕ್ಕೆ ತುತ್ತಾಗಿದ್ದಾನೋ ಆವನ ಸ್ಥಿತಿ ಬಗ್ಗೆ ನಿಮ್ಮ ಸರ್ಕಾರದ ಉತ್ತರವೇನು? ಪ್ರಜಾ ಪ್ರತಿನಿಧಿಗಳಾದ ನಾವು ಅವರಿಗೆ ಏನು ಹೇಳಬೇಕು ? ಯಾವ ರೈತ ಇಡೀ ನಾಡಿಗೆ ಅನ್ನದಾತನಾಗಿದ್ದನೋ ಇಂದು ಅವನು ಭಿಕ್ಷಾಪಾತ್ರೆ ಹಿಡಿದು ಬೀದಿಯಲ್ಲಿ ನಿಂತಿದ್ದಾನೆ. ಇಂಥ ಸ್ಥಿತಿಯಲ್ಲಿ ರೈತ

ಸಾಲವನ್ನು ವಾಪಸ್ ಕೊಡುವುದು ಹೇಗೆ ? ನಿಮಗೆ ಯಾವನೋ ಅಧಿಕಾರಿ ಕೊಡುವ ಅಂಕಿ ಸಂಖ್ಯೆಗಳು ಮುಖ್ಯ ಆಧಾರವಾಗುತ್ತವೆಯೇ ಹೊರತು ಕಣ್ಣಾರೆ ಕಂಡು ನಾವು ಹೇಳುವ ಮಾಹಿತಿಯು ಮೇಲೆ ನೀವು ಕಾರ್ಯಕ್ರಮ ಹಾಕಿಕೊಳ್ಳುವುದಿಲ್ಲ. ಇದು ಹೀಗೆ ಮುಂದುವರಿದರೆ ಜನ ನಿಮ್ಮನ್ನು ಬಿಡುವುದಿಲ್ಲ. ಅವರ ತಾಳ್ಮೆಗೂ ಮಿತಿ ಇದೆ. ನಮ್ಮ ಹತ್ತಿರ ಬೇಲಿಕೊಪ್ಪ ಎಂಬ ಊರಿಗೆ ನಾನು ೨೬-೮-೧೯೮೭ ರಂದು ಹೋಗಿದ್ದೆ. ಅಲ್ಲಿ ಮಡಿವಾಳರ ಬಸವಣ್ಣಪ್ಪ ಎಂಬುವರ ಮಗಳು ಜಯಮ್ಮ ಎಂಬ ಇತರರು ಬೇರೆ ಕಡೆಗೆ ಕೆಲಸದ ಮೇಲೆ ಹೋಗಿದ್ದರು. ಅಲ್ಲಿ ೧೫ ದಿವಸದಲ್ಲಿ ಕೆಲಸ ಆಗಿ ಹೋಯಿತು ಎಂದು ಹೇಳಿಬಿಟ್ಟರು. ಈಯಮ್ಮ ಪಾಪ ತನ್ನ ಕಿವಿಯಲ್ಲಿದ್ದ ಬೆಂಡೋಲೆ ಮಾರಿ ದುಡ್ಡು ತಗೊಂಡು ೨೬-೮-೧೯೮೭ ರಂದು ವಾಪಸ್ಸು ತನ್ನ ಊರಿಗೆ ಬಂದಳು. ಅಲ್ಲಿ ನಿಮ್ಮ ಅಧಿಕಾರಿಗಳು ಮನೆಗಿಬ್ಬರಂತೆ ಕೂಲಿಗೆ ಬರಬೇಕೆಂದು ಠಾಂ ಠಾಂ ಹೊಡೆಸುತ್ತಿದ್ದರು. ಹಾಗಾದರೆ ಮನೆಯ ಇತರರ ಕತೆ ಏನಾಗಬೇಕು ? ನಿಮಗೆ ಹಣವನ್ನು ಮಂಜೂರು ಮಾಡಿಸಿಕೊಡುತ್ತೇನೆ ಅವರನ್ನೂ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ನಾವು ಕೈ ಮುಗಿಯಬೇಕಾಯಿತು. ಮುಂದಿನ ಜವಾಬ್ದಾರಿ ಯನ್ನು ಅರಿತು ಕೆಲಸ ಮಾಡಬೇಕಾಗುತ್ತದೆ. ಹಣಕಾಸಿನ ತೊಂದರೆ ಇದೆ ಅದನ್ನು ನಾನೂ ಒಪ್ಪುತ್ತೇನೆ ಕೇಂದ್ರ ಸರಕಾರ ಭಿನ್ನಾಭಿಪ್ರಾಯ ಇಟ್ಟುಕೊಳ್ಳದೆ ಈ ದೇಶದ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ಯೋಚನೆ ಮಾಡಿ ಹಣವನ್ನು ಬೇರೆ ರಾಜ್ಯಗಳಿಗೆ ಬಿಡುಗಡೆ ಮಾಡಿದಂತೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಶಿಕಾರಿಪುರದ ನಾಲ್ಕೈದು ತಾಲ್ಲೂಕಿನಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಏನು ಕೆಲಸ ನಡೆಯುತ್ತಿದೆ ? ಸರಕಾರಿ ನೌಕರರಿಗೆ ಸಂಬಳ ಕೊಡುವುದೊಂದನ್ನು ಬಿಟ್ಟು ರಸ್ತೆ ಕೆಲಸ ನಡೆಯುತ್ತಿದೆಯೇ ಇವತ್ತು ಹಣಕಾಸಿನ ಸ್ಥಿತಿ ಏನಿದೆ ? ಪ್ರಚಾರಕ್ಕೋಸ್ಕರ ಖರ್ಚು ಮಾಡುವಂತಹ ಅಗತ್ಯವಾದರೂ ಏನಿತ್ತು ಚೀಪ್ ಪಾಪ್ಯುಲಾರಿಟಿಗೋಸ್ಕರ ಖರ್ಚು ಮಾಡಿದಂತಹ ಹಣವನ್ನು ಖಾಯಂ ನೀರಾವರಿ ಕೆಲಸಗಳಿಗೆ ಉಪಯೋಗ ಮಾಡಿದ್ದರೆ, ವಿದ್ಯುತ್ ಉತ್ಪಾದನೆ ಉಪಯೋಗ ಮಾಡಿದ್ದಿದ್ದರೆ ಇವತ್ತು ನಮಗೆ ಬರಗಾಲ ಬರುತ್ತಿರಲಿಲ್ಲ. ಭೀಕರ ಬರಗಾಲ ಕಾಡುತ್ತಿರುವಂತಹ ಸಂದರ್ಭದಲ್ಲಿ ಈಗ ಬಿಡುಗಡೆ ಮಾಡಿರುವ ಹಣ ಅಂದರೆ ೭.೮ ಕೋಟಿ ಇರಬಹುದು ಅದನ್ನು ಬಿಡುಗಡೆ ಮಾಡಿದ್ದೇ ವೆಂದು ಏನು ಹೇಳುತ್ತಿದ್ದೀರಿ ಅದರಲ್ಲಿ ಮೂರು ಕೋಟಿ ರೂಪಾಯಿಗಳು ಉದ್ಯೋಗಕ್ಕೋಸ್ಕರ ಬಿಡುಗಡೆ ಮಾಡಿರತಕ್ಕಂಥಾದ್ದು ಇದೆ. ಈ ರಾಜ್ಯದಲ್ಲಿ ನಿಜವಾದಂತಹ ಭವಣೆಗೆ ಸಿಕ್ಕಿರುವಂತಹ ಬಡವನಿಗೆ ಕೃಷಿಕನಿಗೆ, ಬರಗಾಲವಿರುವಂತಹ ಪ್ರದೇಶಕ್ಕೆ ಒಂದು ವಾರಕ್ಕೆ ಈ ದುಡ್ಡು ಸಾಲುವುದಿಲ್ಲ. ನೀವು ಕೊಡುತ್ತಿರುವಂತಹ ಹಣ ೧೫ ದಿನಕ್ಕೆ ಆಗಬಹುದು. ಮಾನ್ಯ ಪ್ರಧಾನ ಮಂತ್ರಿಗಳು ಬಂದು ನೋಡಿ ಹಣವನ್ನು ಬಿಡುಗಡೆ ಮಾಡುವವರೆಗೆ ತಡೆಯುವುದಕ್ಕೆ ಶಕ್ತಿ ನಮಗೆ ಇಲ್ಲದಂತಾಗಿದೆ. ೫೦-೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಪ್ರವಾಸ ಮಾಡಿ ಹೇಳ ಬೇಕಾಗಿತ್ತು. ನಾಲ್ಕು ಹನಿ ಮಳೆ ಬಿದ್ದು ನಾಲ್ಕು ಕೇಜಿ ಜೋಳ, ಬೀಜ ಬೇಕು ಎಂದು ಅಗ್ರಿಕಲ್ಚರ್ ಇಲಾಖೆಗೆ ಬಂದರೆ ಬೀಜ ಎಲ್ಲಿ ಇದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು ರೈತರಿಗೆ ತೊಂದರೆಯಾಗಿ ಬಿತ್ತಿದಂತಹ ಬೆಳೆ ಒಣಗಿ ಹೋಗಿ ನಾಟಿ ಮಾಡಲು ಸಾಧ್ಯವಾಗಿಲ್ಲ. ತೀವ್ರ ಹಾನಿಯಾಗಿದೆ. ಅಣೆಕಟ್ಟು ಪ್ರದೇಶದಲ್ಲಿ ಸಾಕಷ್ಟು ನೀರಿಲ್ಲದೆ ನಾಟಿ ಕಾರ್ಯ ನಿಂತಿದೆ. ಭತ್ತವನ್ನು ಬೆಳೆಸುವಂತಹ ಸಂದರ್ಭದಲ್ಲಿ ಬೇಗ ಬರುವ ಬೆಳೆಯನ್ನು ಬೆಳೆಯಬಹುದು ರಾಗಿ-೨೦೨, ಇಂಡೋ ೧೫ ಅಳಸಂದೆ-ಸಿ ೧೫೨. ಹೆಸರು ಉದ್ದು ಬೆಳೆಯಿರಿ ಎಂದು ಹೇಳುತ್ತಾರೆ ಇದನ್ನು ತೆಗೆದುಕೊಂಡು ಏನು ಮಾಡಬೇಕು. ಇಂತಹ ಬರಗಾಲ ಪರಿಸ್ಥಿತಿಯಲ್ಲಿ ನೀವು ಕೊಟ್ಟಿರುವಂತಹ ಹೇಳಿಕೆ ಏನು ಹುಬ್ಬಳ್ಳಿ ಯಲ್ಲಿ ಆಗಸ್ಟ್ ೨೬ನೇ ತಾರೀಖು ಮಾತನಾಡುತ್ತಾ ಬರ ಪ್ರದೇಶದಲ್ಲಿ ಭೂ ಕಂದಾಯ ಮನ್ನಾ ಇಲ್ಲ ವೆಂದು ಮಾನ್ಯ ಬೊಮ್ಮಾಯಿಯವರು ಹೇಳಿದರು ಅಗತ್ಯ ಬಿದ್ದರೆ. ಕಂದಾಯ ವಸೂಲನ್ನು ಮುಂದೂಡಬಹುದು ಆದರೆ ಮನ್ನಾ ಮಾಡುವುದಾಗಿ ಹೇಳಲಿಲ್ಲವೆಂದು ಪ್ರಜಾವಾಣಿಗೆ ತಿಳಿಸಿದರು. ನಿಮ್ಮ ಎಲ್ಲಾ ಕೆಲಸಗಳನ್ನು ಸ್ಥಗಿತಗೊಳಿಸಿ ರೈತರ ಸಾಲ ಮನ್ನಾ ಮಾಡಿ ಅವನು ನೆಮ್ಮದಿಯಿಂದ ಜೀವನ ಮಾಡುವಂತಹ ವ್ಯವಸ್ಥೆ ಮಾಡಿ ಎಂದು ಈ ಮೂಲಕ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಒಂದು ತಜ್ಞರ ಸಮಿತಿ ಮಾಡಿ ಅವನ ಮನೆಯನ್ನು ಜಪ್ತಿ ಮಾಡಿ ರೈತರಲ್ಲಿ ಎಷ್ಟು ಚೀಲ ಜೋಳ ಇದೆ ಎಷ್ಟು ಬಂಗಾರ ಇದೆ ಯಾವುದನ್ನು ಮಾರಿ ಅವನು ಸಾಲ ಕೊಡಬೇಕು ಎಂಬುದನ್ನು ಯೋಚನೆ ಮಾಡಿ. ಹರಿಯಾಣ ಸರಕಾರ ಕೇಂದ್ರ ಸರಕಾರವನ್ನು ವಿರೋಧ ಮಾಡಿಕೊಂಡು ಹೇಗೆ ಕ್ರಮ ಕೈಗೊಂಡರೋ, ಕಾಂಗ್ರೆಸ್ ಇರಲೀ, ಮತ್ತೊಂದು ಇರಲೀ ೪೦ ವರ್ಷಗಳಲ್ಲಿ ನೀವು ಅವರಿಗೆ ಏನೂ

ಕೊಡಲಿಲ್ಲ ಅವರ ಹತ್ತಿರ ದುಡಿಸಿಕೊಂಡಿದ್ದೀರಿ ಇದಕ್ಕೊಂದು ಉಪಾಯ ಹುಡುಕಿ. ಸಾಮೂಹಿಕ ಬೋರ್‌ವೆಲ್ಸ್ ಅನ್ನು ತೆಗೆದಿಸಿದ್ದೀರಿ ಏನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ೧೦೦ಕ್ಕೆ ೭೫ ಜನ ರೈತರು ವಾಸ ಮಾಡತಕ್ಕಂತಹ ಕಡೆಗಳಲ್ಲಿ ಅವರ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಪ್ರಾಮಾಣಿಕ ಪ್ರಯತ್ನ ಆಗಿಲ್ಲ. ಜಿಲ್ಲಾ ಪರಿಷತ್ತಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೀರಿ ಬರಗಾಲ ಕಾಮಗಾರಿ ಕೆಲಸ ಚೆನ್ನಾಗಿ ನಡೆಯಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ಚೆನ್ನಾಗಿ ಕೆಲಸ ಮಾಡಿದ್ದೀರಿ ಅದನ್ನು ಈ ರಾಜ್ಯದ ಜನತೆ ಮರೆಯುವುದಿಲ್ಲ ಕೆರೆಕಟ್ಟೆಗಳನ್ನು ಮಾಡಿದ್ದೀರಿ, ರಸ್ತೆಗಳನ್ನು ಮಾಡಿದ್ದೀರಿ. ಜನರ ಸಮಸ್ಯೆಗಳನ್ನು ಬಗೆಹರಿಸಿದರೆ ನೀವು ಇನ್ನೂ ಹೆಚ್ಚು ದಿವಸ ಅಲ್ಲಿ ಕುಳಿತು ಕೊಳ್ಳಬಹುದು ಕುಳಿತುಕೊಳ್ಳಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ.

ಜನಗಳ ಅಪೇಕ್ಷೆ ಅದು. ಆದರೆ ಅಪೇಕ್ಷೆಗೆ ನಿರೀಕ್ಷೆಗೆ ತದ್ವಿರುದ್ಧವಾಗಿ ಕೆಲಸ ಆಗದೇ ಐದಾರು ತಿಂಗಳಿಂದ ನಡೆಯುತ್ತಿದೆ, ಈ ಸ್ಥಿತಿ ಹೀಗೆಯೇ ಮುಂದುವರೆದರೆ ಯಾವ ರೀತಿ ಈ ರಾಜ್ಯದ ಜನತೆಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಆಗುತ್ತದೆ ? ಇವತ್ತು ವಕೀಲರುಗಳು ಬಂದರು. ಈ ರಾಜ್ಯದ ರೈತ ಅದೇ ರೀತಿ ಬರುತ್ತಾನೆ. ಬ್ರಿಟಿಷರನ್ನು ನಮ್ಮ ಪೂಜ್ಯ ಮಹಾತ್ಮಗಾಂಧೀಜಿ ಯವರು ಯಾವ ರೀತಿ ಈ ದೇಶ ಬಿಟ್ಟು ತೊಲಗಿ ಎಂದು ಹೇಳಿದರೂ ಆ ರೀತಿಯಲ್ಲಿ ಆಗುತ್ತದೆ. ಈ ರಾಜ್ಯದ ರೈತನ ಹಿತವನ್ನು ಕಾಪಾಡಲಿಕ್ಕೆ ಸರ್ಕಾರದ ಕೈಯಲ್ಲಿ ಆಗಲಿಲ್ಲ ಎಂದರೆ ಜನ ಬೀದಿಗೆ ಬರುತ್ತಾರೆ. ಅದಕ್ಕೆ ಅವಕಾಶ ಕೊಡಬೇಡಿ ರೈತನು ಬದುಕುವುದಕ್ಕೆ ಅವನ ಬಗ್ಗೆ ಚಿಂತನೆ ಯನ್ನು ಮಾಡುತ್ತಿದ್ದೀರಾ ? ಇಂಥ ಸಂದರ್ಭದಲ್ಲಿ ಕಂದಾಯವನ್ನು ಮನ್ನಾ ಮಾಡುವುದರ ಬಗ್ಗೆ ಚಿಂತನೆಯನ್ನು ಮಾಡುತ್ತೀರಾ ? ಬರಗಾಲದ ಕಾಮಗಾರಿ ಬಗ್ಗೆ ಚಿಂತನೆಯನ್ನು ಮಾಡುತ್ತೀರಾ ? ಅಲ್ಲ. ಬರಗಾಲದ ಬಗ್ಗೆ ಇವೊತ್ತು ಚಿಂತನೆಯನ್ನು ಮಾಡಬೇಕಾಗಿದೆ. ಸ್ವಾಮಿ, ಈ ವೇಳೆಗೆ ರೈತ ಒಳ್ಳೆಯ ಬೆಳೆಯನ್ನು ನಿರೀಕ್ಷೆ ಮಾಡುತ್ತಿದ್ದ. ಇನ್ನು ಸುಮಾರು ಎಂಟು–ಒಂಬತ್ತು ತಿಂಗಳು ಕೆಲಸವನ್ನು ಮಾಡಬೇಕಾಗಿದೆ. ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥ ಮಂಜೂರಾತಿ ಎಷ್ಟು ? ಅದರ ಲೆಕ್ಕಾಚಾರ ಏನು ? ಕೇಂದ್ರ ಸರ್ಕಾರ ಕೊಡದೆ ನಮ್ಮ ಪರಿಸ್ಥಿತಿಯನ್ನು ತಿಳಿಸುವ ಅಗತ್ಯ ಎಲ್ಲಿದೆ ? ಕೊಡದೇ ಇದ್ದರೆ ಯೋಚನೆ ಮಾಡೋಣ. ೧೫ ಕೋಟಿ ರೂಪಾಯಿಗಳು ಎಂದು ಹೇಳಿದರೆ ಅದಕ್ಕೆ ಆಧಾರ ಏನು ? ಯಾವ ರೀತಿ ಲೆಕ್ಕಾಚಾರ ಮಾಡುತ್ತೀರಿ ? ಈ ಬಗ್ಗೆ ಅವರು ಏನು ಕೊಟ್ಟಿದ್ದಾರೆ, ಆ ಬಗ್ಗೆ ಚರ್ಚೆ ಮಾಡೋಣ. ಏನೇನು ಉಳಿಸಬೇಕು, ಅದನ್ನು ಉಳಿಸಬೇಕಾದರೆ ಕಾರ್ಯ ಕ್ರಮವನ್ನು ಹಾಕಿಕೊಳ್ಳತಕ್ಕಂಥ ಜಿಲ್ಲೆಗಳಲ್ಲಿ ಒಬ್ಬ ಜಿಲ್ಲಾ ಪರಿಷತ್ತು ಅಲ್ಲಿ ಮಂತ್ರಿಗೆ ಸಮಾನವಾದಂಥ ಅಧ್ಯಕ್ಷ ಉಪಾಧ್ಯಕ್ಷ ಇದ್ದಾರೆ. ಮಂತ್ರಿಗಳು ಇಷ್ಟೊಂದು ಸಂಖ್ಯೆಯಲ್ಲಿದ್ದಾರೆ, ಅವರನ್ನು ೧೫–೧೬ಕ್ಕೆ ಇಳಿಸಿ. ಎಲ್ಲಾ ಛೇರ್ಮನ್‌ಗಳನ್ನೂ ಕಿತ್ತೊಗೆಯಿರಿ. ಅವರಿಗೆ ಸೌಲಭ್ಯ ಕೊಡುವುದನ್ನೆಲ್ಲಾ ನಿಲ್ಲಿಸಿ. ನಗರ ಪ್ರದೇಶಗಳ ಚಿಂತನೆಯನ್ನು ಮಾಡುವುದು ಬಿಟ್ಟು ಹಳ್ಳಿಗಳ ಬಗ್ಗೆ ಗಮನವನ್ನು ಕೊಡುತ್ತೇವೆ ಎಂದು ಧೈರ್ಯವಾಗಿ ಹೇಳಿ. ನಿಮಗೆ ಅಡ್ಡಿ ಮಾಡತಕ್ಕಂಥವರ ಬಗ್ಗೆಯೂ ಹೇಳಿ. ನೀವು ಈ ರೀತಿಯ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳದಿದ್ದರೆ ರೈತ ಕಷ್ಟನಷ್ಟಗಳಿಗೆ ಈಡಾಗುವುದರಲ್ಲಿ ಸಂಶಯವೇ ಇಲ್ಲ. ಅವನು ಕಷ್ಟನಷ್ಟಗಳಿಗೆ ಸಿಲುಕಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರಾದಂಥ ಶ್ರೀ ಬಿ. ಜಿ. ಬಣಕಾರ್ ಅವರ ಊರಿಗೂ ನಾನು ಹೋಗಿದ್ದೆನು. ಹೀರೆಕೆರೂರ್ ಹತ್ತಿರ ಶೆಟ್ಟರ್ ಕೆರೆ ಎಂದು ಊರು ಇದೆ. ಆ ಭಾಗದಲ್ಲೆಲ್ಲಾ ಅದು ಬಹಳ ದೊಡ್ಡ ಕೆರೆ. ನಾನು ಓಡಾಡಿದಂಥ ೬೦ ಹಳ್ಳಿಗಳಲ್ಲಿ ಒಂದು ಗುಂಡಿ ತೆಗೆದರೂ ಕೂಡಾ ನೀರು ಸಿಗುವುದಿಲ್ಲ. ಇದು ಶಿಕಾರಿಪುರ ತಾಲ್ಲೂಕಿನ ಪ್ರಶ್ನೆ ಅಲ್ಲ ಇಡೀ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ, ಇಂಥ ವಿಚಿತ್ರವಾದಂಥ ಪರಿಸ್ಥಿತಿ, ಇಂಥ ಪರಿಸ್ಥಿತಿ ನಿರ್ಮಾಣ ಮಾಡುವಂಥ ಬರಗಾಲ ಈ ರಾಜ್ಯಕ್ಕೆ ಬಂದಾಗ ಅದನ್ನು ಎದುರಿಸುತ್ತೇವೆ ಎಂದು ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಒಂದು ವಿಷಯ ವನ್ನು ಮಾತ್ರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಸ್ವಾಮಿ ರೈತನಿಗೆ ಎಷ್ಟು ಕೂಲಿಯನ್ನು ಕೊಡುತ್ತಿದ್ದೀರಿ ? ಕೇವಲ ೮.೩೫ ಪೈಸೆ. ರಾಜ್ಯದ ಸರ್ಕಾರಿ ನೌಕರರ ಸಂಬಳವನ್ನು ಜಾಸ್ತಿ ಮಾಡಿದಿರಿ. ಶಾಸಕರುಗಳಿಗೆ ಕಷ್ಟ ಇದೆ ಎಂದು ಜಾಸ್ತಿ ಮಾಡಿಕೊಂಡೆವು. ತಾಲ್ಲೂಕು ಆಫೀಸ್‌ಗಳಲ್ಲಿ ನಾಲ್ಕನೇ ದರ್ಜೆ ನೌಕರರುಗಳಿಗೆ ೯೦೦–೧೦೦೦ ರೂಪಾಯಿಗಳವರೆಗೆ ಸಂಬಳ ಬರುತ್ತದೆ. ಮೂವತ್ತು ದಿವಸ ದುಡಿದರೆ ಒಂದು ದಿನಕ್ಕೆ ೩೦–೩೨ ರೂಪಾಯಿಗಳು ಕೂಲಿ ಬರುತ್ತದೆ. ಬೆಲೆ ಜಾಸ್ತಿ

ಯಾದರೂ ಅವರು ಸುಧಾರಿಸಿಕೊಂಡು ಹೋಗುತ್ತಾರೆ. ಆದರೆ ಯಾವ ರೈತ ಕಳೆದ ನಾಲ್ಕಾರು ವರ್ಷಗಳಿಂದ ೮–೩೫ ರೂಪಾಯಿಗಳಿಗೆ ದುಡಿಯಬೇಕಲ್ಲ. ಅವನು ತರುವಂಥ ಅಕ್ಕಿ, ರಾಗಿ, ಸಕ್ಕರೆ, ಗೋಧಿ ಎಣ್ಣೆ ನಾವು ತರುವಂಥ ಅಂಗಡಿಯಲ್ಲಿಯೇ ಅವನು ತರುವುದು ಕೇವಲ ೮–೩೫ ರೂಪಾಯಿಗಳಲ್ಲಿ ಆತ ಹೇಗೆ ಜೀವನವನ್ನು ಮಾಡಬೇಕು ? ಅವನ ಬಗ್ಗೆ ನೀವು ಹಾಕಿಕೊಂಡಿರುವ ಕಾರ್ಯಕ್ರಮಗಳಾದರೂ ಯಾವುದು ? ಇದರ ಬಗ್ಗೆ ನೀವು ಯೋಚನೆ ಮಾಡಿ ಅವನ ಕೂಲಿಯನ್ನು ಜಾಸ್ತಿ ಮಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಇನ್ನು ಮೇವಿನ ಬಗ್ಗೆ ಹೇಳುವುದಾದರೆ ಜಾನುವಾರುಗಳು ಕಟುಕರ ಅಂಗಡಿಗೆ ಹೋದಮೇಲೆ ಮೇವಿನ ಬಗ್ಗೆ ಯೋಚನೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತೀರಿ. ಕೆರೆಗಳಲ್ಲಿ, ಬೋರ್‌ವೆಲ್‌ಗಳಲ್ಲಿ ನೀರನ್ನು ಉಪಯೋಗಿಸಿಕೊಂಡು ಜೋಳ ಇಂತಹ ಧಾನ್ಯಗಳನ್ನು ಬೆಳೆದುಕೊಳ್ಳುತ್ತಿದ್ದಾನೆ, ಅವನಿಗೆ ಬೇರೆ ದೇಶದಿಂದ ದವಸ ಧಾನ್ಯಗಳನ್ನು ಒದಗಿಸಿ ಅವನಿಗೆ ಮೇವನ್ನು ಬೆಳೆಯುವುದಕ್ಕೆ ಹೇಳಿದರೆ ಬೆಳೆಯುತ್ತಾನೆ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಜಾನುವಾರುಗಳು ಮೇವು ಇಲ್ಲದೇ ಕಂಗಾಲಾದಂಥ ಸಂದರ್ಭದಲ್ಲಿ ಏನು ಮಾಡುವುದಕ್ಕಾಗುವುದಿಲ್ಲ. ಬೇಸಿಗೆ ಬೆಳೆ ಬರುವುದರ ಬಗ್ಗೆ ಚಿಂತನೆಯನ್ನು ಮಾಡದೇ ಮೇವಿನ ಬಗ್ಗೆ ತಾವು ಪ್ರಾಮಾಣಿಕ ಚಿಂತನೆಯನ್ನು ಮಾಡಬೇಕು. ಇನ್ನು ಕುಡಿಯುವ ನೀರಿನ ಬಗ್ಗೆ ತುಂಬಾ ಸಮಸ್ಯೆ ಇದೆ. ಬಹಳ ದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ, ಈ ಸರ್ಕಾರ ಬಂದ ಮೇಲೆ ಮಿನಿ ವಾಟರ್ ಸಪ್ಲೈ ಎಂದು ಮಾಡಿದ್ದಾರೆ, ಒಳ್ಳೆಯ ಯೋಜನೆಯನ್ನು ಮಾಡಿದ್ದಾರೆ. ಶಂಕರಿಕೊಪ್ಪ ಎಂದು ಶಿಕಾರಿಪುರದ ಹತ್ತಿರ ಒಂದು ಗ್ರಾಮ. ಅಲ್ಲಿ ನಾಲ್ಕು ವರ್ಷಗಳಿಂದ ಹದಿನಾಲ್ಕು ಸಾರಿ ಬೋರ್‌ವೆಲ್‌ನ್ನು ತೆಗೆಸಿದ್ದೇವೆ. ಒಂದು ಕೊಡ ಕೂಡಾ ನೀರು ಬಂದಿಲ್ಲ.

ಇಂಥ ಗ್ರಾಮಗಳಲ್ಲಿ ಒಂದು ಎರಡು ಕಿಲೋಮೀಟರ್‌ಗೆ ಒಂದೇ ಒಂದು ಬೋರ್‌ವೆಲ್ ಇದೆ. ಮಿನಿ ವಾಟರ್ ಸ್ಕೀಮ್‌ನಲ್ಲಿ ಶಾಶ್ವತವಾಗಿ ನೀರು ಸಿಕ್ಕುವಂಥ ವ್ಯವಸ್ಥೆ ಮಾಡಬೇಕು. ೫–೬ ಕಡೆ ಬೋರ್‌ವೆಲ್‌ಗಳು ಇವೆ, ಇದರ ಜೊತೆಗೆ ೨–೩ ಕಡೆ ಸಣ್ಣ ಟ್ಯಾಂಕ್ ಇದೆ. ಈ ಬೋರ್‌ವೆಲ್‌ಗಳ ನೀರನ್ನು ಅಳವಡಿಸಿಕೊಂಡು ತಾವು ಯೋಜನೆಯನ್ನು ಮಾಡಬೇಕು. ನಮ್ಮ ಚಿಕ್ಕ ಮಾಗಡಿಯಲ್ಲಿ ನೀರು ಇಲ್ಲದೇ ಬಹಳ ತೊಂದರೆ ಆಗಿದೆ. ಸಿಮೆಂಟ್‌ನಲ್ಲಿ ತೊಟ್ಟಿ ಮಾಡಿ ಅದರಲ್ಲಿ ನೀರು ತುಂಬಿಸಲು ವ್ಯವಸ್ಥೆ ಮಾಡಿದರೆ ಜನ, ಜಾನುವಾರುಗಳಿಗೆ ಕುಡಿಯುವುದಕ್ಕೆ ಅನುಕೂಲವಾಗುತ್ತದೆ. ಎಲ್ಲಿ ಟ್ಯಾಂಕ್‌ಗಳು ಇಲ್ಲ, ಅಲ್ಲಿ ಈ ನೀರನ್ನು ಸಂಗ್ರಹಿಸಿಡಲು ಸಿಮೆಂಟ್ ತೊಟ್ಟಿ ನಿರ್ಮಿಸಬೇಕು. ಈ ನೀರನ್ನು ಒದಗಿಸುವ ಕೆಲಸವನ್ನು ಜಿಲ್ಲಾ ಪರಿಷತ್‌ಗೆ ವಹಿಸುವುದಕ್ಕೆ ಏರ್ಪಾಡು ಮಾಡಿದ್ದೀರಿ. ಕಳೆದ ಮೂರು ವರ್ಷಗಳಿಂದ ಇಂತಹ ಗಂಭೀರ ಪರಿಸ್ಥಿತಿ ಇದೆ. ಲೋಕೋಪಯೋಗಿ ಇಲಾಖೆಯವರು, ಬಿ.ಡಿ.ಒ. ನವರು ಮೈನರ್ ಇರಿಗೇಷನ್ ಇಲಾಖೆಯವರು ಎಲ್ಲರೂ ಒಂದೊಂದು ಕಡೆ ಕೆಲಸ ಮಾಡುತ್ತಾರೆ. ಎಲ್ಲೆಲ್ಲಿ ಬರಗಾಲ ಇದೆ ಅಲ್ಲಿ ಬರಗಾಲ ಕಾಮಗಾರಿಗಳನ್ನು ಕೊಡುವ ವ್ಯವಸ್ಥೆ ಮಾಡಿ. ಶಿಕಾರಿಪುರದಲ್ಲಿ ೬೩,೭೦೦ ಜನಸಂಖ್ಯೆ ಇದೆ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲ. ನನ್ನ ಕ್ಷೇತ್ರದಲ್ಲಿ ಮಾತ್ರವೇ ಅಲ್ಲ. ಹಲವಾರು ತಾಲ್ಲೂಕುಗಳಲ್ಲಿ ಇದೇ ಪರಿಸ್ಥಿತಿ ಇದೆ. ಜಿಲ್ಲಾ ಪರಿಷತ್‌ನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಇದ್ದಾರೆ, ಅವರಿಗೆ ವೆಹಿಕಲ್ ಕೊಟ್ಟಿದ್ದೀರಿ. ಆದರೆ ರಿಪೇರಿ ಮಾಡಲು ಹಣ ಇಲ್ಲ. ನಾನು ಫೋನ್ ಮಾಡಿ ಅವರ ವಾಹನಕ್ಕೆ ಪೆಟ್ರೋಲ್ ಹಾಕಿಸಬೇಕಾಯಿತು. ಜಿಲ್ಲಾ ಪರಿಷತ್‌ಗೆ ಬರಗಾಲ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಬರಗಾಲ ಇರುವಾಗ ಅದನ್ನು ತಡೆಗಟ್ಟಲು ಹೊಸ ಯೋಜನೆಯನ್ನು ಮಾಡಬೇಕು. ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮದಂತೆ ಬರಗಾಲ ಪರಿಹಾರ ಯೋಜನೆಯನ್ನು ಹಾಕಿಕೊಳ್ಳಬೇಕು, ಅಗತ್ಯವಾದ ಕಡೆಗಳಲ್ಲಿ ನೀರಾವರಿಗೆ ಅನುಕೂಲವಾಗುವ ತರಹ ಎಲ್ಲಾ ಕಡೆಗಳಲ್ಲಿ ಕಾಮಗಾರಿಗಳನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಅಧಿಕಾರಿಗಳೂ ಸಹ ಶ್ರದ್ಧೆ ವಹಿಸಿ ಕೆಲಸ ಮಾಡಬೇಕು. ಭೀಕರವಾಗಿ ತಾಂಡವಾಡುತ್ತಿರುವ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಮಾಡುವಲ್ಲಿ ನಮ್ಮ ಕಾಂಗ್ರೆಸ್ ಮಿತ್ರರೂ ಸಹ ಸಹಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬರಗಾಲ ಪರಿಸ್ಥಿತಿಯನ್ನು ಎದುರಿಸತಕ್ಕ ಸನ್ನಿವೇಶದಲ್ಲಿ ಅದನ್ನು ತಡೆಗಟ್ಟಲು ಏರ್ಪಾಡು ಮಾಡಿ. ಈ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿ ಬರಗಾಲವನ್ನು

ಹೋಗಲಾಡಿಸಲು ಹೆಚ್ಚಿನ ಹಣ ಬಿಡುಗಡೆ ಮಾಡಿ. ಇದರಿಂದ ಜನರು ಬರಗಾಲದ ಬವಣೆಯಿಂದ ಪರಿತಪಿಸುವುದನ್ನು ತಪ್ಪಿಸುವಂತೆ ಮಾಡಿ. ಸ್ವಾತಂತ್ರ್ಯ ಬಂದು ೪೦ ವರ್ಷಗಳಿಂದ ಹಳ್ಳಿ ಜನ ಕುಡಿಯುವ ನೀರಿಗಾಗಿ ಹಂಬಲಿಸುತ್ತಾ ಇದ್ದಾರೆ. ಅವರು ಹಲವಾರು ವರ್ಷಗಳಿಂದ ನೀರಿಗಾಗಿ ಬೆವರು ಸುರಿಸಿದ್ದಾರೆ. ರೈತನ ಬಹು ವರ್ಷದ ಬೇಡಿಕೆ ನೀರಿನದು. ಇದನ್ನು ಅರ್ಥ ಮಾಡಿಕೊಂಡು ನೀರಿನ ಬೇಡಿಕೆಯನ್ನು ಪೂರೈಸಿ. ಅವರು ನೆಮ್ಮದಿಯಾಗಿ ಜೀವನ ಮಾಡಲು ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಅವರು ಅನಿವಾರ್ಯವಾಗಿ ಹೋರಾಟ ಮಾಡಬಹುದು. ಆ ಮೇಲೆ ಜಿಲ್ಲಾ ಪರಿಷತ್ ಮಂಡಲ್ ಪರಿಷತ್‌ನವರಿಗೆ ಇದನ್ನು ಯಶಸ್ವಿಯಾಗಿ ಮಾಡಲು ಅವಕಾಶ ಕೊಡಿ. ಅವರಿಗೆ ಹೇಳಿದರೆ ಬರಗಾಲ ಕಾಮಗಾರಿಯನ್ನು ಕೈಗೊಳ್ಳಲು ಸಿ.ಎಸ್.ಗೆ ಬರೆಯಬೇಕೆಂದು ಹೇಳುತ್ತಾರೆ. ಸಿ.ಎಸ್. ಸ್ಪೀಕರ್‌ಗೆ ಬರೆಯಬೇಕೆಂದು ಹೇಳುತ್ತಾರೆ. ಇಲ್ಲಿ ಯಾರಿಗೆ ಹೇಳುವುದು. ಆದುದರಿಂದ ಏನು ಒಂದು ಎಸ್ಟಿಮೇಟ್ ಪ್ಲಾನ್ ಇದೆ, ಅದನ್ನು ನಿಧಾನ ಮಾಡದೆ ಕೆಲಸ ಆದಷ್ಟು ಜಾಗ್ರತೆಯಾಗಿ ಆಗುವಂತೆ ಮಾಡಿ. ಇದು ಯಶಸ್ವಿಯಾಗಿ ಕಾರ್ಯಾಚರಣೆಗೆ ಬರಬೇಕಾದರೆ ಹಳ್ಳಿಗಳಲ್ಲಿರತಕ್ಕ ಅಧಿಕಾರಿಗಳು ಹೆಚ್ಚಿನ ಶ್ರದ್ಧೆಯಿಂದ ಕೆಲಸ ಮಾಡಬೇಕು. ಇಲ್ಲಿ ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ 'ಅಭಾವ ಪರಿಸ್ಥಿತಿಯಿಂದ ತಮ್ಮ ಜಮೀನುಗಳಲ್ಲಿ ಕೆಲಸ ಕಳೆದುಕೊಂಡು, ಸರ್ಕಾರದ ವತಿಯಿಂದ ಕೆಲಸವನ್ನು ಅರಸಿ ಬರುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗವನ್ನು ಒದಗಿಸಿಕೊಡುವುದು;' ಎಂದು. ಇಲ್ಲಿ ತಾವು ಯಾರನ್ನೂ ಕೆಲಸ ಕೊಡದೆ ವಾಪಸ್ ಕಳುಹಿಸುವುದಿಲ್ಲವೆಂದು ಹೇಳುತ್ತೀರಿ. ಆದರೆ ನಮ್ಮ ಕ್ಷೇತ್ರದಲ್ಲಿ ಬರುವಂಥ ಕೌಲಿ, ಕೊಡಗಿ ಮುಂತಾದ ಕೆಲವು ಗ್ರಾಮಗಳಲ್ಲಿ ದುಡ್ಡು ಇಲ್ಲ, ಬರಗಾಲದ ಕೆಲಸಗಳನ್ನು ನಿಲ್ಲಿಸಿ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಈ ರೀತಿ ಮಾಡಿದರೆ ಆ ಜನರ ಗತಿ ಏನಾಗಬೇಕು ? ಇಂತಹ ಒಂದು ಸ್ಥಿತಿ ಆ ಜನರಿಗೆ ಬರಬಾರದು ? ನೀವು ಬೇರೆ ಕೆಲಸಗಳನ್ನು ಸ್ಥಗಿತಗೊಳಿಸಿಯಾದರೂ ರೈತರ ಹಿತವನ್ನು ಕಾಪಾಡಬೇಕು ? ಕೆಲಸ ಕೇಳುವಂತಹ ಎಲ್ಲರಿಗೂ ಕೆಲಸ ಒದಗಿಸಬೇಕು ಮತ್ತು ಜಾನುವಾರುಗಳಿಗೆ ನೀರು ಮತ್ತು ಮೇವನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ),— ಮಾನ್ಯ ಅಧ್ಯಕ್ಷರೇ, ಈ ಸದನ ಪ್ರಾರಂಭವಾದ ದಿವಸವೇ ಈ ಬರಗಾಲದ ಬಗ್ಗೆ ಚಿಂತನೆ ಮಾಡುವಂತಹದುರ್ದೆಸೆ ಬಂದುದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ೧೯೫೬–೫೭ರಲ್ಲಿ ವಿಶಾಲ ಕರ್ನಾಟಕ ರಾಜ್ಯ ಸ್ಥಾಪನೆ ಆದ ಮೇಲೆ ಪ್ರತಿವರ್ಷವೂ ಈ ಸದನದಲ್ಲಿ ಬರಗಾಲದ ವಿಚಾರ ಒಂದಲ್ಲ ಒಂದು ರೀತಿಯಿಂದ ಚರ್ಚೆಗೆ ಬರುತ್ತಿದೆ, ಈ ಬರಗಾಲದ ವಿಷಯ ಯಾವುದೇ ಒಂದು ಪಕ್ಷಕ್ಕೆ ಸಂಬಂಧಪಟ್ಟಿದ್ದಲ್ಲ. ಇದು ಎಲ್ಲಾ ಪಕ್ಷದವರಿಗೂ ಸಂಬಂಧಪಟ್ಟದ್ದಾಗಿದೆ. ಆದ್ದರಿಂದ ಎಲ್ಲರೂ ಈ ಬಗ್ಗೆ ಸಾಮೂಹಿಕವಾದಂಥ ಹೊಣೆಗಾರಿಕೆಯನ್ನು ಹೊತ್ತುಕೊಂಡು ಜನತೆಯನ್ನು ಬರಗಾಲದ ಬವಣೆಯಿಂದ ರಕ್ಷಣೆ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಪ್ರತಿವರ್ಷವೂ ಈ ಬರಗಾಲ ಏತಕ್ಕೆ ಬರುತ್ತಿದೆ ಎಂಬುದನ್ನು ಅಧಿಕಾರದಲ್ಲಿರುವವರು ಚಿಂತನೆ ಮಾಡಬೇಕು. ಇದು ಸರ್ಕಾರದ ಆದ್ಯ ಕರ್ತವ್ಯ. ಯಾವುದೇ ಪಕ್ಷದ ಸರ್ಕಾರ ಅಧಿಕಾರದಲ್ಲಿರಲಿ, ಬರಗಾಲದ ಬಗ್ಗೆ ಚಿಂತನೆ ಮಾಡದಿರುವಂತಹ ಅಧಿಕಾರಿಗಳಾಗಲೀ ಇಲ್ಲವೇ ಮಂತ್ರಿಗಳಾಗಲೀ, ಆ ಸ್ಥಾನದಲ್ಲಿರುವುದಕ್ಕೆ ಅವರು ಲಾಯಕ್ ಅಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಾರದು. ಈ ಹಿಂದೆ ಕರ್ನಾಟಕ ರಾಜ್ಯ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಿರಲಿಲ್ಲ. ಆದರೆ ಈಗ ಪ್ರತಿವರ್ಷವೂ ಏತಕ್ಕೆ ಬರಗಾಲಕ್ಕೆ ತುತ್ತಾಗುತ್ತಿದೆ ಎಂಬುದನ್ನು ಸರ್ಕಾರ ಚಿಂತನೆ ಮಾಡಬೇಕಾಗಿದೆ. ನಾನು ಈ ಹಿಂದೆ ಅಧಿಕಾರದಲ್ಲಿದ್ದಾಗಲೂ ಸಹ ಈ ಬರಗಾಲದ ಬಗ್ಗೆ ಎಷ್ಟು ವಿಚಾರ ಮಾಡಬೇಕಾಗಿತ್ತೋ ಅಷ್ಟು ವಿಚಾರ ಮಾಡಲಿಲ್ಲ ಮತ್ತು ಎಷ್ಟು ಹಣವನ್ನು ಈ ಬಾಬಿಗೆ ತೊಡಗಿಸಬೇಕಾಗಿತ್ತೋ ಅಷ್ಟು ಹಣವನ್ನು ತೊಡಗಿಸಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವೊತ್ತು ಬೆಂಗಳೂರು ನಗರ ಸಹ ಬೀದರ್ ನಗರಕ್ಕಿಂತ ಕಡೆಯಾಗಿದೆ. ಬೆಂಗಳೂರು ನಗರ ಹೆಚ್ಚು ಬೆಳೆಯಬಾರದೆಂದು ಕೊಂಡು ಮಾಗಡಿ ಕೆಂಪೇಗೌಡ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿಯೂ ಗೋಪುರಗಳನ್ನು ಕಟ್ಟಿಸಿದ. ಆದರೆ ಇವೊತ್ತಿನ ದಿವಸ ಬೆಂಗಳೂರು ನಗರ ನಾನಾ ರೀತಿಯಿಂದ ಬೆಳೆಯುತ್ತಿದೆ, ಜನಸಂಖ್ಯೆ ಹೆಚ್ಚಾದಂತೆ ನಮ್ಮ ಅರಣ್ಯ ಸಂಪತ್ತು ಸಹ ಹಾಳಾಗುತ್ತದೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು? ಅರಣ್ಯ ನಾಶವನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಅರಣ್ಯವನ್ನು ಬೆಳೆಸುವ

ವಿಚಾರದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಮಾನ್ಯ ಅರಣ್ಯ ಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕೆಲವು ಯೋಜನೆಗಳನ್ನು ಈ ಸಂದರ್ಭದಲ್ಲಿ ಹಾಕಿಕೊಳ್ಳುವುದು ಒಳ್ಳೆಯದು. ಅರಣ್ಯ ಬೆಳೆಸುವ ವಿಚಾರದಲ್ಲಿ ನಮಗೆ ಇಲ್ಲಿ ಯಾವುದೇ ವಿವರಗಳನ್ನು ಕೊಟ್ಟಿಲ್ಲ. ಬರಗಾಲವನ್ನು ಶಾಶ್ವತವಾಗಿ ಹೋಗ ಲಾಡಿಸಲು ಮುಂದಿನ ವರ್ಷ ಏನು ಕಾರ್ಯಕ್ರಮ ಕೈಕೊಂಡಿದ್ದಾರೆಂಬುದನ್ನು ಇಲ್ಲಿ ಹೇಳಿಲ್ಲ, ಕೇಂದ್ರ ದಿಂದ ಹೆಚ್ಚಿನ ನೆರವನ್ನು ಕೊಡಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಈ ಮಾತನ್ನು ತಾವು ಹೇಳದಿದ್ದರೂ ನಾವು ನಮ್ಮ ಪ್ರಯತ್ನ ಮಾಡುತ್ತೇವೆ. ನಮ್ಮ ಪಕ್ಷದ ಅಧ್ಯಕ್ಷರೇ ಪ್ರಧಾನಮಂತ್ರಿಗಳಾಗಿದ್ದಾರೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ನೆರವನ್ನು ಕೊಡಬೇಕೆಂದು ನಾವು ಸಹ ಒತ್ತಾಯ ಮಾಡುತ್ತೇವೆ. ಬರಗಾಲಕ್ಕೆ ಸಂಬಂಧಪಟ್ಟಂತೆ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಏನೇನು ಕೆಲಸಗಳಾಗಬೇಕಾಗಿದೆ ಎಂಬ ಬಗ್ಗೆ ವರದಿ ಕೊಡಬೇಕೆಂದು ಪ್ರಧಾನಮಂತ್ರಿಗಳು ನಮಗೆಲ್ಲಾ ಆಹ್ವಾನ ಕೊಟ್ಟಿದ್ದಾರೆ. ಪ್ರಧಾನಮಂತ್ರಿಗಳೇ ದೇಶದ ಮಟ್ಟದಲ್ಲಿ ರಚಿತವಾಗಿರುವ ಬರಗಾಲ ಸಮಿತಿಯ ಅಧ್ಯಕ್ಷ ರಾಗಿದ್ದಾರೆ. ರಾಜ್ಯ ಸರ್ಕಾರದವರು ಈ ಒಂದು ವರದಿ ತಯಾರು ಮಾಡುವಾಗ ವಿರೋಧಪಕ್ಷದವರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಬರಗಾಲದ ಬಗ್ಗೆ ವಿಶೇಷವಾಗಿ ಇಲ್ಲಿ ಚರ್ಚೆಯಾಗಬೇಕೆಂದು ನಾವು ಕೇಳಿಕೊಂಡಾಗ, ಅದರ ಒಂದು ಕೀರ್ತಿ ಎಲ್ಲಿ ವಿರೋಧಪಕ್ಷಕ್ಕೆ ಹೋಗಿಬಿಡುತ್ತದೋ ಎಂದು ಕೊಂಡು ಸರ್ಕಾರದವರು ವಾಲಂಟರಿಯಾಗಿ ತಾವೇ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಈ ಬರ ಗಾಲದ ಕಾಮಗಾರಿಗಳ ಬಗ್ಗೆ ಇಲ್ಲಿ ಒಬ್ಬರಿಗೊಬ್ಬರಿಗೆ ವಿಶ್ವಾಸವಿಲ್ಲದಿರುವಾಗ, ಈ ರಾಜ್ಯದಲ್ಲಿ ಎಲ್ಲೆಲ್ಲಿ ಏನು ಏನು ಕೆಲಸಗಳಾಗುತ್ತಿವೆ ಎಂಬುದನ್ನು ಜನತೆಗೆ ತಿಳಿಸುವುದಾದರೂ ಹೇಗೆ? ಮಾನ್ಯ ಬೊಮ್ಮಾಯಿ ಅವರು ನಮ್ಮ ಜಿಲ್ಲೆಯವರು ಅವರ ಬಗ್ಗೆ ಇಲ್ಲಿ ನಾನು ಯಾವ ಮಾತನ್ನು ಆಡಬೇಕಾದರೂ ಹಿಂಜರಿ ಯುತ್ತೇನೆ. ಆದರೆ ಕರ್ತವ್ಯದ ಮುಂದೆ ಕರುಣೆಗೆ ಸ್ಥಾನವಿಲ್ಲ. ಈ ಕಾರಣದಿಂದ ಇಲ್ಲಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇಲ್ಲಿ ಪುಟ ೧೨ರಲ್ಲಿ ಏನು ಹೇಳಿದ್ದಾರೆಂದರೆ.—

> 'The area sown in Gadag. Haveri, Hubli, Kundgol, Mundargi Navalgund, Ranebennur, Ron and Savanur taluks has been poor.

೪-೩೦ಪಿ.ಎಂ.

ಬರಗಾಲದ ಬಗ್ಗೆ ಹೇಳುವಾಗ, ಧಾರವಾಡ ಡಿಸ್ಟ್ರಿಕ್ಟ್‌ನಲ್ಲಿ ಗ್ರೌಂಡ್‌ನಟ್ ಕ್ರಾಪ್, ದಿ ಏರಿಯ ಸೋನ್ ವಾಸ್ ೭೪.೯ ಪರ್ಸೆಂಟ್ ಎಂದು ಈ ಪುಸ್ತಕದಲ್ಲಿದೆ. ಆಮೇಲೆ ಟೀಕೆಗಳು ಹೀಗೆ ಆಗಿವೆ ಎಂದು ವರದಿ ಕೊಟ್ಟಿದ್ದಾರೆ. ಬರಗಾಲ ಅಫೆಕ್ಟೆಡ್‌ಏರಿಯ ಎಂದು ಕೊಟ್ಟಿದ್ದಾರೆ. ಈ ಏರಿಯಾ ದಲ್ಲಿ ಕೆ.ಹೆಚ್. ಪಾಟೀಲರು ಆರಿಸಿಬಂದಂಥ ತಾಲ್ಲೂಕು ಬಿಡಬೇಕು ಎಂದು ಒತ್ತಾಯ ಬಂದಿತೇನೋ ಗೊತ್ತಿಲ್ಲ. ಆದರೆ ಕೆ.ಹೆಚ್. ಪಾಟೀಲರು ಒಬ್ಬರೇ ಅಲ್ಲ ಆ ತಾಲ್ಲೂಕಿನಿಂದ ಬಂದವರು, ಸುಮಾರು ೩ ಜನ ಬಂದಿದ್ದಾರೆ. ಮಾನ್ಯ ದೊಡ್ಡಮೇಟಿಯವರು ರೋಣ ತಾಲ್ಲೂಕಿನವರಾದರೂ ಗದಗ ತಾಲ್ಲೂಕಿನ ಹತ್ತಿರ ಇರತಕ್ಕವರು. ಮತ್ತೆ ಉಮ್ಮರವಾಡಿಯವರು, ಅದೇ ರೀತಿ ಶಿರಹಟ್ಟಿಯಿಂದ ಬಂದವರು ಇದ್ದಾರೆ. ಆ ತಾಲ್ಲೂಕುಗಳೆಲ್ಲಾ ಇದಕ್ಕೆ ಸ್ವಲ್ಪ ಹತ್ತಿರ ಇದೆ. ಈ ತಾಲ್ಲೂಕನ್ನು ಏಕೆ ಬಿಟ್ಟಿದ್ದೀರಿ ಎಂದು ವಿಚಾರ ಮಾಡಿರಿ. ಹಾಗಾದರೆ ಅಲ್ಲಿ ಬೆಳೆ ಬಂದಿದೆಯೋ ಏನೋ ಎಂದು ಬಿಟ್ಟಿದ್ದೀರಾ ಅಥವಾ ಮಾನ್ಯ ಬೊಮ್ಮಾಯಿಯವರಿಗೆ ಹೋಗಲಿಕ್ಕೆ ಆಗಲಿಲ್ಲವೇನೋ! ಒಟ್ಟಿನಲ್ಲಿ ಈ ವಿಚಾರದಲ್ಲಿ ತಾವು ಆಲೋಚನೆ ಮಾಡಿರಿ. ಆಮೇಲೆ ಈ ಪುಸ್ತಕದಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅನೆಕ್ಸರ್‌ಗೆ ಪೇಜ್ ನಂಬರ್ ಹಾಕಿಲ್ಲ. ಪೇಜ್ ನಂಬರ್ ಹಾಕಿದರೆ ನಮ್ಮಗಳಿಗೆ ಗೊತ್ತಾಗುತ್ತದೆ ಎಂದು ಇರ ಬಹುದು ಅನೆಕ್ಸರ್-೪ರಲ್ಲಿ ಧಾರವಾಡ ಜಿಲ್ಲೆಯನ್ನು ಕೊಟ್ಟು ಅದರಲ್ಲಿ ನವಲಗುಂದ, ನರಗುಂದ, ಮುಂಡರಗಿ, ಹಾವೇರಿ. ಬ್ಯಾಡಗಿ. ರಾಣೆಬೆನ್ನೂರ್. ಹಿರೇಕೆರೂರ್, ಸವನೂರ್, ಶಿಗ್ಗಾಂವ್, ಕುಂದ ಗೋಳ. ಹಾನಗಲ್, ಶಿರಹಟ್ಟಿ ಎಂದು ಹಾಕಿದ್ದಾರೆ. ಆದರೆ ನನ್ನ ತಾಲ್ಲೂಕನ್ನು ಬಿಟ್ಟಿದ್ದಾರೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಂತಹ ನ್ಯೂನತೆಗಳನ್ನು ಒಳಗೊಂಡಂಥ ರಿಪೋರ್ಟನ್ನು ತರಿಸಿ ನಮ್ಮ ಮುಖಂಡರ ಎದುರಿಗೆ ಹೋದರೆ ಏನಾದೀತು? ಅವರು ಹೇಳಿದ ಹಾಗೆ ಬರೆದು ಕೊಟ್ಟಿ ದ್ದೀರಾ ಅಂದರೆ ಉತ್ತರ ಏನು ಹೇಳುವುದು. ನಿಜವಾಗಿ ಸರ್ಕಾರದ ಪರವಾಗಿ ಒತ್ತಾಯ ಮಾಡಿ ಹೆಚ್ಚು ಹಣವನ್ನು ಕರ್ನಾಟಕಕ್ಕೆ ಕೊಡಬೇಕೆಂಬ ಮನಸ್ಸು ಎಷ್ಟೇ ಇದ್ದರೂ ಸಹಿತ ದುರ್ದೈವದಿಂದ ನಮ್ಮನ್ನು

ವಿಶ್ವಾಸಕ್ಕೆ ತೆಗೆದುಕೊಳ್ಳುವಂಥ ದಾರ್ಢ್ಯತೆ ಅವರಲ್ಲಿಲ್ಲ ನೀವು ಹಗಲೆಲ್ಲಾ ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡುತ್ತೀರಿ. ನೀವು ಮುಂಜಾನೆ ಮಂತ್ರಿಗಳನ್ನು ಭೇಟಿ ಮಾಡುತ್ತೀರಿ, ಮಧ್ಯಾಹ್ನ ಪ್ರೆಸ್‌ಕಾನ್‌ಫರೆನ್ಸ್‌ನಲ್ಲಿ ರಾಜೀವಗಾಂಧಿಯವರನ್ನು ತೆಗೆಯಬೇಕು ಎಂದು ಹೇಳಿಕೆ ಕೊಡುತ್ತೀರಿ. ನೀವು ಬರಗಾಲ ಕಾಮಗಾರಿ ಸಲುವಾಗಿ ಹಣವನ್ನು ಕೇಳಲು ಮನವಿಯನ್ನು ಕೊಡಲು ಹೋಗುತ್ತೀರಿ. ಅದೇ ಹಣವನ್ನು ಉಪಯೋಗ ಮಾಡಿಕೊಂಡು ಆವತ್ತಿನ ದಿವಸ ಸ್ಟೇಟ್‌ಮೆಂಟ್ ಕೊಟ್ಟರೆ ನಿಮ್ಮ ಸ್ಟೇಟ್‌ಮೆಂಟ್‌ಗೆ ಯಾವ ಬೆಲೆ ಇರುತ್ತದೆ? ಆದ್ದರಿಂದ ಇದರ ಬಗ್ಗೆ ಸವಿಸ್ತಾರವಾಗಿ ನೋಡಬೇಕು, ಇದನ್ನು ತಮಗೇ ಬಿಡುತ್ತೇನೆ. ಮಾನ್ಯ ರಾಜೀವ್‌ಗಾಂಧಿಯವರಿಗೆ ಆಗಲಿ, ಧಿಲ್ಲೋನ್ ಅವರಿಗೆ ಆಗಲಿ, ಯಾರಿಗೇ ಯಾರಿಗೇ ಆಗಲಿ ಎಲ್ಲಾ ಕಡೆಗೆ ಏನೇನು ಆಗುತ್ತದೆ ಎಂದು ನೋಟ್ ಕೊಟ್ಟರೆ ಮತ್ತು ನಮಗೆ ನೋಟ್ ಕೊಟ್ಟರೆ ಶಕ್ತಿಮೀರಿ ಪ್ರಯತ್ನ ಮಾಡಲಿಕ್ಕೆ ಅನುಕೂಲವಾಗುತ್ತದೆ, ಆದರೆ ಹಾಗೆ ಇಲ್ಲ ಮೊನ್ನೆ ಎನ್. ಟಿ. ರಾಮರಾವ್‌ರವರು ಬಂದಿದ್ದಾಗ ಮಾತನಾಡಲು ಮಾನ್ಯ ದೇವೇಗೌಡರು ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಎಲ್ಲರೂ ಕೂಡಿ ನಮ್ಮನ್ನು ಕರೆಸಿದರು. ನಮ್ಮ ಕಡೆಯಿಂದ ಮಾತನಾಡಿಸಬೇಕು ಎಂದು. ಬರಗಾಲದ ಬಗ್ಗೆ ಉತ್ತಮವಾದಂಥ ಶ್ರೇಯಸ್ಕರವಾದಂಥ ಕೆಲಸ ಮಾಡಿ ಜನರ ಸೇವೆ ಮಾಡಬೇಕು ಎನ್ನುವಂಥ ಅಭಿಪ್ರಾಯ ಇದ್ದರೆ ನಿಮಗೆ ಯಾರು ವಿರೋಧ ಮಾಡುತ್ತಾರೆ? ಹೋದಸಲ ಬರಗಾಲ ಪರಿಹಾರ ಕಾಮಗಾರಿಗಳನ್ನು ಮಾಡಿದಿರಲ್ಲ ಆಗ ಕೇಂದ್ರ ಸರ್ಕಾರಕ್ಕೆ ಹೋಗಿ ಅದರಲ್ಲಿ ದುರುಪಯೋಗ ಆಗುತ್ತಿದೆ ಎಂದು ನಾವು ಹೇಳಿದ್ದೇವೆಯೋ? ಆ ಹಣ ಸರಿಯಾಗಿಉಪಯೋಗಮಾಡಿಲ್ಲ, ಕೆಟ್ಟಂಥಹಣದುರುಪಯೋಗವಾಗಿದೆ. ನೀವುದುರುಪಯೋಮಾಡಲಿಲ್ಲ, ನಿಮ್ಮ ಅಧಿಕಾರಿಗಳು ಮಾಡಿದ್ದಾರೆ. ಆದರೂ ಸಹಿತ ನಾವು ಹೇಳಲಿಲ್ಲ. ಮನೆಯೊಳಗಿನ ಗುಟ್ಟು ಮನೆಯೊಳಗೇ ಇರಲಿ ಎಂದು ನಾವು ಹೇಳಲಿಲ್ಲ. ಕರ್ನಾಟಕ ರಾಜ್ಯದಲ್ಲಿ ೩–೪ ಕೋಟಿ ಜನರಿಗೆ ಕಲ್ಯಾಣ ಮಾಡುವಂಥ ಕೆಲಸಗಳನ್ನು ಮಾಡೋಣ. ನಾವು ಸುಮ್ಮನೆ ಇದ್ದರೆ ನಿಜವಾಗಿಯೂ ನೀವು ಅದರ ದುರುಪಯೋಗ ಪಡೆಯಲಿಕ್ಕೆ ಹತ್ತಿದ್ದೀರಿ. ವಿರೋಧ ಪಕ್ಷದವರು ಅಂದರೆ ಬರೀ ಗದ್ದಲ ಎಬ್ಬಿಸುವುದು ಅಲ್ಲ, ವಿರೋಧ ಪಕ್ಷ ಇಲ್ಲಿ ಕುಳಿತು ನೀವು ಹೇಳಿದ್ದನ್ನು ಕೇಳುವುದಕ್ಕೆ ಅಲ್ಲ, ವಿರೋಧ ಪಕ್ಷ ಅಂದರೆ ನೀವು ಯಾವುದು ತಪ್ಪು ಮಾಡುತ್ತೀರಿ ಅದಕ್ಕೆ ಮುಗುದಾರ ಹಚ್ಚಿ ಎಳೆಯುವುದಕ್ಕೆ ಇಲ್ಲಿ ಕುಳಿತಿದ್ದೇವೆ. ಆ ರೀತಿ ನಾವು ಮಾಡಲಿಕ್ಕೆ ಸಾಧ್ಯವಿಲ್ಲ ಅಂದರೆ ಮನೆಗೆ ಹೋಗಬೇಕು. ಇವತ್ತಿನ ದಿವಸ ತಮ್ಮ ಎದುರಿಗೆ ನಮ್ರತೆಯಿಂದ ನಿವೇದನೆ ಮಾಡುತ್ತೇನೆ,

ಯಾವು ಯಾವುದಕ್ಕೆ ಎಷ್ಟೆಷ್ಟು ಖರ್ಚಾಗಿದೆ ಎಂದು ಹೋದಸಲ ಕೂಡ ತಾವು ಸ್ಟೇಟ್‌ಮೆಂಟ್ ಮಾಡಿದ್ದೀರಿ. ಇದರಲ್ಲಿ ಬಹಳಷ್ಟು ಹಣ ದುರುಪಯೋಗವಾಗಿದೆಯೆಂದು ಹೇಳಿದರೆ ನನ್ನ ಮೇಲೆ ವ್ಯರ್ಥವಾಗಿ ಸಿಟ್ಟು ಮಾಡಿದರೆ ಏನು ಬಂತು ? ಅಭಾವ ಪರಿಹಾರಗಳಿಗಾಗಿ ನೀವು ಹೇಳಿದಂಥ ಅಂಕಿ ಸಂಖ್ಯೆಗಳ ಪ್ರಕಾರ ೨೫,೯೨ ಲಕ್ಷ ರೂಪಾಯಿಗಳು ಖರ್ಚಾಗಿದೆ. ಇದರಲ್ಲಿ ಎನ್‌ಆರ್‌ಇಪಿಗೆ ೧೪೬.೨ ಲಕ್ಷ ರೂಪಾಯಿಗಳು ಬಂದಿದೆ, ಇದು ಕೇಂದ್ರ ಸರ್ಕಾರದ ಹಣ ಅಲ್ಲವೆ ? ಆರ್‌ಎಲ್‌ಇಜಿಪಿಗೆ ೭೧೪ ಲಕ್ಷ ಕೊಟ್ಟಿದ್ದಾರೆ, ಇದು ಕೇಂದ್ರ ಸರ್ಕಾರದ ಹಣ ಅಲ್ಲವೆ ? ಡಿಪಿಎಪಿಗೆ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲವೆ? ಪ್ರತಿಯೊಂದು ಬಾಬಿಗೂ ಕೇಂದ್ರ ಸರ್ಕಾರ ಹಣ ಕೊಟ್ಟಿದ್ದರೂ ಜನರ ಕಣ್ಣೆದುರಿಗೆ ಇದನ್ನು ಮರೆಮಾಚಿ ಅನ್ಯಾಯ ಮಾಡುತ್ತಿದ್ದೀರಿ. ನನ್ನ ತಲೆಯೊಳಗೂ ಇದನ್ನು ತುಂಬುವಂಥ ವ್ಯಾಖ್ಯಾನ ಮಾಡಿ ಮರಳುಗೊಳಿಸುತ್ತೀರಿ. ಇವೊತ್ತು ಕುಡಿಯುವ ನೀರಿನ ಸಲುವಾಗಿ ಕೇಂದ್ರ ಸರ್ಕಾರ ನೂರಕ್ಕೆ ನೂರರಷ್ಟು ಹಣ ಕೊಡುತ್ತಿದೆ. ಕೊಟ್ಟಂಥ ಹಣವನ್ನು ತಾವು ಸಮರ್ಪಕವಾಗಿ ಖರ್ಚು ಮಾಡುತ್ತಿಲ್ಲ. ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಕೊಡುವುದಾದರೆ, ತಮಗೆ ಗೊತ್ತಿದ್ದಂತೆ ಗದಗ್ ದೊಡ್ಡ ಷಹರ. ಇವತ್ತು ರಾಜ್ಯದಲ್ಲಿರತಕ್ಕ ಅನೇಕ ಷಹರಗಳಿಗೆ ನೀರಿನ ಕೊರತೆ ಇದೆ. ಆದರೆ, ಗದಗಿನಲ್ಲಿರತಕ್ಕ ನೀರಿನ ತೊಂದರೆ ಯಾವ ಶಹರಗಳಲ್ಲಿಯೂ ಇಲ್ಲ. ಅಲ್ಲಿರತಕ್ಕ ಟಿ.ಬಿ.ನಲ್ಲಿ ಕೂಡ ಹೊರಗಡೆಯಿಂದ ನೀರನ್ನು ತಂದು ತುಂಬಬೇಕಾಗಿದೆ. ಒಂದು ಲಕ್ಷಕ್ಕಿಂತ ಹೆಚ್ಚು ಜನ ಗದಗಿನಲ್ಲಿದ್ದಾರೆ. ತಾವು ಹಣದ ಅಭಾವ ಇದೆ ಎಂದು ಹೇಳುತ್ತಿದ್ದೀರಿ. ಆದರೆ ಎಲ್.ಐ.ಸಿ. ಯವರು ಕೊಟ್ಟಂಥ ಹಣವನ್ನು ಇನ್ನೂ ಉಪಯೋಗ ಮಾಡಿಲ್ಲ. ಸ್ವಲ್ಪ ಮಾಡಿದ್ದೀರಿ, ಪೂರ್ತಿಯಾಗಿ ಉಪಯೋಗ ಮಾಡಿಲ್ಲ ಮೊದಲು ಖರ್ಚು ಮಾಡಿ ಹಿಂದುಗಡೆ ಸಾಲ ತೆಗೆದುಕೊಳ್ಳಬೇಕು. ಕೊಟ್ಟ ಹಣವನ್ನು ಉಪಯೋಗ ಮಾಡಿಕೊಳ್ಳದೇ ಇರತಕ್ಕ ಅಧಿಕಾರಿಗಳನ್ನ ನೀವು ಇನ್ನೂ ಕೆಲಸದೊಳಗೆ ಇಟ್ಟುಕೊಂಡಿದ್ದೀರಿ. ಹೀಗಿರುವಾಗ ಹಣ ದುರುಪಯೋಗವಾಗಿದೆ ಎಂದು ಏತಕ್ಕೆ ಆಪಾದನೆ ಮಾಡಬಾರದು. ಕಳೆದ

೧೦–೧೨ ವರ್ಷಗಳಿಂದಲೂ ಗದಗ್‌ನಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎಂದು ಹೇಳುತ್ತಲೇ ಬಂದಿದ್ದೇವೆ. ದಿವಂಗತ ದೇವರಾಜು ಅರಸು ಅವರು ಒಮ್ಮೆ ಅದರ ಅಡಿಗಲ್ಲು ಸಮಾರಂಭ ಮಾಡಿದರು ಅದು ಅಲ್ಲಿಯೇ ಉಳಿಯಿತು. ಮತ್ತೊಮ್ಮೆ ಶ್ರೀಮಾನ್ ಗುಂಡೂರಾಯರು ತಮ್ಮ ಕಾಲದಲ್ಲಿ ಕಾರಂಜಾಗೆ ಅಡಿಗಲ್ಲು ಹಾಕಿದರು, ಅದು ಅಲ್ಲೇ ಉಳಿಯಿತು. ಮಾನ್ಯ ಬೊಮ್ಮಾಯಿಯವರು ಒಮ್ಮೆ ಮಾಡಿದರು ನಮಗೆ ಕಾಳಪ್ಪಾಗಲೀ, ಮಲ್ಲಪ್ಪಾಗಲೀ ಗದಗ್‌ಗೆ ಕುಡಿಯುವ ನೀರನ್ನು ಒದಗಿಸಿದರೆ ಸಾಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಾರಂಭವಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ದೇವರಾಜ ಅರಸು ಅವರು ಇದ್ದಾಗಲೇ ಪ್ರಾರಂಭ ಮಾಡಿದರು. ಪ್ರಾರಂಭ ಪ್ರಾರಂಭವಾಗಿ ಉಳಿದಿದೆಯೇ ಹೊರತು ಮುಕ್ತಾಯವಾಗಿಲ್ಲ. ತಾವು ಅದನ್ನು ಮುಕ್ತಾಯ ಮಾಡಿ ಕೀರ್ತಿ ಪಡೆಯಿರಿ. ಒಂದು ಕೋಟಿ ರೂಪಾಯಿಗಳನ್ನು ಮಿನಿ ಕಿಟ್ಸ್‌ಗಾಗಿ ತೆಗೆದಿಟ್ಟಿದ್ದೀರಿ. ಇದಕ್ಕಿಂತ ಕುಡಿಯುವ ನೀರು ಮುಖ್ಯವಲ್ಲವೆ ? ಗದಗ್‌ನಲ್ಲಿ ನಿಮ್ಮ ಜನರಿಲ್ಲವೆ, ಇವತ್ತು ನೀವು ಗದಗ್ ನಗರಕ್ಕೆ ಕುಡಿಯುವ ನೀರು ಒದಗಿಸದೇ ಹೋದರೆ ; ರಸ್ತೆಯೊಳಗೆ ನಿಮ್ಮನ್ನು ಬರುವುದಕ್ಕೆ ಜನ ಬಿಡುವುದಿಲ್ಲವೆಂದು ಹೇಳುತ್ತೇನೆ. ಇವತ್ತು ಬರಗಾಲದ ಬವಣೆ ಮಿತಿ ಮೀರುವುದರೊಳಗೆ ಶ್ರೀಮಾನ್ ಬೊಮ್ಮಾಯಿ ಮತ್ತು ಅವರ ಸರ್ಕಾರ ವಿಚಾರ ಮಾಡಿ ಗದಗ್ ಪಟ್ಟಣಕ್ಕೆ ನೀರು ಕೊಡುವಂಥ ವ್ಯವಸ್ಥೆ ಮಾಡಿ, ದುರುಪಯೋಗದ ಆಪಾದನೆಯಿಂದ ತಪ್ಪಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಹಣದ ಕೊರತೆ ಇದೆ ಯೆಂದು ಪ್ರಾಮಾಣಿಕವಾಗಿ ಹೇಳಿದ್ದಾರೆ. ಅದನ್ನು ಅವರು ಮುಚ್ಚಿಡಲಿಲ್ಲ. ಹಣದ ಕೊರತೆಯಿಂದ ಅನೇಕ ಕೆಲಸಗಳನ್ನು ಮಾಡಲಿಕ್ಕೆ ಆಗಿಲ್ಲ. ಇವತ್ತು ಧಾರವಾಡ ಜಿಲ್ಲಾ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್‌ಗೆ ೧.೮೦ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಏತಕ್ಕೆ ಇಟ್ಟಿದ್ದೀರಿ ? ಒಂದು ಕಾಲದಲ್ಲಿ ಇದು ಉತ್ತಮ ದರ್ಜೆಯ ಬ್ಯಾಂಕ್ ಎಂದು ಹೆಸರು ಮಾಡಿತ್ತು. ಅದಕ್ಕೆ ೭೫ ಲಕ್ಷ ರೂಪಾಯಿಗಳ ಷೇರು ಬಂಡವಾಳ ಕೊಡಲಿಕ್ಕೆ ಹೊರಟಿದ್ದೀರಿ. ತಮ್ಮ ಮಾರ್ಗದರ್ಶನದಲ್ಲಿಯೇ ನಡೆಯುವಂಥ ಈ ಬ್ಯಾಂಕನ್ನು ದಿವಾಳಿ ಸ್ವರೂಪಕ್ಕೆ ತಂದಂಥ ಕೀರ್ತಿ ತಮ್ಮದಾಗಿದೆ. ಅದರಲ್ಲಿ ನಾವು ಮಾತ್ರ ಕೈ ಹಾಕುವುದಿಲ್ಲ, ಹೇಗಾದರೂ ತಿನ್ನಿ. ನಿಮ್ಮ ಆಫೀಸರ್ಸ್ ಯಾರನ್ನಾದರೂ ನೇಮಿಸಿ, ನಿಮಗೆ ಬೇಕಾದವರನ್ನು ಯಾರನ್ನಾದರೂ ನೇಮಿಸಿ, ಒಟ್ಟಿನಲ್ಲಿ ಆ ಬ್ಯಾಂಕ್ ಸುಧಾರಣೆ ಮಾಡಿ. ಸಹಕಾರಿ ರಂಗದಲ್ಲಿ ಅತ್ಯುತ್ತಮ ಸೇವೆ ಮಾಡಿದಂಥ ಬ್ಯಾಂಕ್ ಅಂದರೆ ಧಾರವಾಡ ಜಿಲ್ಲಾ ಬ್ಯಾಂಕ್. ಇವೊತ್ತು ರೈತರಿಗೆ ಅದರಿಂದ ಎಷ್ಟು ತೊಂದರೆಯಾಗುತ್ತಿದೆ ಅದನ್ನು ತಾವು ಗಮನಿಸಬೇಕು, ಅವರು ಎಲ್ಲಿಂದ ಹಣ ತೆಗೆದುಕೊಳ್ಳಬೇಕು ? ಆ ಬ್ಯಾಂಕ್ ಏತಕ್ಕೋಸ್ಕರ ಈ ರೀತಿ ಆಯಿತು ? ಅಲ್ಲಿರತಕ್ಕ ಬ್ರಾಂಚುಗಳ ಖರ್ಚುವೆಚ್ಚ, ಅಲ್ಲಿ ಬರತಕ್ಕ ಹಣಕ್ಕೆ ಮೀರಿದೆಯೇ ? ಇವೊತ್ತು ೪೩ ಕೋಟಿ ರೂಪಾಯಿ ಡಿಪಾಸಿಟ್ ಇರತಕ್ಕಂಥ ಬ್ಯಾಂಕ್ ಇನ್ನೊಂದು ಇಲ್ಲ. ದುರ್ದೈವದಿಂದ ಅದನ್ನು ತಮ್ಮ ಪಕ್ಷದ ಬ್ಯಾಂಕ್ ಮಾಡಿ ಕೊಂಡು, ಇವೊತ್ತು ಅದರ ಪರಿಸ್ಥಿತಿ ನೋಡಿದರೆ ಹೀನಾಯಮಾನವಾದ ಸ್ಥಿತಿಗೆ ಬಂದಿದೆ. ಮಾನ್ಯ ಸಚಿವರು ಹೇಳಿಕೆಯನ್ನು ಕೊಡುವಾಗ ಧಾರವಾಡ ಜಿಲ್ಲಾ ಬ್ಯಾಂಕ್ ಹೊರತುಪಡಿಸಿ ಉಳಿದೆಲ್ಲಾ ಬ್ಯಾಂಕುಗಳು ಹಣ ಪಡೆಯಲಿಕ್ಕೆ ಲಾಯಕ್ ಇವೆ ಎಂದು ಹೇಳಿರುವುದನ್ನು ನೋಡಿದರೆ, ಇದು ನಮ್ಮ ತಲೆ ಕೆಳಗೆ ಮಾಡುವಂಥದ್ದು ಆಗಿದೆ. ಇದರ ಬಗ್ಗೆ ಹಿಂದಿನ ಪೂರ್ವಜರನ್ನು ನೆನೆಸಿಕೊಳಿ . ಉತ್ತಮ ಸ್ಥಾನದಲ್ಲಿ ಇರತಕ್ಕ ಸಹಕಾರಿ ಬ್ಯಾಂಕ್ ಕೆಳದರ್ಜೆಗೆ ಹೋಗಿದೆ ಅಂದರೆ ನಾವು ತಲೆ ಕೆಳಗೆ ಮಾಡ ಬೇಕಾಗುತ್ತದೆ. ಅಂಥಾದ್ದಕ್ಕೆ ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿಗಳ ಷೇರು ಕೊಟ್ಟು ಈ ನಿಮ್ಮ ನಾಮಿನೇಷನ್ ಮಾಡಿಕೊಳ್ಳಲಿಕ್ಕೆ ಹೋಗಬೇಡಿ. ಇವೊತ್ತು ಸರ್ಕಾರವೇ ತೊಂದರೆಯೊಳಗಿರು ವಾಗ ಇದೇ ಹಣವನ್ನು ಮತ್ತೊಂದು ಸಂಸ್ಥೆಗೆ ಕೊಡಿ. ಈ ಹಣವನ್ನು ಮಾನ್ಯ ಜೆ.ಹೆಚ್. ಪಟೇಲರವರ ಮಿಲ್ಲಿಗೆ ಕೊಡಿ, ಆ ಮಿಲ್ ಆದರೂ ಮುಂದಕ್ಕೆ ಬರಲಿ. ಇವೊತ್ತು ಏನಾಗಿದೆ ಯಾರು ಬೇಡ ಎಂದು ಹೇಳುತ್ತಾರೆ ಅವರಿಗೆ ಕೊಡುತ್ತೀರಿ. ಅದನ್ನು ಬರಗಾಲದ ಲೆಕ್ಕದಲ್ಲಿ ಹಾಕುತ್ತೀರಿ, ಈ ತರಹ ಮಾಡಿದರೆ ನಾವು ರಾಜೀವ್ ಗಾಂಧಿಯವರಿಗೆ ಏನು ಹೇಳಲಿಕ್ಕೆ ಆಗುತ್ತದೆ? ನಮ್ಮ ಕುತ್ತಿಗೆ ಕೊಯ್ಯುವ ಸಲುವಾಗಿ ಇದನ್ನು ಇಟ್ಟಿದ್ದೀರಿ, ಇದರ ಬಗ್ಗೆ ತಾವು ಉತ್ತರ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲ್‌ಗವರ ಪ್ರಶ್ನೆಗೆ ಉತ್ತರ ಕೊಡಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಗಳ ಸಹಕಾರದ ಫ್ಯಾಮಿಲಿಯಿಂದ ಬಂದಿದ್ದಾರೆ. ಅವರು ನಾನು ಹೇಳಿರುವಂಥಾದ್ದನ್ನು ಅರ್ಥ ಮಾಡಿಕೊಂಡಿದ್ದಾರೆ. ಈಗ ಅವರು ನಾವು ಪಾಂಡವರು ಕೌರವರ ಸ್ಥಾನದಲ್ಲಿ ಕುಳಿತಿದ್ದೇವೆ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೫೯ ಕೋಟಿ ರೂಪಾಯಿ ಡಿಪಾಸಿಟ್ ಎಲ್ಲಿ ಹೋಗಿದೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದು ಯಾವಾಗ ಹೋಗಿದೆ ಎನ್ನುವುದು ಗೊತ್ತಿದೆ, ಅದನ್ನು ಹೇಳುವುದಿಲ್ಲ, ಅಷ್ಟು ಹೇಳುತ್ತಿದ್ದಾರೆ ಅಷ್ಟೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಬೊಮ್ಮಾಯಿಯವರು ಸೆಂಟ್ರಲ್ ಅಸಿಸ್ಟೆನ್ಸ್ ಕೇಳಿದ್ದಾರೆ. ಅದರಲ್ಲಿ ಯಾವ ಯಾವುದನ್ನು ಕೇಳಿದ್ದಾರೆ ಅಂದರೆ ರೂರಲ್‌ಗೆ ೪೦ ಕೋಟಿ ರೂಪಾಯಿ, ಅರ್ಬನ್‌ಗೆ ೫ ಕೋಟಿ ರೂಪಾಯಿ. ಡ್ರಿಂಕಿಂಗ್ ವಾಟರ್‌ಗೆ ಕೇಳಿದ್ದಾರೆ. ಟ್ರಾನ್ಸ್‌ಪೋರ್ಟೇಷನ್‌ಗೆ ೧೦ ಕೋಟಿ ರೂಪಾಯಿ, ಓಪನ್ ವೆಲ್‌ಗೆ ಒಂದು ಕೋಟಿ ರೂಪಾಯಿ, ಈ ತರಹ ಹಣವನ್ನು ಕೇಳಿದ್ದಾರೆ. ಈ ತರಹ ಹಣ ಕೇಳಬೇಕಾದರೆ ಅದಕ್ಕೆ ಅಂಕಿಸಂಖ್ಯೆಗಳು ಬೇಡವೆ ? ಇಂತಹ ಊರಿನಲ್ಲಿ ಬಾವಿ ಮಾಡಿಸಬೇಕು, ಇಂತಹ ಊರಿನಲ್ಲಿ ಮೆಷಿನರಿ ಕೆಲಸ ಮಾಡಿಸಬೇಕು ಎಂದು ಏನಾದರೂ ಯೋಚನೆ ಮಾಡಿ ಕೇಳಿದ್ದೀರಾ ? ಇದರ ಬಗ್ಗೆ ನೀವು ಯಾವುದಾದರೂ ವಿವರಗಳನ್ನು ಕೊಟ್ಟಿದ್ದೀರಾ ? ಅಂದರೆ ವಿವರಗಳು ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಬಗ್ಗೆ ನಾವು ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನಿಂದ ವಿವರಗಳನ್ನು ಪಡೆದುಕೊಂಡಿದ್ದೇವೆ. ಡ್ರಿಂಕಿಂಗ್ ವಾಟರ್ ಬಗ್ಗೆ ಪಿ.ಹೆಚ್.ಇ. ಯಿಂದ ಪೂರ್ಣ ವಿವರಗಳನ್ನು ಪಡೆದುಕೊಂಡು ಅದರ ಸಮ್ಮರಿ ಕೊಟ್ಟಿದ್ದೇವೆ. ಓಪನ್ ವೆಲ್ಸ್ ಎಷ್ಟು ತೆಗೆಯಬೇಕು ಎನ್ನುವ ಬಗ್ಗೆ ಎಲ್ಲಾ ವಿವರಗಳನ್ನು ಡಿಪಾರ್ಟ್‌ಮೆಂಟಿನಿಂದ ಪಡೆದುಕೊಂಡು ಅದರ ಸಮ್ಮರಿ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಇಲ್ಲ ಎಂದು ಹೇಳುವುದಿಲ್ಲ. ಯಾವುದಾದರೂ ಒಂದು ಇಲಾಖೆಯವರು ಸಮ್ಮರಿಯನ್ನು ಕೊಟ್ಟ ಮೇಲೆಯೇ ನೀವು ಕೊಡುವುದು. ನಿಮ್ಮ ಅಧಿಕಾರಿಗಳು ಏರ್ ಕಂಡೀಷನ್ ರೂಂನಲ್ಲಿ ಕುಳಿತುಕೊಂಡು ಏನೋ ಒಂದು ಸಮ್ಮರಿಯನ್ನು ಬರೆದು ನಿಮಗೆ ಕೊಡುತ್ತಾರೆ. ಎಲ್ಲೆಲ್ಲಿ ನದಿ ನೀರನ್ನು ತೆಗೆದುಕೊಟ್ಟಿದ್ದೀರಿ ಹಳ್ಳದ ನೀರನ್ನು ಎಲ್ಲೆಲ್ಲಿ ತೆಗೆದು ಕೊಟ್ಟಿದ್ದೀರಿ, ಭೂಮಿಯ ಒಳಗಿನ ನೀರನ್ನು ಎಲ್ಲೆಲ್ಲಿ ಎಷ್ಟೆಷ್ಟು ತೆಗೆದಿದೆ ಎಂಬುದನ್ನು ಹೇಳುತ್ತೀರಿ. ನಿಮ್ಮ ಪಕ್ಷದವರನ್ನು ಕೇಳಿದರೆ ಎಷ್ಟು ಬೋರ್‌ವೆಲ್‌ಗಳನ್ನು ತೆಗೆದಿದ್ದೀರಿ ಒಟ್ಟಾರೆ ಎಷ್ಟು ಖರ್ಚಾಯಿತು. ಎಷ್ಟು ಪಂಪ್ ಜೋಡಿಸಿದ್ದೀರಿ, ಎಷ್ಟು ನೀರು ಬರುತ್ತದೆ, ಪಂಪ್‌ಗಳನ್ನು ಬಾಡಿಗೆಗೆ ತೆಗೆದುಕೊಂಡರೆ ಎಷ್ಟು ಖರ್ಚಾಗುತ್ತದೆ, ನೀವೇ ಸ್ವಂತ ಹಾಕಿಸಿಕೊಂಡರೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ಹೇಳುತ್ತಾರೆ ನಿಮ್ಮನ್ನು ಅಡ್ವೋಕೇಟ್ ಆಗಿ ನೇಮಕ ಮಾಡಿದರೆ ನಾನು ಮಂತ್ರಿ ಎಂಬುದನ್ನೂ ನೀವು ಮರೆತು ವಾದ ಮಾಡುತ್ತೀರಿ. ನಿಮ್ಮ ವಾದವನ್ನು ಧಿಲ್ಲಾನ್‌ರವರೂ ಕೂಡ ಕೇಳುತ್ತಾರೋ, ಇಲ್ಲವೋ ಗೊತ್ತಿಲ್ಲ, ಮಾನ್ಯ ಬೊಮ್ಮಾಯಿಯವರೆ ನೀವು ೫೯ ಕೋಟಿ ರೂಪಾಯಿಗಳನ್ನು ಕೇಂದ್ರದವರನ್ನು ಕೇಳಿದ್ದೀರಿ. ಇದರಲ್ಲಿ ಬೋರ್‌ವೆಲ್‌ಗೆ ಎಷ್ಟಾಗುತ್ತದೆ ? ಪಂಪ್‌ಗೆ ಎಷ್ಟಾಗುತ್ತದೆ ? ಬಾಡಿಗೆಗೆ ತೆಗೆದುಕೊಂಡರೆ ಎಷ್ಟಾಗುತ್ತದೆ ಇನ್ನೂ ಮುಂತಾದ ವಿವರಗಳು ಇದರಲ್ಲಿ ಬರುತ್ತವೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಸೆಂಟ್ರಲ್ ಟೀಂ ಬಂದಾಗ ಈ ಎಲ್ಲಾ ವಿವರಗಳೂ ಬರುತ್ತವೆ.

ಶ್ರೀ ಕೆ. ಹೆಚ್. ಪಾಟೀಲ್.—ಸೆಂಟ್ರಲ್ ಟೀಂ ಬಂದಾಗ ನೀವು ಏನು ಮಾಡುತ್ತೀರೋ ಏನೋ ಗೊತ್ತಿಲ್ಲ. ನೀವು, ಅವರನ್ನು ಯಾವುದಾದರೂ ಒಂದು ಒಳ್ಳೆಯ ಪಂಚತಾರಾ ಹೋಟೆಲ್‌ನಲ್ಲಿ ಇಟ್ಟು ಚೆನ್ನಾಗಿ ನೋಡಿಕೊಂಡರೆ. ಕರ್ನಾಟಕದಲ್ಲಿ ಎಲ್ಲಾ ಕೆಲಸಗಳೂ ಬಹಳ ಅತ್ಯುತ್ತಮವಾಗಿ ನಡೆದಿವೆ ಎಂದು ಬರೆಯುತ್ತಾರೆ. ನೀವು ಕಾಗದದಲ್ಲಿ ಬಹಳ ಒಳ್ಳೆಯ ಹೆಸರನ್ನು ತೆಗೆದುಕೊಳ್ಳುತ್ತೀರಿ. ಇಂಥ ವಿಷಯದಲ್ಲಿ ನಿಮ್ಮನ್ನು ಮೀರಿಸುವವರು ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟುವುದಿಲ್ಲ. ಸ್ವಾಮಿ, ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ, ನಮ್ಮನ್ನೂ ಕೂಡ ನೀವು ಕಾನ್ಫಿಡೆನ್ಸ್‌ಗೆ ತೆಗೆದುಕೊಳ್ಳಿ, ನಾವೂ ನಿಮಗೆ ಸಲಹೆ ಕೊಡುತ್ತೇವೆ........

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮನ್ನೂ ನಾವು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಮ್ಮನ್ನೂ ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳುತ್ತೀರೆಂಬುದರಲ್ಲಿ ನನಗೆ ವಿಶ್ವಾಸವಿಲ್ಲ. ಸ್ವಾಮಿ, ಟ್ರಾನ್ಸ್‌ಪೋರ್ಟೇಷನ್‌ಗೆ ತಾವು ೧೦ ಕೋಟಿ ರೂ. ಕೇಳಿದ್ದೀರಿ. ಕಳೆದವರ್ಷ ಕೊಟ್ಟಿದ್ದ ಹಣದಲ್ಲಿ ಎಷ್ಟು ಹಣ ದುರುಪಯೋಗವಾಗಿದೆಯೆಂಬುದು ತಮಗೂ ಗೊತ್ತಿದೆ. ಅರ್ಬನ್ ನೀರಿಗೆ ೫ ಕೋಟಿ ರೂಪಾಯಿಗಳನ್ನು ಕೇಳಿದ್ದರೆ ಟ್ರಾನ್ಸ್‌ಪೋರ್ಟೇಷನ್‌ಗೆ ೧೦ ಕೋಟಿ ಕೇಳುತ್ತೀರಿ. ಮುಂದಿನ ವರ್ಷ ೨೦ ಕೋಟಿ ರೂಪಾಯಿಗಳನ್ನು ಕೇಳುತ್ತೀರಿ. ಕೇವಲ ಟ್ರಾನ್ಸ್‌ಪೋರ್ಟೇಷನ್‌ಗೇ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಾ ಹೋದರೆ ಅದರಿಂದ ಏನು ಪ್ರಯೋಜನ? ನಳ ಹಾಕಿ ಜನರಿಗೆ ನೀರು ಕೊಡಿ ನಿಮ್ಮ ಜನತಾಪಕ್ಷ ಅಧಿಕಾರಕ್ಕೆ ಬಂದಾಗ, ಬೊಮ್ಮಾಯಿಯವರು, ಹೆಗಡೆಯವರೂ ಅಧಿಕಾರಕ್ಕೆ ಬಂದಾಗ ಅವರಿಗೆ ಒಳ್ಳೆಯದಾಗಲಿ ಎಂದು ಜನ ಹೇಳುತ್ತಿದ್ದರು. ಅದಕ್ಕಾದರೂ ನೀವು ಒಳ್ಳೆಯ ಕೆಲಸ ಮಾಡಿ. ಬೊಮ್ಮಾಯಿಯವರು, ಹೆಗಡೆಯವರೂ ಒಳ್ಳೆಯ ಕೆಲಸ ಮಾಡಿದರು ಎಂದು ಜನ ನಿಮ್ಮನ್ನು ನೆನೆಸಿಕೊಳ್ಳುತ್ತಾರೆ. ನೀವು ಚೆನ್ನಾಗಿ ಕೆಲಸ ಮಾಡದಿದ್ದರೆ ಎಂಥಾ ಸರ್ಕಾರ ಬಂತು, ಇದು ಲಗೂನೆ ಹಾಳಾಗಿ ಹೋಗಲಿ ಎಂದು ಜನ ಹೇಳುತ್ತಾರೆ. ಆ ರೀತಿ ಹೇಳುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಟ್ರಾನ್ಸ್‌ಪೋರ್ಟೆಷನ್ ಆಫ್ ವಾಟರ್ ಮತ್ತು ಫಾಡರ್‌ಗೆ ಈ ಹೆಡ್‌ನಲ್ಲಿ ಕೇಂದ್ರ ಸರ್ಕಾರದವರು ಮೊದಲಿನಿಂದಲೂ ಹಣವನ್ನು ಕೊಡುತ್ತಿದ್ದಾರೆ. ಕೇವಲ ಟ್ರಾನ್ಸ್‌ಪೋರ್ಟೇಷನ್‌ಗೆ ಆಫ್ ವಾಟರ್‌ಗೆ ಹಣವನ್ನು ಕೊಟ್ಟರೆ ಏನೂ ಪ್ರಯೋಜನ ಆಗುವುದಿಲ್ಲ, ಮಿನಿ ವಾಟರ್‌ಸಪ್ಲೈಗೂ ಈ ಹಣವನ್ನು ಉಪಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರೆ ಅದರಿಂದ ಅನುಕೂಲವಾಗುತ್ತದೆಂದು ನಾವು ಹೇಳಿದೆವು, ಮತ್ತು ಫಾಡರ್ ಟ್ರಾನ್ಸ್‌ಪೋರ್ಟೇಷನ್‌ಗೆ, ಅದನ್ನು ಬೆಳೆಸುವುದಕ್ಕೆ ಹಾಗೂ ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಾಗ ಅವರು ಒಪ್ಪಲಿಲ್ಲ. ನಂತರ ಮಾನ್ಯ ಪ್ರಧಾನ ಮಂತ್ರಿಯವರು ಇಲ್ಲಿಗೆ ಬಂದಾಗ ನಾನು ಎಲ್ಲಾ ವಿಷಯವನ್ನೂ ಹೇಳಿದಾಗ ನಮ್ಮ ಅಭಿಪ್ರಾಯಕ್ಕೆ ಅವರು ಮನ್ನಣೆಯನ್ನು ಕೊಟ್ಟಿದ್ದಾರೆ. ಮಿನಿ ವಾಟರ್‌ಸಪ್ಲೈ ಬಗ್ಗೆ ನಾನು ಕೊಟ್ಟಿರತಕ್ಕ ಸಲಹೆ ಅವರ ಸಿಂಪತೆಟಿಕ್ ಕನ್ಸಿಡರೇಷನ್‌ನಲ್ಲಿದೆ..... ...

ಶ್ರೀ ಕೆ, ಹೆಚ್. ಪಾಟೀಲ್.—ಯೋಗ್ಯ ಸಲಹೆಗಳು ಯಾರವೇ ಆದರೂ ಅವುಗಳನ್ನು ಮಾನ್ಯ ಪ್ರಧಾನ ಮಂತ್ರಿಗಳ ಮುಂದಿಟ್ಟಾಗ ಅವರು ಅವುಗಳನ್ನು ಒಪ್ಪುತ್ತಾರೆಂಬುದು ನಿಮಗೆ ಈಗಲಾದರೂ ಗೊತ್ತಾಯಿತಲ್ಲ,

ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲದ ವಿಚಾರದಲ್ಲಿ ನಮ್ಮ ಸರ್ಕಾರ ಏನೇನು ಸಲಹೆಗಳನ್ನು ಕೊಟ್ಟಿದೆ ಅವೆಲ್ಲವನ್ನೂ ಬೇರೆ ರಾಜ್ಯ ಸರ್ಕಾರಗಳು ಒಪ್ಪಿವೆ, ಪ್ರಧಾನ ಮಂತ್ರಿಗಳ ಕಛೇರಿಯವರೂ ಕೂಡ ಒಪ್ಪಿದ್ದಾರೆ,

ಶ್ರೀ ಕೆ. ಹೆಚ್, ಪಾಟೀಲ್.—ನಿಮ್ಮ ಸಲಹೆಗೆ ನಮ್ಮಲ್ಲಿ ಸಮಾಧಾನಕರವಾಗಿರುವಷ್ಟು ಜನರು ಬೇರೆ ಎಲ್ಲೂ ಇಲ್ಲ ಎಲ್ಲ ಕಡೆಯೂ ಉತ್ತಮವಾದ ವಾತಾವರಣವಿಲ್ಲ. ಬೇರೆ ರಾಜ್ಯಗಳನ್ನು ನಮ್ಮ ರಾಜ್ಯಕ್ಕೆ ಹೋಲಿಸಬೇಡಿ. ಇಲ್ಲಿ ಸರ್ಕಾರ ಏನು ಮಾಡಿದರೂ ನಡೆಯುತ್ತದೆ. ಮಹಾರಾಷ್ಟ್ರದಲ್ಲಿ ಈ ರೀತಿ ನಡೆದುಕೊಂಡಲ್ಲಿ ನೇಣು ಹಾಕಿ ಬಿಡುತ್ತಾರೆ. ನಮ್ಮ ಜನರು ಅಷ್ಟು ಸೌಮ್ಯ ಸ್ವಭಾವದವರು “ ಕೋಣ ಈಯಿತು ಕೊಟ್ಟಿಗೆ ಒಳಗೆ ಕಟ್ಟಿರೋ ” ಎಂದು ಹೇಳಿದರೆ ಹಿಂದು ಮುಂದು ನೋಡದ ಜನ ನಮ್ಮವರು. ಏತಕೆಂದರೆ ನಮ್ಮ ಮಂತ್ರಿಗಳು ಹೇಳಿದರು ಎಂದು ಹೇಳುತ್ತಾರೆ. ಈ ರೀತಿ ಸಭ್ಯ ಜನರು ನಮ್ಮ ಜನರು ಏತಕ್ಕೆಂದರೆ ನಮ್ಮ ಕರ್ನಾಟಕ ಪರಂಪರೆ ಅಂಥದ್ದು. ಅದಕ್ಕಾಗಿ ಕರ್ನಾಟಕಕ್ಕೆ ಶ್ರೇಷ್ಠವಾದ ಸ್ಥಾನವನ್ನು ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಕರ್ನಾಟಕದ ಜನರನ್ನು ಕೋಣನಿಗೆ ಹೋಲಿಸಿ, ಕೋಣನಿಗೂ ಹೆರಿಗೆ ಮಾಡತಕ್ಕಂಥ ಜನರೇ ನಿಮ್ಮ ಲೆಕ್ಕದಲ್ಲಿ ?

ಶ್ರೀ ಕೆ. ಎಚ್ ಪಾಟೀಲ್.—ಏನಾದರೂ ತಿಳಿದುಕೊಳ್ಳಿ, ಮಿನಿ ಟ್ಯಾಂಕ್‌ಗಳಿಗೆ ಹಣವನ್ನು ಕೊಡುವ ಬಗ್ಗೆ ಹೇಳಿದಿರಿ. ಹೊಂಬಳ್ಳ ಮತ್ತು ಚಿಕ್ಕಂದಿ ಎಂಬ ಎರಡು ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿ ೫ ವರ್ಷಗಳಾಯಿತು. ಐದು ವರ್ಷಗಳ ಹಿಂದೆ ಈ ಯೋಜನೆಗೆ ಫೌಂಡೇಷನ್

ಹಾಕಿ ಅರ್ಧಂಬರ್ಧ ಕೆಲಸವಾಗಿದೆ. ಉಳಿದ ಕೆಲಸ ಯಾವುದೂ ಆಗಿಲ್ಲ, ೨. ೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಪೂರ್ತಿಯಾಗುತ್ತದೆ. ಅದಕ್ಕೆ ಹಣವನ್ನು ಖರ್ಚು ಮಾಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಬೇಕಾದಷ್ಟು ಹಣವನ್ನು ಕೊಡುತ್ತೀರಿ. ಏತಕ್ಕೆಂದರೆ ಏನು ಬೇಕಾದರೂ ಕರಾಮತ್ ಮಾಡಲಿಕ್ಕೆ ಅಧಿಕಾರಿಗಳಿಗೆ ಆಗುತ್ತದೆ, ಇದರಲ್ಲಿ ಬೋರ್‌ವೆಲ್ ಪಂಪ್‌ಗಳಿಗೆ ನೂರಕ್ಕೆ ನೂರರಷ್ಟು ಹಣವನ್ನು ಹಂಚಿದ್ದೇವೆಂದು ಹೇಳುತ್ತಾರೆ. ಮಾನ್ಯ ಬೊಮ್ಮಾಯಿಯವರೂ ಕೂಡ ಸ್ಟೇಟ್‌ಮೆಂಟ್ ಮಾಡುತ್ತಾ ೫೬ ಕೋಟಿ ರೂಪಾಯಿಗಳನ್ನು ನೀರಿನ ಸಲುವಾಗಿ ಕಳೆದ ವರ್ಷ ಖರ್ಚು ಮಾಡಿದ್ದೇವೆಂದು ಹೇಳಿದರು. ಈ ವರ್ಷ ಬೇಡಿಕೆ ಎಷ್ಟೆಂದರೆ ೫೬ ಕೋಟಿ ರೂಪಾಯಿಗಳೇ ಆಗಿರುತ್ತದೆ. ಅದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಮಾಡಲು ಸಾಧ್ಯವಾಗಲಿಲ್ಲ. ಊರುಗಳು ಅಷ್ಟೇ ಇದೆ, ಜನ ಸಂಖ್ಯೆಯೂ ಅಷ್ಟೇ ಇದೆ. ಎಲ್ಲಾ ಹಳ್ಳಿಗಳಿಗೂ ಬೋರ್‌ವೆಲ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿದ ಮೇಲೆ ಮತ್ತೆ ಏತಕ್ಕೆ ೫೬ ಕೋಟಿ ರೂಪಾಯಿಗಳು ಬೇಕು. ಇದರಿಂದ ಏನು ತಿಳಿಯುತ್ತದೆಂದರೆ ನೀವು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳಲ್ಲಿ ಏನೋ ಲೋಪದೋಷವಿದೆ ಎಂದು ಹೇಳಬೇಕಾಗುತ್ತದೆ. ಹೊಸದಾಗಿ ಬೋರ್‌ವೆಲ್‌ಗಳನ್ನು ಹಾಕುತ್ತೇವೆಂದು ಹೇಳಿದ್ದರೆ ನಮ್ಮದೇನು ಅಭ್ಯಂತರವಿರಲಿಲ್ಲ. ಮಾನ್ಯ ಬೊಮ್ಮಾಯಿಯವರಿಗೆ ವೈಯಕ್ತಿಕವಾಗಿ ಹೇಳುತ್ತೇನೆ. ಏತಕ್ಕೆಂದರೆ ಅವರು ನಮ್ಮ ಕ್ಷೇತ್ರದಿಂದ ಬಂದಿರತಕ್ಕಂಥವರು. ಹೊಸ ಹೊಸ ಯೋಜನೆಗಳನ್ನು ತರುತ್ತಿದ್ದೇವೆಂದು ಬೇಡಿಕೆಯನ್ನಿಟ್ಟಿದ್ದರೆ ನಮ್ಮದೇನು ಆಪಾದನೆ ಇರುತ್ತಿರಲಿಲ್ಲ. ಇಂಥ ಕೆಲಸ ಯಾವುದನ್ನು ನೀವು ಮಾಡಿಲ್ಲ.

ಮಾನ್ಯ ಅಧ್ಯಕ್ಷರೇ ಇನ್ನು ಅಗ್ರಿಕಲ್ಚರ್ ಬಗ್ಗೆ ಹೇಳುವುದಾದರೆ ತಾವೂ ಕೂಡ ವ್ಯವಸಾಯ ಕ್ಷೇತ್ರದಲ್ಲಿ ದುಡಿದವರು, ಸಹಕಾರಿ ಕ್ಷೇತ್ರದಲ್ಲಿ ದುಡಿದವರು ಈವೊತ್ತು ವ್ಯವಸಾಯ ಎತ್ತ ಕಡೆ ಸಾಗಿದೆ ಎಂದು ನಾನು ಹೇಳಬೇಕಾಗಿಲ್ಲ. ಮಾನ್ಯ ದೇಶಪಾಂಡೆಯವರು ಹುರುಪಿನ ಸಚಿವರಾಗಿದ್ದಾರೆ. ಮಾನ್ಯ ಬೊಮ್ಮಾಯಿಯವರಿಗೆ ಹೇಳುತ್ತೇನೆ. ಮಾನ್ಯ ಗುಂಡೂರಾಯರ ಕಾಲದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಆ ಸಮಿತಿಗೆ ಮಾನ್ಯ ಬೊಮ್ಮಾಯಿಯವರೇ ಅಧ್ಯಕ್ಷರಾಗಿ ಪೂರ್ತಿ ಅಡ್ಡಾಡಿ ಬಂದಿರುತ್ತಾರೆ. ಏನೇನು ಬರಗಾಲ ಪರಿಸ್ಥಿತಿ ಇದೆ ಎನ್ನುವುದನ್ನು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಮಾನ್ಯ ಬೊಮ್ಮಾಯಿಯವರಿಗೆ ಹೇಳುತ್ತೇನೆ, ಅವರೇ ತಮ್ಮ ಆತ್ಮ ನಿರೀಕ್ಷೆ ಮಾಡಿಕೊಳ್ಳಲಿ, ಅವರು ಕೊಟ್ಟಂಥ ವರದಿಯಲ್ಲಿ ಒಂದು ಪರ್ಸೆಂಟ್ ಆದರೂ ಅಮಲಿನಲ್ಲಿ ಮಾಡಿದ್ದಾರೆಯೇ ಎಂದು ಕೇಳುತ್ತೇನೆ. ಅಥವಾ ಆ ವರದಿಯನ್ನು ಕಾಂಗ್ರೆಸ್‌ನವರಿಗೋಸ್ಕರ ಮಾಡಿದ್ದರೆ ? ಇದನ್ನು ನಿಮಗೆ ಬಿಡುತ್ತೇನೆ. ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ಲ್ಯಾಂಡ್ ರೆಕ್ಲಮೇಷನ್ ಮಾಡಬೇಕೆಂದು ಡಾ. ಎನ್.ಸಿ. ಪಾಟೀಲ್ ಅವರ ಕಮಿಟಿಯನ್ನು ನೇಮಿಸಿದಿರಿ. ಅವರು ವರದಿಯನ್ನು ಕೊಟ್ಟರು. ಆ ವರದಿ ಎಲ್ಲಿದೆ ? ಅದು ತಮ್ಮ ಮನೆಯ ಡಸ್ಟ್‌ಬಿನ್‌ನಲ್ಲಿ ಇದೆಯೆ ? ಅಗ್ರಿಕಲ್ಚರಲ್ ಮಿನಿಸ್ಟರ್ ಹತ್ತಿರ ಇದೆಯೆ ? ಅದನ್ನೇನಾದರೂ ಹುಡುಕುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಾ, ಏತಕ್ಕಾಗಿ ಈ ಕೆಲಸ ಮಾಡಿದಿರಿ ? ಅನೇಕ ವರ್ಷಗಳಿಂದ ಕಷ್ಟಪಟ್ಟು ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಾಡಬೇಕೆಂದು ಮಾಡಿದೆವು. ಎರಡು ಅಗ್ರಿಕಲ್ಚರಲ್ ಯೂನಿವರ್ಸಿಟಿಗಳು ಆಗಬೇಕೆಂದು ಹೋರಾಡಿದೆವು. ಏಕೆಂದರೆ ಭೂಮಿಗಳ ಪರಿಸ್ಥಿತಿ ಬೇರೆ ಬೇರೆ ಇರುತ್ತದೆ ಎಲ್ಲಾ ಭೂಮಿಯೂ ಒಂದೇ ರೀತಿ ಇರುವುದಿಲ್ಲ. ಈಗ ನೀವು ಆ ಯೂನಿವರ್ಸಿಟಿಯಿಂದ ಏನು ಕೆಲಸ ಮಾಡಿಸುವುದಕ್ಕೆ ಹತ್ತಿದ್ದೀರಿ ? ರೈತರು ಎಣ್ಣೆ ಕಾಳುಗಳನ್ನು ಬೆಳೆಯುವುದಕ್ಕೆ ಮುಂದೆ ಬಂದರೆ ಎಣ್ಣೆಕಾಳುಗಳನ್ನು ಪೂರೈಕೆ ಮಾಡುವ ಶಕ್ತಿ ಸರ್ಕಾರಕ್ಕೆ ಇಲ್ಲ. ಸೀಡ್ ಕಾರ್ಪೊರೇಷನ್ ಎಂದು ಮಾಡಿದ್ದೀರಿ. ಅವರು ಹೇಳುತ್ತಾರೆ ಬೀಜ ಇಲ್ಲ ಎಂದು. ಏತಕ್ಕಾಗಿ ಆ ಅಧಿಕಾರಿಗಳನ್ನು ಇಟ್ಟಿದ್ದೀರಿ ? ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಜನರು ಬೀಜ ಖರೀದಿ ಮಾಡುತ್ತೇವೆ ಅಂದಾಗ ಬೀಜ ಇಲ್ಲವೆಂದರೆ ಹೇಗೆ ? ನೀವು ಈ ರೀತಿ ಸರ್ಕಾರದ ಸಂಸ್ಥೆಯನ್ನು ಜನತೆಗೆ ವಿರುದ್ಧವಾಗಿ ಉಪಯೋಗಿಸುವುದು ಸಮರ್ಪಕವೇ ಎಂದು ವಿಚಾರ ಮಾಡಲಿಕ್ಕೆ ನಿಮಗೆ ಬಿಡುತ್ತೇನೆ. ಶೇಂಗಾ ಬೆಳೆ ೭೬ ಪರ್ಸೆಂಟ್ ಆಗಿದೆ ಎಂದು ಹೇಳಿದಿರಿ. ಯಾವ ಅಧಿಕಾರಿ ನಿಮಗೆ ಉತ್ತರಿಸಿದ. ಯಾವ ಅಧಿಕಾರಿ ನಿಮಗೆ ಅಂಕಿ ಸಂಖ್ಯೆಗಳನ್ನು ಕೊಟ್ಟ ? ಹಣ ಇಲ್ಲದ್ದಕ್ಕೆ ಮತ್ತು ಬೀಜ ಇಲ್ಲದೆ ಅನೇಕ ರೈತರು ಶೇಂಗಾ ಬಿತ್ತ ಬೇಕಾದವರು ಬಿತ್ತಲಿಲ್ಲ. ಕೇಂದ್ರ ಸರ್ಕಾರದವರು ಎಣ್ಣೆಕಾಳು ಯೋಜನೆಯನ್ನು ಪುಷ್ಟೀಕರಿಸಿ ಮಾತನಾಡುತ್ತಾರೆ. ಅವರು ರೊಕ್ಕ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ಇವರನ್ನು ಕೇಳಿದರೆ ಇಲ್ಲ ಅನ್ನುತ್ತಾರೆ. ನೀವು ಖರ್ಚು ಮಾಡಿ ಮತ್ತೆ ತೆಗೆದುಕೊಳ್ಳಿ. ನಿಮಗೆ ಖರ್ಚು ಮಾಡುವುದಕ್ಕಾಗುವುದಿಲ್ಲ ಅವರೂ ಕೊಡುವ ಹಾಗೆಯೂ

ಇಲ್ಲ. ಕೇಂದ್ರ ಸರ್ಕಾರದ ಹಣ ಕೈಗೆ ಬರಬೇಕಾದರೆ ಹಿಂದಿನ ಲೆಕ್ಕ ಕೊಡಬೇಕು. ಅದು ಆಗದ ಹೊರತು ಹಣ ದೊರೆಯುವ ಹಾಗೆ ಇಲ್ಲ. ಆದಕ್ಕಾಗಿ ಮಾನ್ಯ ಮಂತ್ರಿಗಳಲ್ಲಿ ವಿನಯ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ, ವ್ಯವಸಾಯದ ಬಗ್ಗೆ ನಿಮ್ಮ ದೃಷ್ಟಿಕೋನ ಬದಲಾವಣೆ ಆಗಬೇಕು. ವ್ಯವಸಾಯ ಸಚಿವರು, ಸಹಕಾರ ಸಚಿವರು, ಕಂದಾಯ ಸಚಿವರು ಮತ್ತು ಆರ್ಥಿಕ ಸಚಿವರು ಈ ನಾಲ್ಕೂ ಜನರ ಒಂದು ಕಮಿಟಿ ಮಾಡಿ. ಅದಕ್ಕೆ ವಿರೋಧ ಪಕ್ಷದ ನಾಯಕರನ್ನು ಸೇರಿಸಿಕೊಳ್ಳಿ ಎಂದು ಹೇಳಿದರೆ ನೀವು ಸೇರಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅವರು ಒಬ್ಬರು ಏನು ಮಾಡುತ್ತಾರೆಂಬ ಸ್ಥಿತಿಗೆ ಬಂದಿದ್ದೀರಿ. ನೀವು ಎಲ್ಲವನ್ನೂ ಆಲೋಚನೆ ಮಾಡಿ ರೈತರಿಗೆ ಸರಿಯಾದ ಅನುಕೂಲ ಮಾಡಿ ಕೊಡಿ. ಅದಕ್ಕೆ ನಮ್ಮನ್ನು ಗಮನದಲ್ಲಿಟ್ಟುಕೊಳ್ಳಬೇಡಿ. ನಿಮ್ಮ ಕಡಪಟ್ಟಿಯವರನ್ನು, ಡಾ.ಹುಂಬರವಾಡಿಯವರನ್ನು ಕೇಳಿ. ಎದುರಿಗೆ ಕೇಳುವುದಕ್ಕೆ ಒಂದು ಕಮಿಟಿ ಮಾಡಿ. ನಿಜವಾಗಿ ನೀವು ಅಂಕಿ ಸಂಖ್ಯೆಯನ್ನು ಕಲೆ ಹಾಕಿದರೆ ಏನು ತಪ್ಪು ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ಜನರಿಗೆ ಮೋಸ ಮಾಡಿದರೆ ದೇವರಿಗೆ ಹೇಗೆ ಮೋಸ ಮಾಡುವುದಕ್ಕೆ ಸಾಧ್ಯವಿದೆ ? ರೈತರ ಪ್ರತಿನಿಧಿಯಾಗಿ ಬಂದು ರೈತನ ಹಿತವನ್ನು ಕಾಪಾಡುವುದಕ್ಕೆ ಮತ್ತು ನಿಜವಾಗಿ ಕೈಲಾಗದವನ ಕಷ್ಟವನ್ನು ನಿವಾರಣೆ ಮಾಡಬೇಕೆಂಬ ಭಾವನೆ ಇನ್ನು ಮುಂದಾದರೂ ಬರುತ್ತದೆಯೋ ? ಅದು ಬರಲಿ ಎಂದು ಹಾರೈಸುತ್ತೇನೆ.

ಇನ್ನು ಮಿನಿ ಕಿಟ್ಸ್ ಅನ್ನು ಬಡವರ ಸಲುವಾಗಿ ಕೊಡುತ್ತಾರೆ, ಕೊಡಲಿ. ಅದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಅದನ್ನು ಬರಗಾಲ ಪ್ರದೇಶದಲ್ಲಿ ಹಾಕಿ ಏನು ಪ್ರಯೋಜನ ? ಮಳೆ ಬಂದಿಲ್ಲ, ಬೆಳೆ ಬರಲಿಲ್ಲವೆಂದರೆ ದ್ರಾಕ್ಷಿ, ಗೋಡಂಬಿ ತಿನ್ನು ಎಂದರೆ ಹೇಗೆ ? ಮಿನಿ ಕಿಟ್ಸ್ ಅನ್ನು ಯಾವಾಗ ಕೊಡಬೇಕೆಂದರೆ, ಉತ್ತಮ ಫಸಲು ಬರುವಾಗ ಹರಿಜನ ಗಿರಿಜನರಿಗೆ, ಬಡವರಿಗೆ ಕೊಡಿ. ಆದರೆ ಬರೀ ಮಿನಿ ಕಿಟ್ಸ್ ಕೊಡುವುದಲ್ಲ. ಜೊತೆಗೆ ಬೀಜವನ್ನು ಕೊಡಬೇಕು. ಹೊಲಕ್ಕೆ ನೀರು ಹಾಯಿಸುವುದಕ್ಕೆ ಅವಕಾಶ ಆಗಬೇಕು. ಇವತ್ತೇನೋ ಸ್ವಲ್ಪ ಮಳೆ ಬಂದು ನಿಮ್ಮ ಶ್ರಮ ಸ್ವಲ್ಪ ಕಡಿಮೆ ಆಗಿದೆ. ಮಳೆ ಬಂದಿದೆ ಎಂದು ಹೇಳುತ್ತಿಲ್ಲ. ಇಲ್ಲಿಯವರೆಗೆ ಮಳೆ ಇಲ್ಲದ ವರದಿ ಇದೆ. ಕೇಂದ್ರ ತಂಡದವರು ಈಗಲಾದರೂ ಮಳೆ ಆಗಿದೆ ಎಂದು ಹೇಳುತ್ತಾರೋ ಇಲ್ಲವೋ ಗೊತ್ತಿಲ್ಲ. ಪ್ಲಾಂಟ್ ಪ್ರೊಟೆಕ್ಷನ್ ಸಲುವಾಗಿ ಸಣ್ಣ ಅಮೌಂಟ್ ಕೇಳಿದ್ದೀರಿ. ನಿಮ್ಮಲ್ಲಿ ನಿಜವಾಗಿ ಖರ್ಚು ಮಾಡುವುದಕ್ಕೆ ಹಣ ಇದೆ.

೫-೦೦ ಪಿ. ಎಂ.

ಸ್ವಲ್ಪ ದಿವಸ ಜೀವರಾಜ ಆಳ್ವ ಅವರ ಕಾರ್ಯಗಳನ್ನು ಹಿಂದಿಕ್ಕೆ ಸರಿಸಿ ಛಲೋ ಕೆಲಸಗಳನ್ನು ತೆಗೆದು ಕೊಳ್ಳಿ. ಛಲೋ ಕೆಲಸ ಮಾಡುವಾಗ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಕೆಲಸ ಚೆನ್ನಾಗಿಲ್ಲವೇ ?

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಜೀವರಾಜ್ ಆಳ್ವ ಅವರಿಗೆ ಆ ರೀತಿ ಸಲಹೆ ಕೊಡಬೇಡಿ.

ಶ್ರೀ ಕೆ. ಎಚ್. ಪಾಟೀಲ್.—ಆ ದೃಷ್ಟಿಯಿಂದ ನೋಡಿದರೆ ಪ್ಲಾಂಟ್ ಪ್ರೊಟೆಕ್ಷನ್ ಎಲ್ಲಿದೆ ? ಪ್ಲಾಂಟೇ ಇಲ್ಲ ಪ್ರೊಟೆಕ್ಷನ್ ಏನು ಮಾಡುವುದಿದೆ ? ಅದಕ್ಕಾಗಿ ಖರ್ಚು ಮಾಡುವ ಅತ್ಯಲ್ಪ ಹಣವನ್ನು ಸಾಮಾನ್ಯ ಜನರಿಗೆ ಉಪಯೋಗವಾಗುವಂಥ, ಹರಿಜನ ಗಿರಿಜನ ಕೇರಿಯಲ್ಲಿರುವಂಥ ಬಡವರು, ಲಂಬಾಣಿ ಜನರು ಮತ್ತು ಹಿಂದುಳಿದ ಜನರಿಗೆ ಉಪಯೋಗುವಂಥ, ಹೊಲಸು ನೀರನ್ನು ಕುಡಿಯುವ ಜನರಿಗೆ ಉತ್ತಮ ಸೌಕರ್ಯ ಕೊಡುವಂಥ ಕೆಲಸ ಮಾಡಿದರೆ ಜನ ಶ್ಲಾಘನೆ ಮಾಡುತ್ತಾರೆ. ಇನ್ನೊಂದು ಸಾಯಿಲ್ ಕನ್‌ಸರ್ವೇಷನ್, ಇದು ಬಹಳ ಉತ್ತಮವಾದ ಕಾರ್ಯ. ಬರ ಇದ್ದಾಗ ಬೇರೆ ಕೆಲಸ ಹಚ್ಚುವುದಕ್ಕಿಂತ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡಿದರೆ ಪರ್ಮನೆಂಟ್ ರಿಲೀಫ್ ಆಗುತ್ತದೆ. ಹೊಲದ ಮಾಲೀಕನಿಗೂ ಅನುಕೂಲವಾಗುತ್ತದೆ. ಆದ್ದರಿಂದ ಇದು ಉತ್ತಮವಾದ ಕೆಲಸ. ಇದಕ್ಕಾಗಿ ೭ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದು ಒಂದು ತಾಲ್ಲೂಕಿಗೆ ಸಾಲುವುದಿಲ್ಲ. ಯಾವ-ಯಾವುದು ಅನಾವಶ್ಯಕವೋ ಅದನ್ನು ಕಡಿಮೆ ಮಾಡಿ ಇದಕ್ಕೆ ಹೆಚ್ಚು ಹಣ ಕೇಳಿ. ಈ ಏಳು ಕೋಟಿ ರೂಪಾಯಿಗಳು ರಾಯಚೂರು ಜಿಲ್ಲೆಗೂ ಕೂಡ ಸಾಲುವುದಿಲ್ಲ. ಬರೀ ಒಂದು ಕೊಪ್ಪಳ ತಾಲ್ಲೂಕಿಗೆ

ಆಗುತ್ತದೆ. ಲಕ್ಷಗಟ್ಟಲೆ ಜನರು ಕೂಲಿ ಬೇಕು ಎಂದರೆ ಇದು ಎಷ್ಟು ದಿವಸ ಸಾಲುತ್ತದೆ ? ೧೫ ದಿವಸ ಅಥವಾ ೩೦-೩೫ ದಿವಸಕ್ಕೆ ಈ ಹಣ ಮುಗಿಯುತ್ತದೆ. ಆದ್ದರಿಂದ ಸಾಯಿಲ್ ಕನ್‌ಸರ್ವೇಷನ್‌ಗೆ ಬಹಳ ಆಗದಿದ್ದರೂ ಈಗಿರುವುದಕ್ಕೆ ಡಬ್ಬಲ್ ಅಮೌಂಟಾದರೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಬ್ಲಿಕ್ ಹೆಲ್ತ್. ಇದಕ್ಕೆ ಇರತಕ್ಕ ಸ್ಕೀಮುಗಳನ್ನೆಲ್ಲಾ ಕೈಬಿಟ್ಟರು. ರಾಚಯ್ಯನವರಿಗೂ ಹೇಳಿದೆ ತಿಮ್ಮೇಗೌಡರು ಇದ್ದಾಗಲೂ ಹೇಳಿದೆ. ಒಬ್ಬರೂ ಒನ್ ಥರ್ಡ್ ಸ್ಕೀಂ ಬಗ್ಗೆ ಕಣ್ಣು ತೆಗೆಯಲಿಲ್ಲ. ಇಲ್ಲಿಯವರೆಗೆ ಒಂದು ಸ್ಕೀಮಿನ ಹಣವನ್ನೂ ತೆಗೆದುಕೊಳ್ಳಲಿಲ್ಲ. ಕೇಂದ್ರಸರ್ಕಾರದವರು ಕೊಡಲಿಲ್ಲ ಎಂದು ಹೇಳುತ್ತಾರೆ. ನಾಲ್ಕು ವರ್ಷದಿಂದ ನಮ್ಮ ಊರಿಗೆ ೧/೩ ಸ್ಕೀಮಿನ ಪ್ರಕಾರ ಮಂಜೂರು ಮಾಡಬೇಕೆಂದು ಕೇಳಿಕೊಂಡಾಗ ಜೋರಾಗಿ ಮಂಜೂರು ಮಾಡಿದರು. ಕೇಂದ್ರ ಸರ್ಕಾರದವರು, ನಾವು ಮತ್ತು ಇವರು ಆರು ಆರು ಲಕ್ಷ ಕೊಡಬೇಕೆಂದು ಸ್ಕೀಂ ಇದೆ ಆದರೆ ಇವರು ಮೂರು ಲಕ್ಷ ಮಾತ್ರ ಕೊಟ್ಟಿದ್ದಾರೆ. ನೀವು ಇದಕ್ಕೆ ಯಾರೋ ಒಬ್ಬರನ್ನು ನೇಮಿಸುತ್ತೀರಿ. ಯಾರಾದರೂ ಬಂದು ಸ್ಕೀಂ ತಂದು ಕೊಟ್ಟರೆ ನೋಡುತ್ತಾರೆಯೇ ವಿನಹ ಸ್ಕೀಂ ನೋಡಿ ಮಂತ್ರಿಗಳಿಗೆ ಬುದ್ಧಿ ಹೇಳುವ ಅಧಿಕಾರಿಗಳು ಇಲ್ಲ. ನೀವು ಈ ಪರಿಸ್ಥಿತಿಯನ್ನು ಬದಲಾವಣೆ ಮಾಡಬೇಕು. ಆದಿಲ್ಲದೆ ನೀವು ಹಾರಳಿಕೊಪ್ಪಿಯವರ ಅಳಿಯ ಆದರೂ ಏನು ಕೆಲಸ ಆಗುತ್ತದೆ ? ಅವರು ಮಾಡಿಕೊಂಡು ಬಂದ ಶ್ರಮವೆಲ್ಲಾ ವ್ಯರ್ಥವಾಗುತ್ತದೆ ಎಂದು ಹೇಳುತ್ತೇನೆ. ನೀವು ಒಳ್ಳೆ ಕೆಲಸ ಮಾಡಿ ಮಿನಿಸ್ಟ್ರಿ ಬಿಟ್ಟರೂ ನಿಮ್ಮನ್ನು ಮಿನಿಸ್ಟರ್ ತರಹ ನಾವು ನೋಡುತ್ತೇವೆ. ಮಿನಿಸ್ಟರ್‌ರಾಗಿದ್ದಾಗ ಇದ್ದುದಕ್ಕಿಂತ ಕೆ. ಎಚ್. ಪಾಟೀಲರು ಕಡಿಮೆ ಇದ್ದಾರೆ ಎಂದು ಅನ್ನಿಸುತ್ತದೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಏನಿಲ್ಲ. ನಿಮ್ಮನ್ನು ಹಾಗೆಯೇ ನೋಡುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈಗಿರುವಷ್ಟು ಸಂತೋಷ ಆಗ ಇರಲಿಲ್ಲ. ಈಗ ಬಹಳ ಸಂತೋಷವಾಗಿದೆ. ನಿಮ್ಮನ್ನೂ ಅದೇರೀತಿ ನೋಡುತ್ತೇವೆ. ಯಾವುದಕ್ಕೋ ಹೆದರಿ ನೀವು ಕೆಲಸ ಮಾಡಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸ್ಪೆಷಲ್ ನ್ಯೂಟ್ರಿಷನ್ ಫಂಡ್ "ತಿನ್ನುವುದಕ್ಕೆ ಕೂಳಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು" ಎಂದ ಹಾಗೆ ಕೂಳು ಕೊಡಿ ಎಂದರೆ ನ್ಯೂಟ್ರಿಷನ್ ಕೊಡುತ್ತೇನೆ ಎಂದು ಹೇಳುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಮಕ್ಕಳಿಗೆ ಕೊಡುವುದು.

ಶ್ರೀ ಕೆ. ಹೆಚ್. ಪಾಟೀಲ್.—ಬರಗಾಲದ ಹೆಸರಿನಲ್ಲಿ ಅದನ್ನು ತರಬೇಡಿ. ಬೇರೆ ಅನೇಕ ಸ್ಕೀಮುಗಳಿವೆ. ಹಸಿರು ಸೀರೆ ಬಿಳಿ ಕುಪ್ಪಸ ಕೊಡುವುದನ್ನು ನಮ್ಮ ಸ್ಕೀಂನಲ್ಲಿ ತಂದಿರಾ ? ಹೊಟ್ಟೆ ತುಂಬಿದ ಸ್ಕೀಂ...

ಶ್ರೀ ಎಸ್. ಆರ್. ಬೊಮ್ಮಾಯಿ,—ಗೌರ್ನಮೆಂಟ್ ಆಫ್ ಇಂಡಿಯಾದವರು, ಯಾವ ಯಾವ ಹೆಡ್ಸ್‌ನಲ್ಲಿ ಹಣ ಕೊಡುತ್ತಾರೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಬಡಜನರು ಊಟ ತಿಂಡಿ ಇಲ್ಲದೆ ಹಾಳಾಗುತ್ತಿದ್ದಾರೆ. ಆರೋಗ್ಯ ಉಳಿಸುವ ಸಲುವಾಗಿ ಇದನ್ನು ತೆಗೆದುಕೊಂಡಿದ್ದೇವೆ. ಅದನ್ನು ನಾವು ಹೇಳಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮವರೂ ಅದೇ ತರಹ ಜನ. ಅವರೂ ಸಹ ಏರ್ ಕಂಡೀಷನ್ ರೂಮ್‌ನಲ್ಲಿ ಕುಳಿತುಕೊಂಡು ಪ್ಲಾನ್ ಮಾಡುವವರು. ಈ ಅಂಗಿ ನನಗೆ ಬರುವುದಿಲ್ಲ ಎಂದರೆ ತೆಳ್ಳಗಾಗಿರಿ ಎಂದು ಹೇಳುತ್ತಾರೆ. ಅದಕ್ಕೆ ಎಷ್ಟು ವರ್ಷ ಬೇಕಾಗುತ್ತದೆಯೋ ? ನೀವು ಆ ರೀತಿ ಮಾಡಬೇಡಿ. ನೀವು ನಿಮ್ಮ ಸ್ಕೀಂ ಮಾಡಿಕೊಡಿ ಎಂದು ಕೇಳಿ. ಕೊಡದಿದ್ದರೆ ನಮ್ಮ ಸಹಾಯ ಕೇಳಿ. ಅದು ಬಿಟ್ಟು ಈ ರೀತಿ ಮಾಡಿ ನಮ್ಮನ್ನೂ ಮುಳುಗಿಸುತ್ತೀರಿ, ನೀವೂ ಮುಳುಗುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೮೬ನೇ ಇಸವಿಯಲ್ಲಿ ಬರಗಾಲದ ವಿಚಾರದಲ್ಲಿ ಹೇಳುವಾಗ ಹೊಸ ಯೋಜನೆ ಬಗ್ಗೆ ಹೇಳಿದ್ದೇನೆ, ಗೈಡ್‌ಲೈನ್ಸ್ ಬದಲಾವಣೆ ಆಗಬೇಕು, ಫ್ಯಾಮಿನ್ ಕೋಡ್ ಬದಲಾವಣೆ ಆಗಬೇಕು ಎಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್ —ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಫ್ಯಾಮಿನ್ ಕೋಡ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ನಾನು ಆ ವಿಚಾರವನ್ನು ಕೊನೆಯಲ್ಲಿ ಹೇಳೋಣವೆಂದಿದ್ದೆ. ಆದರೆ ಈಗ ಅವರು ನೆನಪು ಮಾಡಿದ ಮೇಲೆ ಈಗಲೇ ಅದರ ಬಗ್ಗೆ ಹೇಳುತ್ತೇನೆ.

ಫ್ಯಾಮಿನ್ ಕೋಡನ್ನು ದುರಸ್ತಿ ಮಾಡಿ ಅಂತ ನಿಮ್ಮ ಹತ್ತಿರ ಹೇಳಿ ಎಷ್ಟು ದಿವಸಗಳಾದವು? ಹೋದ ಸಾರಿ ಹೇಳಿದಾಗ ೧೫ ದಿವಸಗಳೊಳಗೆ ಮಾಡುತ್ತೇವೆಂದು ಹೇಳಿದಿರಿ. ಆದರೆ ಎಷ್ಟು ೧೫ ದಿವಸಗಳು ಹೋದವೋ ಗೊತ್ತಿಲ್ಲ ನೀವು ಮಾಡುವಂತಹ ಕೆಲಸವನ್ನೇ ನೀವೂ ಮಾಡಿಲ್ಲ. ಇದಕ್ಕೂ ಶ್ರೀಮಾನ್ ರಾಜೀವ್‌ಗಾಂಧಿಯವನ್ನು ಒಯ್ಯುತ್ತೀರಾ? ನಿಮ್ಮ ಫ್ಯಾಮಿನ್ ಕೋಡನ್ನು ಮೊದಲು ಸರಿಪಡಿಸಿ. ಅದು ಕೇಂದ್ರದವರಿಗೂ ಗೊತ್ತಿದೆಯೋ ಇಲ್ಲವೋ ತಿಳಿಯದು. ನಿಮ್ಮ ವರದಿಯನ್ನು ನೋಡಿದರೆ ಕರ್ನಾಟಕ ದಲ್ಲಿ ಬರಗಾಲ ಇಲ್ಲವೇ ಇಲ್ಲ. ಏಕೆಂದರೆ ಬರಗಾಲ ಯಾವಾಗ ಬರುತ್ತದೆಂಬುದಾಗಿ ಅವಕಾಶವನ್ನು ನೋಡುತ್ತಿದ್ದೀರಾ? ೪ ವರ್ಷಗಳಿಂದ ಸತತವಾಗಿ ಬರಗಾಲ ಇದೆ ಎಂದು ಹೇಳುವಂತಹ ಮಂತ್ರಿಗಳ ಉವಾಚ ಯಾವ ರೀತಿ ಇರಬೇಕು. ಆ ಉವಾಚ ಇನ್ನೂ ತನಕ ಬರಲಿಲ್ಲ. ಇಷ್ಟಾದರೂ ನೀವು ರೈತರ ಕುತ್ತಿಗೆಯನ್ನು ಕುಯ್ಯುವುದಕ್ಕೆ ಹೋಗುವವರಲ್ಲ ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ. ರೈತನನ್ನು ಉಳಿಸಬೇಕೆಂಬ ಆಸಕ್ತಿ ಇಲ್ಲಿಯ ತನಕ ನಿಮಗೆ ಬಂದಿದ್ದಿಲ್ಲ. ರೈತನ ಮೇಲೆ ಇರುವಂತಹ ಸಾಲವನ್ನು ಸೂಟು ಬಿಡಬೇಕು. ಆ ಕೆಲಸವನ್ನು ಇಲ್ಲಿಯ ತನಕ ಮಾಡಿಲ್ಲ. ಆದರೆ ಯಾವುದೇ ಸೂಟು ಬಿಡುವುದಿಲ್ಲ ಬರಗಾಲ ಇದ್ದರೆ ಕೇವಲ ಮುಂದಕ್ಕೆ ಹಾಕುತ್ತೇವೆ ಎಂದು ಹೇಳುವುದು ಇದು ಎಂತಹ ಉವಾಚ ಶಬ್ದವಾಗುತ್ತದೆ? ಎಂಬುದಾಗಿ ನಿಮ್ಮನ್ನು ಕೇಳುತ್ತೇನೆ. ಮೊಟ್ಟಮೊದಲನೆಯದಾಗಿ ಬರಗಾಲ, ಸ್ಕೇರ್ಸಿಟಿ ಎಂದು ಅವರ ಹತ್ತಿರ ಹೋಗಬೇಕಾದರೆ you first declare that these are the villages wherein scarcity is absolutely serious. ಅದನ್ನು ಪೂರ್ತಿ ಯಾಗಿ ಸೂಟ್ ಬಿಡಿರಿ. ರೈತರಿಗೆ ಈ ರೀತಿಯಾಗಿ ಸೂಟು ಬಿಡುವಂತಹ ಅಷ್ಟು ತಹಕೂಬ್ ಹಣ ಎಷ್ಟು ಆಗುತ್ತದೆಂದು ನೀವು ತಿಳಿದುಕೊಂಡಿದ್ದೀರಿ ? ಮೂರು ತಿಂಗಳ ಪಗಾರವನ್ನು ನಿಮ್ಮ ಐ.ಎ.ಎಸ್. ಅಧಿಕಾರಿಗಳಿಗೆ ಕೊಡುತ್ತಿದ್ದೀರಿ ಆದರ ಒಂದು ಕಂತೂ ಕೂಡ ಆಗುವುದಿಲ್ಲ. ಹೆಚ್ಚು ಆದರೆ ೪ ಕೋಟಿ ಆಗುತ್ತದೆ. ಈ ನಾಲ್ಕು ಕೋಟಿ ಹಣವನ್ನು ರೈತರಿಗೆ ಸೂಟ್ ಬಿಡುವುದರಿಂದ ಏನು ಬಹಳ ಆಗ ಬಹುದು. ಹೆಂಡ ಮಾರುವವರ ರೊಕ್ಕ ಏನು ಬಾಕಿ ಇದೆ, ಅವರ ಬಾಕಿಯ ಮೇಲೆ ಬಡ್ಡಿಯನ್ನು ಹಾಕಿ ತೆಗೆದುಕೊಂಡರೂ ಅಷ್ಟು ಆಗಲಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಸರ್ಕಾರ ಕಳೆದ ಮೂರು ವರ್ಷಗಳಿಂದಲೂ ಸೂಟ್ ಬಿಟ್ಟಿದ್ದೇವೆ. ಈ ವರ್ಷವೂ ಅದೇ ರೀತಿ ಮಾಡಬೇಕಾದರೆ ಅಣೆವಾರಿ ಮಾಡಬೇಕಾಗುತ್ತದೆ. ಮುಂಗಾರಿನ ಬಗ್ಗೆ ಅಣೆವಾರಿಯಾಗಿದೆ. ಅದೇ ರೀತಿ ಹಿಂಗಾರಿಯ ಬಗ್ಗೆಯೂ ಮಾಡುವುದಕ್ಕೆ ಬರುವುದಿಲ್ಲ. ಆ ಬಗ್ಗೆ ಡಿಕ್ಲೇರ್ ಮಾಡಿಯೇ ಮಾಡುತ್ತೇವೆ. ಈ ವರ್ಷವೂ ಆ ರೀತಿ ಮಾಡಬೇಕಾದರೆ ಇನ್ನೂ ಸಮಯ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಹೇಳುವುದನ್ನು ನೋಡಿದರೆ ನನಗೆ ನೆನಪು ಬರುತ್ತದೆ. ಕಾನೂನನ್ನು ೪ ವರ್ಷದಿಂದಲೂ ತಿದ್ದಬೇಕೆ ? ಹೇಗೆ ಎಂದು If the Minister is convinsed by his tour that there is a scarcity. If the, rules are coming in the way, correct them. ನಾಳೆ ಮುಂಜಾನೆ ಇದಕ್ಕೆ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ ನಮ್ಮ ಶ್ರೀಮಂತಿ ನಾಗರತ್ನಮ್ಮನವರಿಗೆ ಹೇಳಿ ಯುನಾನಿಮಸ್ ಆಗಿ ಅಗ್ರಿ ಆಗುತ್ತೇವೆ. ರೂಲ್ಸ್ ಬಗ್ಗೆ ಹೇಳಬೇಡಿ: ರೂಲ್ಸ್ ಇರುವುದು ಜನರ ಸಲುವಾಗಿ. ರೂಲ್ಸ್ ಸಲುವಾಗಿ ಜನರಿರುವುದಲ್ಲ. ಇವತ್ತು ಮುಂಜಾನೆ ಮಾನ್ಯ ಅಧ್ಯಕ್ಷರು ಜೀರೋ ಅವರ್‌ಗೆ ಅವಕಾಶ ಕೊಟ್ಟರು. ಅವರೂ ಕೂಡ ರೂಲ್ಸ್ ಪ್ರಕಾರ ಅವಕಾಶ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಬಹುದಾಗಿತ್ತು. ಆದರೆ ಪರಿಸ್ಥಿತಿಯ ಪರಿಜ್ಞಾನದಿಂದ ಇದನ್ನು ಅಲೋ ಮಾಡಿದರು. ಆ ದೃಷ್ಟಿಯಿಂದ ಹೇಳುವುದಾದರೆ, ಮಾನ್ಯ ಬೊಮ್ಮಾಯಿಯವರು ಬುದ್ಧಿವಂತರು ಇದ್ದಾರೆ, ವಕೀಲರೂ ಕೂಡ ಆಗಿದ್ದಾರೆ. ನಿಮ್ಮನ್ನು ಹೇಳುವವರು, ಕೇಳುವವರು ಯಾರೂ ಇಲ್ಲ. ಅದೃಷ್ಟವಶಾತ್ ನಿಮಗೆ ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರ ಆಶೀರ್ವಾದ ಕೂಡ ಇದೆ. ಇಂತಹ ಸುದೈವದ ಅವಕಾಶವನ್ನು ಪಡೆದಂತಹ ನೀವು ರೂಲ್ಸನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆ? ಅಂತಹ ಬದಲಾವಣೆ ಮಾಡುವುದು ಇದ್ದರೆ ನಾಳೆ ಬೆಳಿಗ್ಗೆ ತೆಗೆದುಕೊಂಡು ಬನ್ನಿ ನಮ್ಮ ಪಕ್ಷದವರಿಗೆ ಹೇಳಿ ಯಾರೂ ತಕರಾರು ಮಾಡದ ಹಾಗೆ ಪಾಸ್ ಮಾಡಿ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಶ್ರೀಮಾನ್ ದೇವೇಗೌಡರು ಏನಾದರೂ ಕೇಳಿದ್ದೇ ಆದರೆ ಅವರ ಫಜೀತಿ ಚೆನ್ನಾಗಿ ಇರುವುದಿಲ್ಲ..........

ಶ್ರೀ ಕೆ. ಹೆಚ್. ಪಾಟೀಲ್.—ನಾನು ರಾಜಕೀಯವಾಗಿ ಮಾತನಾಡುತ್ತಿಲ್ಲ. ಶ್ರೀಮಾನ್ ಬೊಮ್ಮಾಯಿಯವರು ನಮ್ಮವರು ಎಂದು ಅವರಿಗೆ ಹೇಳಿದ್ದೇನೆ. ಮತ್ತೆ ಕ್ಯಾಟಲ್ ಕ್ಯಾಂಪ್‌ಗಾಗಿ ಹಣ ವನ್ನು ಕೇಳಿದ್ದೀರಿ. ಕ್ಯಾಟಲ್ ಕ್ಯಾಂಪನ್ನು ಮಾಡುವಂತಹದ್ದು ಹೋದ ವರ್ಷ ಅವಶ್ಯಕತೆ ಇತ್ತು. ಆದರೆ ಈ ವರ್ಷ ಆ ಪರಿಸ್ಥಿತಿ ಇಲ್ಲ. ಸುಮಾರು ಕಡೆ ಹಸಿರು ಬಂದಿದೆ. ಕ್ಯಾಟಲ್ ಕ್ಯಾಂಪ್‌ಗಾಗಿ ತೋರಿಸಿರುವಂಥ ಹಣವನ್ನು ಮನುಷ್ಯರ ಕ್ಯಾಂಪ್‌ಗಾಗಿ ತೋರಿಸಿ. ಮನುಷ್ಯರಿಗಾಗಿ ಕ್ಯಾಂಪನ್ನು ಮಾಡಬೇಕಾಗಿದೆ. ಅವನಿಗೆ ತಿನ್ನುವುದಕ್ಕೆ ಕಾಳು ಇಲ್ಲ. ಅವನಲ್ಲಿ ಪರ್ಚೇಸಿಂಗ್ ಪವರ್ರೇ ಇಲ್ಲ. ನೀವು ಗೋಧಿಯನ್ನು ತೆಗೆದುಕೊಂಡು ಹೋಗಿ ಅವನ ಮುಂದಿಟ್ಟರೂ ಅದನ್ನು ಅವನಿಗೆ ಕೊಳ್ಳುವ ಶಕ್ತಿ ಇಲ್ಲ. ಈ ಸಾರಿ ಬೀದರ್ ಹಾಗೂ ಗುಲ್ಬರ್ಗದಲ್ಲಿ ಸ್ವಲ್ಪವಾದರೂ ಹಸಿರು ಇದೆ. ಆದಕ್ಕಾಗಿ ದನಕರುಗಳಿಗಾಗಿ ಖರ್ಚು ಮಾಡುವಂತಹ ಹಣವನ್ನು ಮನುಷ್ಯರಿಗಾಗಿ ಖರ್ಚು ಮಾಡಿ. ಆದರೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಖರ್ಚು ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. ಮತ್ತೆ ೭ ಕೋಟಿ ರೂಪಾಯಿಗಳನ್ನು ದನಗಳ ಮೇವಿನ ಬ್ಯಾಂಕಿಗಾಗಿ ತೋರಿಸಿದ್ದೀರಿ. ಇದು ಸರಿಯಲ್ಲ. ಫಾಡರ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಒಂದನ್ನು ಉತ್ತರ ಕರ್ನಾಟಕ ಏರಿಯಾದಲ್ಲಿ ಮಾಡಬೇಕು. ಹಸಿರು ಫಾಡರನ್ನು ಉಂಡೆ ಮಾಡುವಂತಹ ಕಾರ್ಖಾನೆಯನ್ನು ಹಾಕಿದ್ದೀರಿ. ಅದನ್ನು ಉಪಯೋಗ ಮಾಡಿಕೊಂಡು ಎಲ್ಲೆಲ್ಲಿ ಬರ ಇದೆ ಅಲ್ಲಿಗೆ ಕಳುಹಿಸುವಂತಹ ವ್ಯವಸ್ಥೆಯಾಗಬೇಕು. ಅರಣ್ಯದಲ್ಲಿ ಉತ್ತಮವಾಗಿ ಬೆಳೆದಿರುವಂತಹ ಹಸಿರು ಹುಲ್ಲನ್ನು ಶೇಖರಿಸಿ ಅದನ್ನು ಉಂಡೆ ಮಾಡಿ ಎಲ್ಲಿಗೆ ಬೇಕಾದರೂ ಕಳುಹಿಸುವಂತಹ ವ್ಯವಸ್ಥೆ ಯಾಗಬೇಕು. ಸಾಗಾಣಿಕೆ ವೆಚ್ಚ ೧೦ ಪರ್ಸೆಂಟ್ ಮಾತ್ರ ಖರ್ಚಾಗಬಹುದು. ಇಂತಹದ್ದನ್ನು ಮಾಡಿ ಎಂದು ಹೇಳಿದರೂ ಇಲ್ಲಿಯತನಕ ಆ ಕೆಲಸವನ್ನು ಮಾಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅದು ಸರಿ ಇಲ್ಲ.

ಶ್ರೀ ಕೆ ಎಚ್. ಪಾಟೀಲ್ — ಕುರ್ಚಿಯಲ್ಲಿ ಕುಳಿತು ಕೆಲಸ ಮಾಡುವ ಆಫೀಸರ್‌ನ್ನು ಅಲ್ಲಿಗೆ ಹಾಕಿದಾರೆ ಹೇಗೆ ಕೆಲಸ ಆಗುತ್ತದೆ ? ಬಿ. ಇ. ಮೆಕ್ಯಾನಿಕ್‌ಗೆ ಅಲ್ಲಿಗೆ ಹೋಗು ಎಂದರೆ ಅಲ್ಲಿ ಹೋಗಿ ಏನೂ ಆಗುವುದಿಲ್ಲ ಎಂದು ಹೇಳುತ್ತಾನೆ. ನೀವು ಅಲ್ಲಿಗೆ ಒಬ್ಬ ಶ್ರದ್ಧೆಯ ವ್ಯಕ್ತಿ ಹಾಕಿ ಕೆಲಸ ತೆಗೆದುಕೊಳ್ಳಬೇಕು. ಮತ್ತೆ ೧೫೦ ಲಕ್ಷ ರೂಪಾಯಿಗಳ ಡ್ರಗ್ಸ್ ಬಗ್ಗೆ ಹೇಳಿದ್ದೀರಿ. ಇದನ್ನು ಎಂ. ಎಲ್. ಎ. ಗಳಿಗೆ ಕೊಡುತ್ತೀರೋ, ಮಿನಿಸ್ಟರುಗಳಿಗೆ ಕೊಡುತ್ತೀರೋ, ಮಿನಿಸ್ಟರ್ ಮನೆಯ ಆಳಿಗೆ ಕೊಡುತ್ತೀರೋ ? ಮೂರುವರೆ ಕೋಟಿ ಜನತೆಗೆ ಒಂದೂವರೆ ಕೋಟಿ ರೂಪಾಯಿಗಳ ಡ್ರಗ್ಸ್ ಏಕೆ ಬೇಕು ? ಇಷ್ಟು ಹಣ ಅದಕ್ಕಾಗಿ ಇಟ್ಟಾಗ ಅದನ್ನು ಬೇಡ ಎಂದು ನಾನು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಇದೇ ಹಣವನ್ನು ಬೇರೆಯದಕ್ಕೆ ಉಪಯೋಗ ಮಾಡಿ. ಚಿತ್ರದುರ್ಗ, ಬೀದರ್, ಗುಲ್ಬರ್ಗ, ಬಿಜಾಪುರ ಮುಂತಾದ ಕಡೆ ಈ ಹಣದಲ್ಲಿ ಸಾಯಿಲ್ ಕನ್ಸರ್ವೇಷನ್ ಕೆಲಸ ಮಾಡಿ. ಹೀಗೆ ಹೇಳುವಾಗ ನಮ್ಮ ತಾಲ್ಲೂಕಿಗೆ ನಾನು ಹೇಳುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ. ನೀವು ಗದಗ್ ತಾಲ್ಲೂಕಿಗೆ ಏನನ್ನೂ ಮಾಡಬೇಡಿ. ಕೊಡುವ ಸದ್ಗುಣ ಇರುವುದಾದರೆ ನಮಗೆ ಕುಡಿಯುವುದಕ್ಕೆ ನೀರು ಕೊಡಿ. ಕೂಳಿನ ವ್ಯವಸ್ಥೆ ನಾವು ಮಾಡಿಕೊಳ್ಳುತ್ತೇವೆ. ಇಷ್ಟು ಮಾಡು ವುದಾದರೆ ಮಾಡಿ, ಇಲ್ಲದಿದ್ದರೆ ನೀವು ಹೋಗುವವರೆಗೆ ಕಾಯುತ್ತೇವೆಂದು ದೇವರಿಗೆ ಬೇಡಿ ಕೊಳ್ಳುತ್ತೇನೆ.

ಅಧ್ಯಕ್ಷರು.— ೫೦ ನಿಮಿಷ ಆಯಿತು.

ಶ್ರೀ ಕೆ. ಎಚ್. ಪಾಟೀಲ್.— ನಿಮ್ಮ ೧೦ ಮಿನಿಟ್ ನನಗೆ ಸಾಕು. ಇಲ್ಲಿ ನಮ್ಮ ಕೋಆಪರೇಷನ್ ಮಿನಿಸ್ಟರ್ ಇದ್ದಾರೆ. ಅವರು ಸ್ಟೇಟ್ ಶೇರ್ ೧.೮೦ ಕೋಟಿ ಎಂದು ಹೇಳಿದ್ದಾರೆ. ಎಂದರೆ ಇದು ಏತಕ್ಕೆ ಸಾಲುತ್ತದೆ ? ನಮ್ಮಲ್ಲಿ ಎಷ್ಟು ಸಹಕಾರಿ ಸಂಘಗಳು ಇವೆ ಗೊತ್ತೇ ? ಇವತ್ತು ನಮಲ್ಲಿ ಇರುವ ಸುಮಾರು ೩೦ ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳಲ್ಲಿ ೧೫ ಸಾವಿರಕ್ಕೂ ಹೆಚ್ಚು ಸಂಘಗಳು ನಿಷ್ಕ್ರೀಯ ಸ್ಥಿತಿಯಲ್ಲಿವೆ, ಇವುಗಳಿಗೆ ಔಷಧಿ, ವಿಟಮಿನ್, ಇಂಜೆಕ್ಷನ್ ಆಗ ಬೇಕೆಂದು ನಾನು ಹೇಳುತ್ತೇನೆ. ಅದನ್ನು ಕೊಡುವುದಕ್ಕೆ ಈ ಹಣ ಸಾಲುವುದಿಲ್ಲ ನಾವು ಇವತ್ತು

ಸಹಕಾರ ಸಂಘಗಳನ್ನು ಬೆಳೆಸಬೇಕಾಗಿದೆ. ಈ ಬಗ್ಗೆ ತಾವು ನ್ಯಾಷನಲ್ ಕೋಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಗೆ ೫ ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿ. ನಾನೂ ಕೂಡಾ ಎನ್. ಸಿ ಡಿ. ಸಿ. ಮೆಂಬರ್ ಇದ್ದೇನೆ. ಅವರು ೫ ಕೋಟಿ ರೂಪಾಯಿಗಳನ್ನು ಕೊಟ್ಟರೆ ರಾಜ್ಯ ಸರ್ಕಾರದವರೂ ಕೂಡಾ ೫ ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ನಿಮ್ಮ ಯೋಗ್ಯತೆ ನೋಡಿ ಹೇಳಿ, ತರೋಣ. ಸಬ್ಸಿಡಿ ೫೦ ಲಕ್ಷ ಕೇಳಿದ್ದೀರಿ. ಇದು ಏಕೆ? ೫೦ ಲಕ್ಷ ಸಬ್ಸಿಡಿ ಕೊಟ್ಟರೆ ಒಂದಕ್ಕೆ ೫ ಸಾವಿರದಂತೆ ಕೊಡುತ್ತೀರಿ. ಇದು ಸಾಕೇ ? ಇವತ್ತು ಇದು ಏತಕ್ಕೂ ಆಗುವುದಿಲ್ಲ. ಇದನ್ನು ಕೆಲವರು ದುರುಪಯೋಗ ಮಾಡುತ್ತಿದ್ದಾರೆ. ಇದು ಸರಿಯಾಗಿ ಕೆಲಸ ಮಾಡುವವರಿಗೆ ಸಿಗುವುದಿಲ್ಲ. ಇದನ್ನು ಸದ್ವಿನಿಯೋಗ ಮಾಡಬೇಕು. ಇದೇ ಹಣವನ್ನು ಮಾನ್ಯ ಜೆ. ಹೆಚ್. ಪಾಟೀಲರಿಗೆ ಕೊಟ್ಟರೆ ಅವರ ಖಾತೆಯಲ್ಲಿ ಅದನ್ನು ಸದ್ವಿನಿಯೋಗ ಮಾಡಿಕೊಳ್ಳುತ್ತಾರೆ. ಹತ್ತು--ಇಪ್ಪತ್ತರಿಂದ ಯಾವುದೂ ಆಗುವುದಿಲ್ಲ. ಇದರಿಂದ ಕೆಲವು ದಿವಸ ಪ್ಲೀಸ್ ಆದಾರು ಅಷ್ಟೆ. ನಿಮಗೆ ಅವರು ಸಬ್ಸಿಡಿ ಕೊಡಿ ಎಂದು ಹೇಳಬಹುದು ಆದರೆ ಅದು ವ್ಯರ್ಥವಾಗುತ್ತದೆ. ಅದನ್ನೇ ಶೇರ್ ಆಗಿ ಕನ್ವರ್ಟ್ ಮಾಡಿ ಕೊಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಪರ್ಮನೆಂಟ್ ರಿಲೀಫ್ ಮೆಷರ್ಸ್‌ನಲ್ಲಿ ಸ್ಪ್ರಿಂಕ್ಲರ್ ಇರಿಗೇಷನ್ ಎಂದು ಹೇಳಿದ್ದಾರೆ. ರೆವಿನ್ಯೂ ಮಂತ್ರಿಗಳ ದೃಷ್ಟಿಯಲ್ಲಿ ಇದು ಒಂದು ಪರ್ಮನೆಂಟ್ ರಿಲೀಫ್‌ಮೆಷರ್. ತಾವು ವಿಚಾರ ಮಾಡಿ, ಯಾವುದು ನಿಜವಾಗಿಯೂ ಪರ್ಮನೆಂಟ್ ಮೆಜರ್ ಆಗುತ್ತದೆ ಅದನ್ನು ಮಾಡಿ. ಸಣ್ಣ ಸಣ್ಣ ನೀರಾವರಿ ಅಂದರೆ ಏತ ನೀರಾವರಿ ಯೋಜನೆಗಳನ್ನು ಮಾಡಿ. ಕೋಆಪರೇಟಿವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿ ಯಾರು ನೀರಾವರಿ ಮಾಡುತ್ತಾರೆ, ಅಥವಾ ಸರ್ಕಾರದವರೇ ಮಾಡಿ ಎಲ್ಲೆಲ್ಲಿ ಸಾಧ್ಯ ಅಂತಹ ಕಡೆಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ಮಾಡಿ. ಮಲಪ್ರಭ ಮತ್ತು ಕೃಷ್ಣ ಅಣೆಕಟ್ಟುಗಳಿಂದ ನೀರನ್ನು ಎಲ್ಲಿಯತನಕ ಎತ್ತುವುದಕ್ಕೆ ಸಾಧ್ಯವಿದೆ, ನೀರನ್ನು ಎತ್ತಿ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ. ಬಾವಿಗಳನ್ನು ಮಾಡುವಾಗ ಸಾಮೂಹಿಕ ಬಾವಿಗಳನ್ನು ಮಾಡಿ ರೈತರಿಗೆ ನೀರಾವರಿಗೆ ಅನುಕೂಲ ಮಾಡಿಕೊಡಿ. ಆ ರೀತಿ ಮಾಡಿದರೆ ಅದನ್ನು ಪರ್ಮನೆಂಟ್ ಎಂದು ಹೇಳುತ್ತಾರೆ. ಸ್ಪ್ರಿಂಕ್ಲರ್ ನೀರಾವರಿ ಯೋಜನೆಗಳನ್ನು ಮಾಡಿದರೆ ಅದು ಪರ್ಮನೆಂಟ್ ಮೆಜರ್ ಆಗುವುದಿಲ್ಲ. ಇದರಲ್ಲಿ ಏನಾಗುತ್ತದೆಂದರೆ ಯಾರು ಸ್ಪ್ರಿಂಕ್ಲರ್ಸ್ ಮ್ಯಾನುಫ್ಯಾಕ್ಚರ್ ಮಾಡುತ್ತಾರೆ ಅಂತಹವರಿಗೆ ಕೆಲವರಿಗೆ ಮಾತ್ರ ಲಾಭವಾಗುತ್ತದೆ. ನಿಮ್ಮದು ೭-೮ ಕೋಟಿ ರೂಪಾಯಿಗಳ ಯೋಜನೆ ಇದ್ದರೆ ೫-೬ ಕೋಟಿ ರೂಪಾಯಿಗಳು ಮ್ಯಾನುಫ್ಯಾಕ್ಚರ್ ಮಾಡುವವರಿಗೆ ಹೋಗುತ್ತದೆ. ಜಿಂದಾಲ್ ಅಂತಹವರಿಗೆ ಅನುಕೂಲವಾಗುತ್ತದೆ. ಸಾಯಿಲ್ ಕನ್ಸರ್ವೇಶನ್‌ಗಾಗಿ ಹಣ ಖರ್ಚು ಮಾಡಿ. ಅಪಸಲುವಾಗಿಯೇ ನೀವು ಯೋಜನೆಗಳನ್ನು ಮಾಡಿದರೆ ನನ್ನ ಅಭ್ಯಂತರವೇನೂ ಇಲ್ಲ. ಸರ್ಕಾರ ಜನತೆಯ ಬಗ್ಗೆ ಕಾಳಜಿ ವಹಿಸಿ ಪರ್ಮನೆಂಟ್ ಯೋಜನೆಗಳನ್ನು ಮಾಡಿದರೆ ಯಾರೂ ಬೇಡವೆನ್ನುವುದಿಲ್ಲ. ಜನೋಪಯುಕ್ತ ಕಾರ್ಯಕ್ರಮವನ್ನು ಹಾಕಿ ಹಣ ಖರ್ಚುಮಾಡಿ. ಹಣ್ಣು ಹಂಪಲುಗಳನ್ನು ಶೇಖರಣೆ ಮಾಡಲಿಕ್ಕೆ ಈ ತರಹ ಔದಾರ್ಯಯುತವಾದ ಕಾರ್ಯಕ್ರಮಗಳನ್ನು ಮಾಡಿ. ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಸಹಕಾರ ಸಂಘಗಳನ್ನು ಮಾಡಿ. ಮಹಿಳಾ ಸಹಕಾರ ಸಂಘಗಳನ್ನು ರಚನೆ ಮಾಡಿ ನಿಮ್ಮ ಪಕ್ಷದಲ್ಲಿರತಕ್ಕವರಿಗೆ, ನಿಮ್ಮ ಪಕ್ಷದ ಸದಸ್ಯರುಗಳನ್ನೇ ಸಹಕಾರ ಸಂಘಗಳಿಗೆ ಛೇರ್ಮನ್ ಮಾಡಿ ಸಹಕಾರ ಸಂಘಗಳಿಗೆ ಹಣ ಕೊಡಿ, ಅದು ಜನರಿಗೆ ಉಪಯುಕ್ತವಾದ ರೀತಿಯಲ್ಲಿ ಸೇವೆ ಸಲ್ಲಿಸುವಂತಾಗಲಿಯೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ತಾವು ಕೇಂದ್ರ ಸರ್ಕಾರವನ್ನು ಕೇಳಿರುವಂತಹ ಸಹಾಯ ೨೧೯ ಕೋಟಿ ರೂಪಾಯಿಗಳಾಗಬಹುದು. ೫೦ ಕೋಟಿ ರೂಪಾಯಿಗಳನ್ನು ತಕ್ಷಣ ರಿಲೀಸ್ ಮಾಡಬೇಕೆಂದು ಕೇಳಿದ್ದೀರಿ. ಈಗಾಗಲೇ ೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಕೆಲವು ಜಿಲ್ಲೆಗಳ ಚಿತ್ರವನ್ನು ಕೊಟ್ಟಿದ್ದೀರಿ. ಎಲ್ಲೆಲ್ಲಿ ಎಷ್ಟೆಷ್ಟು ಬೇಡಿಕೆಗಳು ಇವೆಯೆಂದು ಕೊಟ್ಟಿರತಕ್ಕ ಚಿತ್ರಗಳ ಅಂಕಿ ಅಂಶಗಳನ್ನು ಓದಿ ಹೇಳಿ ಅನೇಕ ಜನರ ಮನಸ್ಸನ್ನು ಕೆಡಿಸುವುದಕ್ಕೆ ಇಚ್ಛೆಪಡುವುದಿಲ್ಲ. ನೀವು ಸರ್ವಾಂಗೀಣ ವಿಚಾರವನ್ನು ಮಾಡಲಿಲ್ಲ. ತಮ್ಮನ್ನು ಅಧಿಕಾರಿಗಳು ಅಡ್ಡದಾರಿಗೆ ಎಳೆದಿದ್ದಾರೆ, ಅವರು ಯಾರು ಎಂಬುದನ್ನು ತನಿಖೆ ಮಾಡಿ, ಅನೇಕ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳ ವರದಿಯನ್ನು ಆಧಾರವಾಗಿಟ್ಟುಕೊಳ್ಳುವುದು ಸರಿಯಲ್ಲ, ಜಿಲ್ಲಾಧಿಕಾರಿ ತನ್ನ ಕೈಯಲ್ಲಿರತಕ್ಕ ಲ್ಯಾಂಡ್ ಅಕ್ವಿಜಿಶನ್ ಪೂರೈಸುವುದಕ್ಕೆ ಅಸಮರ್ಥವಾಗಿರತಕ್ಕ ಮನುಷ್ಯ ಬರಗಾಲದ ಬಗ್ಗೆ ಕೂಡಲೇ ರಿಪೋರ್ಟ್ ಕೊಡುತ್ತಾನೆಂದು ನಂಬುತ್ತೀರಾ ?

ಆ ರಿಪೋರ್ಟ್‌ಗಳನ್ನು ಆದರಿಸಿ ನೀವು ಹೇಗೆ ಕೆಲಸ ಮಾಡುತ್ತೀರಿ ? ನಿಷ್ಪಕ್ಷಪಾತವಾದ ವರದಿಯನ್ನು ಕೊಡಲಿಕ್ಕೆ ಐದು ಜನರ ಸಮಿತಿಯನ್ನು ನೇಮಕ ಮಾಡಿ. ಆ ಸಮಿತಿಯಲ್ಲಿ ನಿಮ್ಮ ಪಕ್ಷದವರನ್ನು ನೇಮಕ ಮಾಡಿ. ನಾವು ಕೂಡ ಆ ಬಗ್ಗೆ ವಿಚಾರ ಮಾಡುತ್ತೇವೆ. ಇಬ್ಬರೂ ಕೂಡಿ ಮಾಡೋಣ

ಒಟ್ಟಿನಲ್ಲಿ ಬರಗಾಲದ ಬಗ್ಗೆ ಇರತಕ್ಕ ಸತ್ಯಸಂಗತಿಗಳನ್ನು ತಯಾರು ಮಾಡೋಣ. ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ. ಇವತ್ತಿನ ದಿವಸ ಕಾಂಗ್ರೆಸ್‌ನವರು ಸಹಕಾರ ಮಾಡುವುದಿಲ್ಲವೆನ್ನುವ ಭಾವನೆ ಬೇಡ, ಇದು ಕರ್ನಾಟಕ ರಾಜ್ಯದ ಬರಗಾಲ ಬವಣೆ. ನೀವು ಇರುವುದು ಟೆಂಪರರಿ. ನಮ್ಮದು ಪರ್ಮನೆಂಟ್. ನಾವು ಬರಬೇಕಾದರೆ ನೀವು ಇರಬೇಕು. ಆದರೆ ನಾವು ಪರ್ಮನೆಂಟ್ ಕಾಂಗ್ರೆಸ್, ನೀವು ಜನತಾ ಟೆಂಪರರಿ. ಅದಕ್ಕೆ ನೀವು ಮುಂದಿನ ವಿಚಾರ ಮಾಡಬೇಕು. ಅದನ್ನು ಬಿಟ್ಟು ಹಿಂದಿನ ವಿಚಾರ ಮಾಡುವುದಲ್ಲ. ಇಂದು ನೀವು ಹೇಗೆ ಮಾಡಿದರೂ ಸಹಿತ ನಮ್ಮ ಕಲ್ಯಾಣಕ್ಕಾಗಿ ಮಾಡುತ್ತೀರಿ. ಸೀರೆ ಕೊಡಿರಿ, ತಾಳಿ ಕೊಡಿರಿ ಜನ ನಮ್ಮ ಕಡೆಗೇ ಇರುತ್ತಾರೆ. ನೀವು ಕೊಟ್ಟಂಥ ತಾಳಿಯಲ್ಲಿ ಬಂಗಾರವಿಲ್ಲ ಅದು ಗಿಲೀಟ್‌ಯೆಂದು ತಿಳಿದು ಜನ ನಮ್ಮ ಹತ್ತಿರ ಬರುತ್ತಾರೆ. ಅನೇಕ ಸಂದರ್ಭಗಳಲ್ಲಿ ನೀವು ಜನರನ್ನು ಕಳೆದುಕೊಳ್ಳುತ್ತೀರಿ. ನಾವು ಗಳಿಸುತ್ತೇವೆ. ರಾಜಕೀಯ ಜೀವನದಲ್ಲಿ ಏರಿಳಿತಗಳು ಇದ್ದೇ ಇರುತ್ತವೆ. ನೀವು ಮಾಡುವಂತಹ ಕೆಲಸವನ್ನು ಜನರು ಮೆಚ್ಚುವಂತಿರಬೇಕು. ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರನ್ನು ಜನ ಮೆಚ್ಚುತ್ತಾರೆ. ಮೊರಾರ್ಜಿದೇಸಾಯಿಯವರನ್ನು ನಾವು ಬೈಯುತ್ತೇವೆಯೇ ಏನೂ ಇಲ್ಲ. Morarji Desai is a man of constructive ideas and constructive work. ವಿರೋಧ ಪಕ್ಷದವರು ಹೇಳುವ ಹಾಗೆ ಮಾನ್ಯ ರಾಜೀವಗಾಂಧಿಯವರು ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ, ಇವತ್ತಿನದಿವಸ ಅವರು ಮಾಡಿರತಕ್ಕ ಕೆಲಸಗಳನ್ನು ಶ್ಲಾಘಿಸಬೇಕು. ಶ್ರೀಮತಿ ಇಂದಿರಾಗಾಂಧಿಯವರು ಬಡವರಿಗಾಗಿ ಜನತಾ ಮನೆಗಳನ್ನು ಕಟ್ಟಿಸಿಕೊಟ್ಟರು. ಆ ಮನೆಯಲ್ಲಿರತಕ್ಕ ಜನ ಇವತ್ತು ಸಹ ಅಮ್ಮನ ಗುಡಿಸಲುಗಳಲ್ಲಿ ಇದ್ದೇವೆಂದು ಹೇಳುತ್ತಾರೆ.

ಬೊಮ್ಮಾಯಿಯವರು ಕೊಟ್ಟರು, ರಾಮಕೃಷ್ಣ ಹೆಗಡೆಯವರು ಕೊಟ್ಟರು ಎಂದು ಹೇಳುವುದಿಲ್ಲ. ರಾಜೀವಗಾಂಧಿ ಕೊಟ್ಟರು ಎಂದು ಹೇಳುವುದಿಲ್ಲ. ಇಂದಿರಾಗಾಂಧಿಯವರು ಕೊಟ್ಟರು ಎಂದು ಹೇಳುತ್ತಾರೆ. ನಮ್ಮಲ್ಲಿರುವ ಹೆಣ್ಣುಮಕ್ಕಳನ್ನು ಕನಸಿನಲ್ಲಿ ಎದ್ದು ಕೂರಿಸಿ ಕೇಳಿದರೂ ಹಾಗೆ ಹೇಳುತ್ತಾರೆ. ಇದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಮಾಡಿದಂಥ ಕೆಲಸಕ್ಕೆ ಕೀರ್ತಿ ಆಕೆಗೆ ಸಲ್ಲಲೇಬೇಕು. ನಿಜವಾಗಿಯೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಏನೆಂದರೆ ಬರಗಾಲದ ವಿಷಯವಾಗಿ ಎಲ್ಲಾ ಪಕ್ಷಗಳ ಸಹಕಾರ ಪಡೆಯಿರಿ. ಕಾಂಗ್ರೆಸ್ ಇರಲಿ, ಸೋಶಲಿಸ್ಟ್, ಜನಸಂಘ, ಯಾವುದೇ ಇರಲಿ, ಎಲ್ಲರಿಂದಲೂ ಸಂಪೂರ್ಣವಾದ ಸಹಕಾರ ಪಡೆದು ಕರ್ನಾಟಕ ರಾಜ್ಯ ಬರದಿಂದ ಮುಕ್ತವಾಗಬೇಕು. ಇನ್ನೆಂದಿಗೂ ಬರ ಇಲ್ಲದಂತೆ ಆಗಬೇಕು. ಮಳೆಬಿದ್ದರೆ ಕರ್ನಾಟಕಕ್ಕೇ ಮೊದಲು ಬೀಳುವಂತೆ ಆಗಬೇಕು. ನಾವು ನಾಲ್ಕು ಕೋಟಿ ಜನರು ಇದ್ದೇವೆ. ಎಂಟು ಕೋಟಿ ಗಿಡಗಳನ್ನು ನೆಡಿಸಲೇಬೇಕು. ಈ ರಿಪೋರ್ಟಿನಲ್ಲಿ ಏನೂ ಇಲ್ಲ. ಇನ್ನಾದರೂ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರಿಗೆ ನಾನು ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂ. ಎ. ರಷೀದ್, ಅಡ್ವೋಕೇಟ್ ಅವರ ಮರ್ಡರ್ ಆಗಿರುವ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದರು.